ಸಂಪುಟ: 05 ಸಂಚಿಕೆ: 86 ಪುಟಗಳು: 08 ಸೋಮವಾರ 09 ಜೂನ್ 2025

www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035841833 ₹5

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**

ತಲೆ ತಪ್ಪಿಸಿಕೊಂಡು ಎಲ್ಲೋ ಬದುಕಿ ಮುದಿಯಾಗಿ ಕಾರಣವಿಲ್ಲದೆ ಸಾಯುವುದಕ್ಕಿಂತ ಸಕಾರಣವಾದ ಸಾವನ್ನು ಎದುರಿಸುವುದು ಎಷ್ಟೋ ವಾಸಿ.

## ಗೋವಿಂದರಾಜ್ ಗೇಟ್‌ಪಾಸ್ ಮಹತ್ವದ ಪ್ರಶ್ನೆ ಇಟ್ಟ ಸುನೀಲ್

• ಉದಯವಾಹಿನಿ, ಬೆಂಗಳೂರು

ಆರ್‌ಸಿಬಿ ಸಂಭ್ರಮಾಚರಣೆಯ ಸಂದರ್ಭದಲ್ಲಿ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಕಾಲ್ತುಳಿಯ ಪ್ರಕರಣಕ್ಕೆ ಸಂಬಂಧಿಸಿದಂತೆ ಇದೀಗ ರಾಜಕೀಯ ಆರೋಪ ಪ್ರತ್ಯಾರೋಪ ನಡೆಯುತ್ತಿದೆ. ಅದರಲ್ಲೂ ಸಿದ್ದರಾಮಯ್ಯ ಆಪ್ತ ಹಾಗೂ ರಾಜಕೀಯ ಕಾರ್ಯದರ್ಶಿಯಾಗಿದ್ದ ಕೆ ಗೋವಿಂದರಾಜ್ ಗೇಟ್‌ಪಾಸ್‌ಗೆ ಕಾರಣ ಏನು ಎಂಬುವುದು ಹೊರ ಬಂದರೆ ಈ ಸಾವಿನ ಮೆರವಣಿಗೆಯ ಸತ್ಯ ಹೊರ ಬೀಳುತ್ತದೆ ಎಂದು ಬಿಜೆಪಿ ಶಾಸಕ ಸುನೀಲ್ ಕುಮಾರ್ ಹೇಳಿದ್ದಾರೆ. ಈ ಕುರಿತಾಗಿ ಸರಣಿ ಟ್ವೀಟ್ ಮಾಡಿರುವ ಅವರು ಸಿದ್ದರಾಮಯ್ಯ ಅವರ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ. ನಿಮ್ಮ ಸಯಾಮಿ ಯಂತೆ ಸದಾ ಅಂಟಿಕೊಂಡೇ ಇರುತ್ತಿದ್ದ ಕೆ.ಗೋವಿಂದರಾಜ್ ಅವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ರಾಜಕೀಯ ಕಾರ್ಯದರ್ಶಿ ಸ್ಥಾನದಿಂದ ಬಿಡುಗಡೆಗೊಳಿಸಿದ್ದೇಕೆ ಎಂದು ಅವರು ಪ್ರಶ್ನಿಸಿದ್ದಾರೆ. ಗೋವಿಂದರಾಜ್ ಕೊಟ್ಟ ಸಲಹೆ ಆಧರಿಸಿ ಈ ಕಾರ್ಯಕ್ರಮ ನಡೆದಿದೆ ಎಂದಾದರೆ ಅದಕ್ಕೆ ನೀವೇ ಹೊಣೆಗಾರರಾಗುತ್ತೀರಿ ಎಂಬ ಭಯಕ್ಕಾ ನಿಮ್ಮ ಪಕ್ಕದಲ್ಲೇ ಕುಳಿತು ಈ ನರಹತ್ಯೆಯ ಚಿತ್ರಕತೆ ಬರೆದರೆಂಬ ಕಾರಣಕ್ಕಾ ಸಾಲು ಸಾಲು ಹೆಣಗಳು ಬಿದ್ದ ಮೇಲೂ ಮಸಾಲೆ ದೋಸೆ ಮೆಲ್ಲುವುದಕ್ಕೆ ಕರೆದೊಯ್ದರು ಎಂಬ ಕಾರಣಕ್ಕೋ ಅಥವಾ ಇದೆಲ್ಲ ಮೀರಿದ ಉನ್ನತ ಸಲಹೆಗಾಗಿಯೋ ಎಂದು ಪ್ರಶ್ನೆ ಮಾಡಿದ್ದಾರೆ.

## 2026ರಿಂದ ತಮಿಳುನಾಡಿನಲ್ಲಿ ಬಿಜೆಪಿ ಆಳ್ವಿಕೆ ಖಚಿತ!: ಶಾ

• ಉದಯವಾಹಿನಿ, ಬೆಂಗಳೂರು

2026ರ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ನೇತೃತ್ವದ ಮೈತ್ರಿಕೂಟ ತಮಿಳುನಾಡಿನಲ್ಲಿ ಸರ್ಕಾರ ರಚಿಸಲಿದೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಘೋಷಿಸಿದ್ದಾರೆ. ತಮಿಳುನಾಡಿಗೆ ಭೇಟಿ ನೀಡಿದ ಅಮಿತ್ ಶಾ ಮಧುರೈನಲ್ಲಿ ಮಾತನಾಡುತ್ತಾ, ತಮಿಳುನಾಡು ಮತ್ತು ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಮತ್ತೆ ಅಧಿಕಾರಕ್ಕೆ ಬರಲಿದೆ ಎಂದು ಭವಿಷ್ಯ ನುಡಿದಿದ್ದಾರೆ. ಡಿಎಂಕೆ ಸರ್ಕಾರದ ಭ್ರಷ್ಟಾಚಾರವನ್ನು ಟೀಕಿಸಿರುವ ಅಮಿತ್ ಶಾ, ಕೇಂದ್ರ ಸರ್ಕಾರವು ತಮಿಳುನಾಡಿಗೆ ನೀಡುತ್ತಿರುವ ಅನುದಾನವನ್ನು ಡಿಎಂಕೆ ಸರ್ಕಾರ ದುರುಪಯೋಗಪಡಿಸಿಕೊಳ್ಳುತ್ತಿದೆ ಎಂದು ಆರೋಪಿಸಿದರು. ತಮಿಳುನಾಡಿನಲ್ಲಿ ಭರ್ಜರಿ ಭಾಷಣ ಮಾಡಿರುವ ಅಮಿತ್ ಶಾ, 2026ರ ಚುನಾವಣೆಯಲ್ಲಿ ಬಿಜೆಪಿ ಸರ್ಕಾರ ರಚನೆ ಖಚಿತ. ತಮಿಳುನಾಡಿನ ಜನರು ಭ್ರಷ್ಟ ಡಿಎಂಕೆ ಸರ್ಕಾರವನ್ನು ಕಿತ್ತೊಗೆಯಲು ಕಾಯುತ್ತಿದ್ದಾರೆ. ನನ್ನ ಕಣ್ಣು ಮತ್ತು ಕಿವಿ ತಮಿಳುನಾಡಿನ ಮೇಲಿದೆ? ಎಂದು ಹೇಳಿದ್ದಾರೆ.

## ಕೆನಾಲ್ ಪ್ರತಿಭಟನೆ: ಎಫ್‌ಐಆರ್‌ನಿಂದ ಸ್ವಾಮೀಜಿಗಳ ಹೆಸರು ವಾಪಸ್

• ಉದಯವಾಹಿನಿ, ತುಮಕೂರು

ಹೇಮಾವತಿ ಎಕ್ಸ್‌ಪ್ರೆಸ್ ಲಿಂಕ್ ಕೆನಾಲ್ ವಿರೋಧಿಸಿ ಮೇ 31ರಂದು ನಡೆದ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ಸ್ವಾಮೀಜಿಗಳ ಮೇಲಿನ ಎಫ್‌ಐಆರ್ ಹಿಂಪಡೆಯುವಂತೆ ತಿಳಿಸಿರುವುದಾಗಿ ಗೃಹ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರೂ ಆಗಿರುವ ಡಾ.ಜಿ.ಪರಮೇಶ್ವರ್ ತಿಳಿಸಿದರು. ಸ್ವಾಮೀಜಿಗಳನ್ನು ಎಫ್‌ಐಆರ್‌ನಲ್ಲಿ ಸೇರಿಸುವುದು ಬೇಡ. ಸ್ವಾಮೀಜಿಗಳು ಅಲ್ವಾ, ಅವರಿಗೆ ಗೌರವ ಕೊಡುವಂತಹ ಕೆಲಸ ಮಾಡಬೇಕಾಗುತ್ತದೆ. ಹೋರಾಟಕ್ಕೆ ಕರೆದಿದ್ದಾರೆ, ಹೋಗಿದ್ದಾರೆ. ಆದ್ದರಿಂದ ಅದನ್ನು ಪರಿಶೀಲನೆ ಮಾಡಿ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ತಿಳಿಸಿದ್ದೇನೆ ಎಂದರು. ಪೊಲೀಸರ ಬಳಿ ಸಿಸಿಟಿವಿ ವಿಡಿಯೋ ಇದೆ. ಪರಿಶೀಲಿಸಿ ಯಾರು ಕಾನೂನು ವಿರುದ್ಧ ನಡೆದುಕೊಂಡಿದ್ದಾರೋ ಅವರ ಮೇಲೆ ಕ್ರಮ ಕೈಗೊಳ್ಳುತ್ತಾರೆಂದು ಪರಮೇಶ್ವರ್ ಸ್ಪಷ್ಟಪಡಿಸಿದರು. ಹೇಮಾವತಿ ಲಿಂಕ್ ಕೆನಾಲ್ ವಿರೋಧಿಸಿ ಹೋರಾಟ ನಡೆಸುತ್ತಿರುವವರು ನಮ್ಮ ಜತೆ ಮಾತನಾಡಿ ಅಂತ ಕೇಳಿದ್ದಾರೆಂದು ಗೃಹ ಸಚಿವರು ಹೇಳಿದರು.

## ಚಾಮರಾಜನಗರದಲ್ಲಿ ಶೀಘ್ರದಲ್ಲಿ ಕಾನೂನು ಕಾಲೇಜು ಆರಂಭ

• ಉದಯವಾಹಿನಿ, ಚಾಮರಾಜನಗರ

ಜಿಲ್ಲೆಯಾಗಿ ಬರೋಬ್ಬರಿ 28 ವರ್ಷಗಳ ನಂತರ ಸರ್ಕಾರಿ ಕಾನೂನು ಕಾಲೇಜು ಆರಂಭಕ್ಕೆ ಭಾರತೀಯ ವಕೀಲ ಪರಿಷತ್ ಹಸಿರು ನಿಶಾನೆ ತೋರಿದೆ. ಇದರೊಂದಿಗೆ ಕಾನೂನು ಪದವಿ ವ್ಯಾಸಂಗಕ್ಕೆ ದೂರದ ಮೈಸೂರು ಮತ್ತು ಬೆಂಗಳೂರು ಜಿಲ್ಲೆಗಳಿಗೆ ಹೋಗಬೇಕಿದ್ದ ಚಾಮರಾಜನಗರ ಜಿಲ್ಲೆಯ ವಿದ್ಯಾರ್ಥಿಗಳಿಗೆ ಅತ್ಯಂತ ಕಡಿಮೆ ಶುಲ್ಕದೊಂದಿಗೆ ಕಾನೂನು ಪದವಿ ವ್ಯಾಸಂಗ ಮಾಡುವ ಅವಕಾಶ ದೊರೆತಂತಾಗಿದೆ. 1997 ರಲ್ಲಿ ಪ್ರತ್ಯೇಕ ಜಿಲ್ಲೆಯಾದ ಚಾಮರಾಜನಗರದಲ್ಲಿ ಇದುವರೆಗೂ ಕಾನೂನು ಕಾಲೇಜು ಇರಲಿಲ್ಲ. ಇಲ್ಲಿ ಪ್ರತ್ಯೇಕ ವಿಶ್ವವಿದ್ಯಾಲಯ, ಮೆಡಿಕಲ್ ಕಾಲೇಜು, ಇಂಜಿನಿಯರಿಂಗ್ ಕಾಲೇಜು ಇದೆ. ಆದರೆ ಕಾನೂನು ಪದವಿ ವ್ಯಾಸಂಗ ಮಾಡಲು ಇಲ್ಲಿನ ವಿದ್ಯಾರ್ಥಿಗಳು ದೂರದ ಮೈಸೂರು, ಬೆಂಗಳೂರು ಜಿಲ್ಲೆಗಳಿಗೆ ಹೋಗುವ ಅನಿವಾರ್ಯತೆ ಇತ್ತು. ಖಾಸಗಿ ಕಾನೂನು ಕಾಲೇಜುಗಳಲ್ಲಿ ಲಕ್ಷಾಂತರ ರೂಪಾಯಿ ಶುಲ್ಕ ಇರುವುದರಿಂದ ಎಷ್ಟೋ ಮಂದಿ ವಿದ್ಯಾರ್ಥಿಗಳು ಕಾನೂನು ಪದವಿ ವ್ಯಾಸಂಗದಿಂದ ವಂಚಿತರಾಗುತ್ತಿದ್ದರು.

RCB ಸಂಭ್ರಮಾಚರಣೆ ವೇಳೆ ಬೆಂಗಳೂರಿನ ಎಂ.ಚಿನ್ನಸ್ವಾಮಿ ಕ್ರೀಡಾಂಗಣದ ಹೊರಗೆ ಸಂಭವಿಸಿದ ಕಾಲ್ತುಳಿತದಲ್ಲಿ 11 ಜನರು ಸಾವಿಗೀಡಾಗಿದ್ದು , ಈ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿಕೆಶಿವಕುಮಾರ್ ರಾಜೀನಾಮೆ ನೀಡಬೇಕೆಂದು ಒತ್ತಾಯಿಸಿ ಕರ್ನಾಟಕ ಬಿಜೆಪಿ ಶಾಸಕರು ಮತ್ತು ಸಂಸದರು ಪ್ರತಿಭಟನೆ ನಡೆಸಿದರು. ವಿಧಾನಸೌಧದ ಆವರಣದಲ್ಲಿರುವ ಮಹಾತ್ಮಗಾಂಧಿ ಪ್ರತಿಮೆಯ ಮುಂದೆ ನಡೆದ ಪ್ರತಿಭಟನೆಯ ನೇತೃತ್ವವನ್ನು ವಿಧಾನಸಭೆ ಮತ್ತು ಪರಿಷತ್ತಿನ ವಿರೋಧ ಪಕ್ಷದ ನಾಯಕರಾದ ಆರ್ ಅಶೋಕ ಮತ್ತು ಛಲವಾದಿ ನಾರಾಯಣಸ್ವಾಮಿ ವಹಿಸಿದ್ದರು

# ಬಿಡದ ಬಿಜೆಪಿ ಪಟ್ಟು ಸಿಎಂ ಡಿಸಿಎಂಗೆ ಇಕ್ಕಟ್ಟು



**ಸಿಎಂ ಡಿಸಿಎಂ ರಾಜೀನಾಮೆಗೆ ಪಟ್ಟು**

1 ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಕಾಲ್ತುಳಿತ ಪ್ರಕರಣದಲ್ಲಿ 11 ಮಂದಿಯ ಸಾವು

2 ಸರ್ಕಾರದ ವಿರುದ್ಧ ಜನಾಭಿಪ್ರಾಯವನ್ನು ರೂಪಿಸಲು ಬಿಜೆಪಿ ಪ್ರಯತ್ನ

3 ಘಟನೆಯಿಂದ ಸಿದ್ದರಾಮಯ್ಯ ಅವರ ವರ್ಚಸ್ಸಿಗೂ ವೈಯಕ್ತಿಕವಾಗಿ ಧಕ್ಕೆ

• ಉದಯವಾಹಿನಿ, ಬೆಂಗಳೂರು

ಈ ದುರಂತಕ್ಕೆ ಇಬ್ಬರು ಹಿರಿಯ ಕಾಂಗ್ರೆಸ್ ನಾಯಕರನ್ನೇ ನೇರ ಹೊಣೆಗಾರರನ್ನಾಗಿ ಮಾಡಿ, ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕೆಂದು ಬಿಜೆಪಿ ನಾಯಕರು ಒತ್ತಾಯಿಸಿದರು. ಫಲಕಗಳನ್ನು ಹಿಡಿದು ಘೋಷಣೆಗಳನ್ನು ಕೂಗುತ್ತಾ, ಪ್ರತಿಭಟನಾಕಾರರು ಸರ್ಕಾರದ ನಿರ್ಲಕ್ಷ್ಯವೇ ಸಾವಿಗೆ ಕಾರಣ ಎಂದು ಆರೋಪಿಸಿದರು. ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ಕೊಲೆಗಡುಕರು ಎಂದು ಘೋಷಣೆಗಳನ್ನು ಕೂಗಲಾಯಿತು. ಘಟನೆಯಲ್ಲಿ ಮಧ್ಯ ಪ್ರವೇಶಿಸಬೇಕು ಮತ್ತು ಸರ್ಕಾರ ವಜಾಗೊಳಿಸಬೇಕು ಎಂದು ಒತ್ತಾಯಿಸಿ ಬಿಜೆಪಿ ನಾಯಕರು ಶೀಘ್ರದಲ್ಲೇ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರನ್ನು ಭೇಟಿ ಮಾಡಲು ಯೋಜಿಸುತ್ತಿದ್ದಾರೆ.

ಜೂ.4ರಂದು ಚಿನ್ನಸ್ವಾಮಿ ಕ್ರೀಡಾಂಗಣದ ಮುಂದೆ ಕಾಲ್ತುಳಿತ ಸಂಭವಿಸಿತು. ಆರ್‌ಸಿಬಿ ತಂಡದ ಐಪಿಎಲ್ ವಿಜಯೋತ್ಸವದಲ್ಲಿ ಭಾಗವಹಿಸಲು ಹೆಚ್ಚಿನ ಸಂಖ್ಯೆಯ ಜನರು ಸೇರಿದ್ದರು. ಘಟನೆಯಲ್ಲಿ ಹನ್ನೊಂದು ಜನರು ಸಾವಿಗೀಡಾದರು ಮತ್ತು 56 ಜನರು ಗಾಯಗೊಂಡರು. ಪ್ರತಿಭಟನೆ ಸಂದರ್ಭದಲ್ಲಿ ಮಾತನಾಡಿದ ಅಶೋಕ, ಉದ್ಯಮಿ ವಿಜಯ್ ಮಲ್ಯ ಈ ಹಿಂದೆ ಆರ್‌ಸಿಬಿ ತಂಡವನ್ನು ಪ್ರಾರಂಭಿಸಿದ್ದರು, ಅದು ರಾಯಲ್ ಚಾಲೆಂಜರ್ಸ್ ಬೆಂಗಳೂರು. ಆದರೆ, ಸಿಎಂ ಮತ್ತು ಉಪಮುಖ್ಯಮಂತ್ರಿ ಹೊಸ ಆರ್‌ಸಿಬಿ ಆಗಿದ್ದಾರೆ ಎಂದು ಹೇಳಿದರು. ಘಟನೆಗೆ ಸಂಬಂಧಿಸಿದಂತೆ ಆಗಿನ ಬೆಂಗಳೂರು ಪೊಲೀಸ್ ಆಯುಕ್ತ ಬಿ.ದಯಾನಂದ ಸೇರಿದಂತೆ ಐವರು ಪೊಲೀಸ್ ಅಧಿಕಾರಿಗಳನ್ನು ಅಮಾನತುಗೊಳಿಸಿದ್ದಕ್ಕಾಗಿ ಸರ್ಕಾರವನ್ನು ಟೀಕಿಸಿದ ಅಶೋಕ, ಬಿಜೆಪಿ ಪೊಲೀಸರೊಂದಿಗೆ ನಿಂತಿದೆ ಮತ್ತು ಪೊಲೀಸರ ಯಾವುದೇ ತಪ್ಪಿಲ್ಲದ ಕಾರಣ ಅವರ ಪರವಾಗಿ ಹೋರಾಡುತ್ತದೆ ಎಂದು ಹೇಳಿದರು. ಪೊಲೀಸರು ಅನುಮತಿ ನಿರಾಕರಿಸಿದ್ದರೂ ವಿಜಯೋತ್ಸವ ಆಚರಿಸಲಾಗಿದೆ.

ಹನ್ನೊಂದು ಜೀವಗಳ ನಷ್ಟವು ಸರ್ಕಾರಿ ಪ್ರಾಯೋಜಿತ ಕೊಲೆಯಾಗಿದೆ ಹೊರತು ಬೇರೇನು ಅಲ್ಲ. ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿ ಸೇರಿದಂತೆ ಅಧಿಕಾರದಲ್ಲಿರುವವರು ಹನ್ನೊಂದು ಜನರ ಮೃತದೇಹಗಳ ಮೇಲೆ ರಾಜ್ಯವನ್ನು ಆಳಲು ಸಾಧ್ಯವಿಲ್ಲ. ನಿಮಗೆ ಯಾವುದೇ ನೈತಿಕ ಹಕ್ಕಿಲ್ಲ, ನೀವು ಅದನ್ನು ಕಳೆದುಕೊಂಡಿದ್ದೀರಿ. ಕಾನೂನಿನ ದೃಷ್ಟಿಯಲ್ಲಿ ನಿಮ್ಮ ಮೇಲೆ ಆರೋಪವಿದೆ ಎಂದರು. ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ಆರ್‌ಸಿಬಿಯ ಬ್ರಾಂಡ್ ಅಂಬಾಸಿಡರ್‌ಗಳಂತೆ ವರ್ತಿಸಿದರು. ಸಾವುನೋವುಗಳ ಹೊರತಾಗಿಯೂ ವಿಜಯೋತ್ಸವ ಕಾರ್ಯಕ್ರಮಗಳನ್ನು ನಡೆಸಲಾಯಿತು ಎಂದು ದೂರಿದರು.

### ಕುಮಾರ್ ಬಂಗಾರಪ್ಪ ಕಿಡಿ

ಇದೇ ವೇಳೆ ಮಾತಾಡಿದ ಮಾಜಿ ಸಚಿವ ಕುಮಾರ್ ಬಂಗಾರಪ್ಪ, ಕರ್ನಾಟಕ ರಾಜ್ಯಕ್ಕೆ ಮಸಿ ಬಳಿಯುವ ಕೆಲಸ ಮಾಡಲಾಗಿದೆ. ಪೊಲೀಸ್ ಅಧಿಕಾರಿಗಳ ಸಸ್ಪೆಂಡ್ ಸರಿಯಲ್ಲ. ಪೊಲೀಸ್ ಇಲಾಖೆ ಮೇಲೆ ಹಾಕಿ, ಆಮೇಲೆ ಗೋವಿಂದರಾಜು ಅವರನ್ನ ಸಸ್ಪೆಂಡ್ ಮಾಡಲಾಗಿದೆ. ಇದಕ್ಕೆ ಸರ್ಕಾರವೇ ನೇರ ಹೊಣೆ ಎಂದ್ರು.

### ಬಿಜೆಪಿಯಿಂದ ಪರಿಹಾರ ಘೋಷಣೆ

ಕಾಲ್ತುಳಿತದಿಂದ ಸಾವನ್ನಪ್ಪಿದ 11 ಮಂದಿಗೆ ಬಿಜೆಪಿಯಿಂದ ಪರಿಹಾರ ಘೋಷಣೆ ಮಾಡಲಾಗಿದೆ. ಒಂದು ತಿಂಗಳ ವೇತನ ನೀಡಲು ಬಿಜೆಪಿ ಶಾಸಕರು ನಿರ್ಧರಿಸಿದ್ದಾರೆ. ಬಿಜೆಪಿ ಎಂಎಲ್‌ಎ, ಎಂಎಲ್‌ಸಿಗಳ ಒಂದು ತಿಂಗಳ ವೇತನವನ್ನು ಕ್ರೋಢೀಕರಿಸಿ ಮೃತ ಕುಟುಂಬಗಳಿಗೆ ಹಂಚುವುದಾಗಿ ಬಿಜೆಪಿ ನಾಯಕರು ಘೋಷಣೆ ಮಾಡಿದ್ದಾರೆ. 11 ಮಂದಿಯ ಸಾವಿಗೆ ಕಾರಣವಾಗಿರುವ ಈ ಸರ್ಕಾರವನ್ನೇ ವಜಾಗೊಳಿಸುವಂತೆ ಆಗ್ರಹಿಸಿ ರಾಜ್ಯರಾಜ್ಯಪಾಲರಿಗೆ ದೂರು ನೀಡುವುದಾಗಿ ಬಿಜೆಪಿ ಹಿರಿಯ ನಾಯಕ ಆರ್, ಅಶೋಕ್ ಹೇಳಿದ್ದಾರೆ. ಇದೇ ವೇಳೆ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿಕೆಶಿವಕುಮಾರ್ ರಾಜೀನಾಮೆ ನೀಡಲೇಬೇಕು ಎಂದಿದ್ದಾರೆ.

### ಸಿಎಂ, ಡಿಸಿಎಂ ರಾಜೀನಾಮೆ ಕೊಡಲೇಬೇಕು

ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿಕೆ ಶಿವಕುಮಾರ್ ಗೌರವದಿಂದ ರಾಜೀನಾಮೆ ಕೊಡಬೇಕು ಎಂದು ಗೋವಿಂದ ಕಾರಜೋಳ ಕಿಡಿಕಾರಿದ್ದಾರೆ. ಇದು ನುಡಿದಂತೆ ನಡೆದ ಸರ್ಕಾರ ಅಲ್ಲ. ಹಾಡಹಗಲೇ ವಸೂಲಿ ಮಾಡ್ತೀರಿ, ಮುಡಾದಲ್ಲಿ ಸಿಎಂ ಕುಟುಂಬ ಸಿಕ್ಕಿಕೊಂಡಿದೆ. ಒಂದ-ಎರಡ, ನಿಮ್ದು ಸಾಲು ಸಾಲು ಹಗರಣ. ಈಗ 11 ಜನರ ಸಾವು. ಡಿಸಿಪಿ ಪತ್ರ ಬರೆದು ಸಿಬ್ಬಂದಿ ಕೊರತೆ ಇದೆ ಅಂದ್ರೂ ಕಾರ್ಯಕ್ರಮ ಮಾಡಿದ್ರಿ.. ಯಾಕೆ, ಯಾರನ್ನು ಮೆಚ್ಚಿಸಲು ಮಾಡಿದ್ರಿ ಎಂದು ಕಾರಜೋಳ ಕಿಡಿಕಾರಿದ್ರು.

### ಕೊಲೆಗಡುಕ ಸರ್ಕಾರ

ತಾನು ಕಪ್ ಎತ್ತುವ ಭರದಲ್ಲಿ ಹನ್ನೊಂದು ಮಂದಿಯನ್ನು ಸರ್ಕಾರ ಬಲಿ ಪಡೆದಿದೆ. ಇದು ಕೊಲೆಗಡುಕ ಸರ್ಕಾರ ಎಂದು ಆರ್ ಅಶೋಕ್ ಕಿಡಿಕಾರಿದ್ದಾರೆ. ಯುದ್ಧ ಗೆದ್ದು ಜಯಭೇರಿ ಬಾರಿಸುವ ಸಂದರ್ಭದಲ್ಲಿ ನಮ್ಮ ಯೋಧರಿಗೆ ಗೌರವ ಸಲ್ಲಿಸಿದ್ರೆ ಸರಿ ಎನ್ನಬಹುದಿತ್ತು. ಎರಡು ಪವರ್ ಸೆಂಟರ್‌ಗಳ ತಿಕ್ಕಾಟ ಇಲ್ಲದಿದ್ರೆ ಈ ಸಾವಿನ ಸಂದರ್ಭ ಬರುತ್ತಿರಲಿಲ್ಲ. ಇವರ ತಿಕ್ಕಾಟದಿಂದ ಅಮಾಯಕ ವಿದ್ಯಾರ್ಥಿಗಳು ಬಲಿಯಾಗ್ತಿದ್ದಾರೆ ಎಂದು ಆರ್ ಅಶೋಕ್ ವಾಗ್ದಾಳಿ ನಡೆಸಿದ್ರು.




# ಕಾಲ್ತುಳಿತ ಪ್ರಕರಣದಲ್ಲಿ ಸರ್ಕಾರದ ತಪ್ಪಿಲ್ಲ

• ಉದಯವಾಹಿನಿ, ಮೈಸೂರು

ಬೆಂಗಳೂರು ಕಾಲ್ತುಳಿತ ಪ್ರಕರಣದಲ್ಲಿ ರಾಜ್ಯ ಸರ್ಕಾರದ್ದು ಯಾವುದೇ ತಪ್ಪಿಲ್ಲ. ಈ ವಿಚಾರದಲ್ಲಿ ಬಿಜೆಪಿ–ಜೆಡಿಎಸ್ ರಾಜಕೀಯವಾಗಿ ಆರೋಪ ಮಾಡುತ್ತಿವೆ ಎಂದು ಸಿಎಂ ಸಿದ್ದರಾಮಯ್ಯ ಅಸಮಾಧಾನ ವ್ಯಕ್ತಪಡಿಸಿದರು. ಪ್ರಕರಣದಲ್ಲಿ ಮೇಲ್ನೋಟಕ್ಕೆ ಯಾರ್ಯಾರ ಲೋಪ ಇದೆಯೋ ಅವರ ಮೇಲೆ ಕ್ರಮ ಜರುಗಿಸಲಾಗಿದೆ. ವಿರೋಧಪಕ್ಷಗಳ ಬೇಡಿಕೆಯಂತೆ ನ್ಯಾಯಾಂಗ ತನಿಖೆಗೆ ಆದೇಶಿಸಿದ್ದೇನೆ. ಯಾರ ಮೇಲೂ ಏಕಮುಖವಾಗಿ ಕ್ರಮ ಕೈಗೊಂಡಿಲ್ಲ ಎಂದರು. ಕಾರ್ಯಕ್ರಮದ ಬಂದೋಬಸ್ತ್ ಬಗ್ಗೆ ಬೆಂಗಳೂರು ಪೊಲೀಸ್ ಆಯುಕ್ತರು ನನಗೆ ಮಾಹಿತಿ ನೀಡಿರಲಿಲ್ಲ. ಅದು ಪೊಲೀಸರ ಲೋಪ.



**ಸಿಎಂ ಸಮರ್ಥನೆ**

ಕೇವಲ ಪೊಲೀಸ್ ಆಯುಕ್ತರನ್ನು ಮಾತ್ರ ಅಮಾನತು ಮಾಡಿಲ್ಲ, ಐವರು ಹಿರಿಯ ಅಧಿಕಾರಿಗಳನ್ನು ಅಮಾನತು ಮಾಡಿದ್ದು, ಗುಪ್ತಚರ ವಿಭಾಗದವರನ್ನು ವರ್ಗಾವಣೆ ಮಾಡಿದ್ದೇವೆ.

ಗೋವಿಂದರಾಜು ಅವರನ್ನು ರಾಜಕೀಯ ಕಾರ್ಯದರ್ಶಿ ಹುದ್ದೆಯಿಂದ ತೆಗೆಯಲಾಗಿದೆ ಎಂದರು. ಕಾರ್ಯಕ್ರಮ ಸಂಬಂಧ ಕೆಎಸ್‌ಸಿಎ ಕಾರ್ಯದರ್ಶಿ ಹಾಗೂ ಖಜಾಂಚಿ ನನ್ನನ್ನು ಆಹ್ವಾನಿಸಿದ್ದರು. ವಿಧಾನಸೌಧದ ಎದುರಿಗೆ ನಡೆದ ಕಾರ್ಯಕ್ರಮಕ್ಕೆ ಅನುಮತಿ ನೀಡಿ ಎಂದು ಅಧಿಕಾರಿಗಳಿಗೆ ಹೇಳಿದ್ದೆ. ಅದರಲ್ಲಿ ರಾಜ್ಯಪಾಲರೂ ಪಾಲ್ಗೊಂಡಿದ್ದರು. ಅಲ್ಲಿ ಯಾವುದೇ ಲೋಪ ಆಗಿಲ್ಲ. ಆದರೆ, ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಕಾಲ್ತುಳಿತ ಸಂಭವಿಸಿದ್ದು, ಅಲ್ಲಿ ಭದ್ರತಾ ಲೋಪ ಎಸಗಿದ ಪೊಲೀಸರ ಮೇಲೆ ಕ್ರಮ ಜರುಗಿಸಲಾಗಿದೆ. ಮಧ್ಯಾಹ್ನ 3.50ಕ್ಕೆ ಕಾಲ್ತುಳಿತದಿಂದ ಸತ್ತದ್ದು ವರದಿಯಾಗಿದ್ದರೂ, ನನಗೆ ಸಂಜೆ 5.45ಕ್ಕೆ ಮಾಹಿತಿ ತಿಳಿಯಿತು ಎಂದರು. ಬಿಜೆಪಿಯವರೇ ಆಟಗಾರರ ಮೆರವಣಿಗೆಗೆ ಅನುಮತಿ ನೀಡುವಂತೆ ಕೋರಿ ಪತ್ರ ಬರೆದಿದ್ದರು. ಈಗ ಉಲ್ಟಾ ಹೊಡೆದಿದ್ದಾರೆ. ವಿಧಾನಸೌಧದ ಮುಂಭಾಗ ಮಾಡಿ ಎಂದು ನಾನು ಹೇಳದೇ ಹೋಗಿದ್ದರೆ ಬಿಜೆಪಿಯವರು ಬೇರೆಯದ್ದೇ ಬಣ್ಣ ಕಟ್ಟುತ್ತಿದ್ದರು ಎಂದು ಬಿಜೆಪಿ ಕರ್ನಾಟಕ ಮಾಡಿದ್ದ ಎಕ್ಸ್ ಪೋಸ್ಟ್ ಪ್ರದರ್ಶಿಸಿದರು.

### ಮೋದಿ ರಾಜೀನಾಮೆ ಕೊಟ್ಟರಾ

ಕುಂಭಮೇಳದಲ್ಲಿ 50-60 ಜನ ಸತ್ತಾಗ ಯಾರಾದರೂ ಮೋದಿ ರಾಜೀನಾಮೆ ಕೇಳಿದ್ದರಾ ಅವರು ಕೊಟ್ಟರಾ ಸೇತುವೆ ಬಿದ್ದು ನೂರಾರು ಮಂದಿ ಸತ್ತು ಹೋದರಲ್ಲಾ, ಆಗ ರಾಜೀನಾಮೆ ಕೇಳಿದರಾ ಬಿಜೆಪಿಯವರು ಕೇವಲ ರಾಜಕೀಯ ಉದ್ದೇಶಕ್ಕೆ ಸುಳ್ಳು ಆರೋಪ ಮಾಡುತ್ತಿದ್ದಾರೆ ಎಂದರು.

# ಬಿಹಾರ ಚುನಾವಣೆಗೂ ಮುನ್ನ ಸೋಲೊಪ್ಪಿಕೊಂಡ ರಾಹುಲ್

**• ಮ್ಯಾಚ್ ಫಿಕ್ಸಿಂಗ್ ಹೇಳಿಕೆಗೆ ಫಡ್ನವೀಸ್ ಲೇವಡಿ • ದೇಶದಲ್ಲಿ ಜನರಿಗೆ ತಪ್ಪು ಮಾಹಿತಿ ನೀಡುತ್ತಿದ್ದಾರೆ**

• ಉದಯವಾಹಿನಿ, ಮುಂಬೈ

ಮಹಾರಾಷ್ಟ್ರ ಚುನಾವಣಾ ಫಲಿತಾಂಶ ಮ್ಯಾಚ್ ಫಿಕ್ಸಿಂಗ್, ಬಿಹಾರ ಚುನಾವಣೆಯಲ್ಲೂ ಇದೇ ಪುನಾರವರ್ತಿಸಬಹುದು ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹೇಳಿಕೆಗೆ ಮಹಾರಾಷ್ಟ್ರ ಮುಖ್ಯಮಂತ್ರಿ, ದೇವೇಂದ್ರ ಫಡ್ನವೀಸ್ ತಿರುಗೇಟು ನೀಡಿದ್ದಾರೆ.

ಬಿಹಾರ ವಿಧಾನಸಭೆ ಚುನಾವಣೆ ಹತ್ತಿರವಾಗುತ್ತಿದ್ದಂತೆ, ಮಹಾರಾಷ್ಟ್ರದ ಚುನಾವಣೆ ಬಗ್ಗೆ ಮಾತನಾಡಿದ್ದಾರೆ. ಇದರಿಂದಾಗಿ ಅವರು ಯುದ್ಧಕ್ಕೆ ಮುಂಚೆಯೇ ಸೋಲು ಒಪ್ಪಿಕೊಂಡಂತೆ ಆಗಿದೆ. ಅಂದರೆ ಬಿಹಾರ ವಿಧಾನಸಭೆ ಚುನಾವಣೆಯಲ್ಲಿಯೂ ಸೋಲನುಭವಿಸುತ್ತಾರೆ ಎಂದು ಅವರಿಗೆ ಮನದಟ್ಟಾಗಿದೆ ಎಂದು ದೇವೆಂದ್ರ ಫಡ್ನವೀಸ್ ಅವರು ಲೇವಡಿ ಮಾಡಿದ್ದಾರೆ.

**ದೇಶದಲ್ಲಿ ಸುಳ್ಳು ಮಾಹಿತಿ ಹರಡುತ್ತಿದ್ದಾರೆ**

ಪ್ರಜಾಪ್ರಭುತ್ವ ಪ್ರಕ್ರಿಯೆ ಮತ್ತು ಸಾಂವಿಧಾನಿಕ ಸಂಸ್ಥೆಗಳ ಬಗ್ಗೆ ಅನುಮಾನಗಳನ್ನು ಹುಟ್ಟುಹಾಕುವ ಮೂಲಕ ದೇಶವನ್ನು ಎಲ್ಲಿಗೆ ಕೊಂಡೊಯ್ಯುತ್ತಿದ್ದೀರಿ ಯಾವ ರೀತಿಯ ವಿಷವನ್ನು ಹರಡುತ್ತಿದ್ದೀರಿ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರಿಗೆ ಫಡ್ನವೀಸ್ ಅವರು ಪ್ರಶ್ನಿಸಿದ್ದಾರೆ



**ಮಹಾರಾಷ್ಟ್ರದ ಜನರಿಗೆ ಮಾಡುವ ಅವಮಾನ**

**ಸೋತ ನೋವು ನಿಮ್ಮನ್ನು ಕಾಡುತ್ತಿರುವುದು ಗೊತ್ತಿದೆ:** ಮಹಾರಾಷ್ಟ್ರದಲ್ಲಿ ಸೋತಿದ್ದು ನಿಮಗೆ ಎಷ್ಟು ನೋವುಂಟು ಮಾಡಿರಬಹುದು ಎಂದು ನನಗೆ ಅರ್ಥವಾಗುತ್ತದೆ. ಆದರೆ ರೈತರು, ಮಹಿಳೆಯರು, ನಾಗರಿಕರು ಮತ್ತು ಮಹಾರಾಷ್ಟ್ರದ ಜನರನ್ನು ಹೀಗೆ ಅವಮಾನಿಸುವುದನ್ನು ಮುಂದುವರಿಸಿದರೆ, ರಾಜ್ಯದ ಜನರು ನಿಮ್ಮನ್ನು ಎಂದಿಗೂ ಕ್ಷಮಿಸುವುದಿಲ್ಲ. ಮುಖ್ಯಮಂತ್ರಿಯಾಗಿ ಮತ್ತು ಜನರ ಸೇವಕನಾಗಿ, ಮಹಾರಾಷ್ಟ್ರದ ಜನರಿಗೆ ಮಾಡುವ ಇಂತಹ ಅವಮಾನವನ್ನು ನಾನು ಖಂಡಿಸುತ್ತೇನೆ ಎಂದು ದೇವೇಂದ್ರ ಫಡ್ನವೀಸ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಮಹಾರಾಷ್ಟ್ರ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ನೇತೃತ್ವದ ಮಹಾಯುತಿ ಮೈತ್ರಿಕೂಟವು ಭರ್ಜರಿ ಜಯಗಳಿಸಿದೆ. 288 ಸ್ಥಾನಗಳಲ್ಲಿ 235 ಸ್ಥಾನಗಳನ್ನು ಗೆದ್ದಿದೆ.

ಮಹಾ ವಿಕಾಸ್ ಅಘಾಡಿಯ ಯಾವ ಪಕ್ಷವೂ ವಿರೋಧ ಪಕ್ಷದ ನಾಯಕನ ಸ್ಥಾನವನ್ನು ಪಡೆಯಲು ಸಾಧ್ಯವಾಗಲಿಲ್ಲ. ಕಾಂಗ್ರೆಸ್ 16 ಸ್ಥಾನ, ಶಿವಸೇನೆ (ಯುಬಿಟಿ) 20 ಸ್ಥಾನ ಮತ್ತು ಎನ್‌ಸಿಪಿ 10 ಸ್ಥಾನಗಳನ್ನು ಪಡೆದಿವೆ. ಆರು ದಶಕಗಳಲ್ಲಿ ಇದೇ ಮೊದಲ ಬಾರಿಗೆ ಹೀಗಾಗಿದೆ.

### ರಾಹುಲ್ ಗಾಂಧಿ ಹೇಳಿದ್ದೇನು



2024ರ ಮಹಾರಾಷ್ಟ್ರ ವಿಧಾನಸಭೆ ಚುನಾವಣೆ ಪ್ರಜಾಪ್ರಭುತ್ವಕ್ಕೆ ವಂಚಿಸುವ ನೀಲನಕ್ಷೆ. ಮುಂದಿನ ಬಿಹಾರ ವಿಧಾನಸಭೆ ಚುನಾವಣೆಯಲ್ಲೂ ಬಿಜೆಪಿ ಇದೇ ತಂತ್ರವನ್ನು ಪ್ರಯೋಗಿಸಬಹುದು. ಮ್ಯಾಚ್ ಫಿಕ್ಸಿಂಗ್ ಮಹಾರಾಷ್ಟ್ರ ಎಂದು ಉಲ್ಲೇಖಿಸಿ ಎಕ್ಸ್‌ನಲ್ಲಿ ರಾಹುಲ್ ಗಾಂಧಿ ಪೋಸ್ಟ್ ಹಂಚಿಕೊಂಡಿದ್ದರು.

### ಮಹಾರಾಷ್ಟ್ರದ ಜನರನ್ನು ಅವಮಾನಿಸುತ್ತಿದ್ದಾರೆ

ರಾಹುಲ್ ಗಾಂಧಿ ಅವರು ಬಿಹಾರ ಸೇರಿದಂತೆ ಮುಂಬರುವ ವಿಧಾನಸಭೆ ಚುನಾವಣೆಗಳಲ್ಲಿ ಸೋಲಿಗೆ ಈಗಿನಿಂದಲೇ ನೆಪಗಳನ್ನು ಸಿದ್ಧಪಡಿಸುತ್ತಿದ್ದಾರೆ ಎಂದು ಫಡ್ನವೀಸ್ ಆರೋಪಿಸಿದ್ದಾರೆ. ರಾಹುಲ್ ಗಾಂಧಿ ಅವರು ಪ್ರಜಾಪ್ರಭುತ್ವವನ್ನು ಟೀಕಿಸುತ್ತಿದ್ದಾರೆ. ಜನರು ಅವರನ್ನು ತಿರಸ್ಕರಿಸಿದ್ದರೂ, ಅವರು ಟೀಕೆ ಮಾಡುವುದನ್ನು ನಿಲ್ಲಿಸಿಲ್ಲ. ಇದರಿಂದ ಕಾಂಗ್ರೆಸ್ ಪಕ್ಷವು ಮತ್ತಷ್ಟು ಕೆಳಕ್ಕೆ ಹೋಗುತ್ತದೆ ಎಂದು ಫಡ್ನವೀಸ್ ಅಭಿಪ್ರಾಯಪಟ್ಟಿದ್ದಾರೆ. ರಾಹುಲ್ ಗಾಂಧಿ ಅವರು ಚುನಾವಣಾ ಆಯೋಗದ ಬಗ್ಗೆಯೂ ಟೀಕೆ ಮಾಡಿದ್ದಾರೆ. ಚುನಾವಣಾ ಆಯೋಗವು ಸ್ವತಂತ್ರ ಸಂಸ್ಥೆಯಾಗಿದ್ದು, ಅದರ ಬಗ್ಗೆ ಟೀಕೆ ಮಾಡುವುದು ಸರಿಯಲ್ಲ ಎಂದು ಫಡ್ನವೀಸ್ ಹೇಳಿದ್ದಾರೆ.

**ಈ ದಿನದ ದರ** ಪೆಟ್ರೋಲ್: 103.50 ₹/L ಡೀಸೆಲ್ : 90.03 ₹/L ಬಂಗಾರ: ₹9,797/Gram24ct ₹8,980/Gram22ct ಬೆಳ್ಳಿ: ₹107.00/Gram

## ಚಾಕುವಿನಿಂದ ಇರಿದು ಬ್ಯಾಂಕ್ ಉದ್ಯೋಗಿಯ ಕೊಲೆ

• ಉದಯವಾಹಿನಿ, ಬೆಂಗಳೂರು

ಪಟ್ಟಣದ ಖಾಸಗಿ ಬ್ಯಾಂಕ್ ಉದ್ಯೋಗಿಯೊಬ್ಬರನ್ನು ಚಾಕುವಿನಿಂದ ಇರಿದು ಕೊಲೆ ಮಾಡಿರುವ ಘಟನೆ ಶುಕ್ರವಾರ ರಾತ್ರಿ 9 ಗಂಟೆಗೆ ಸುಮಾರಿಗೆ ನಡೆದಿದೆ. ಗೊಲ್ಲಹಳ್ಳಿ ಗ್ರಾಮದ ದರ್ಶನ್ (25) ಕೊಲೆಯಾದವರು. ಶುಕ್ರವಾರ ಮನೆಯಲ್ಲೇ ಇದ್ದ ದರ್ಶನ್ ಅವರು ರಾತ್ರಿ 7.30ರ ಸುಮಾರಿಗೆ ಮನೆಯಿಂದ ಹೊರಗೆ ಹೋಗಿದ್ದರು. ಈ ಸಮಯದಲ್ಲಿ ಆರೋಪಿಗಳ ಜತೆಗೆ ಮಾತಿನ ಚಕಮಕಿ ನಡೆದು ಕೊಲೆ ಆಗಿದೆ ಎಂದು ಶಂಕಿಸಲಾಗಿದೆ. ಗೊಲ್ಲಹಳ್ಳಿ ಗ್ರಾಮದ ವೇಣುಗೋಪಾಲ್ ಎಂಬಾತ ಕೃತ್ಯ ಎಸಗಿರುವ ಶಂಕೆಯಿದ್ದು, ಆತ ತಲೆಮರೆಸಿಕೊಂಡಿದ್ದಾನೆ ಎಂದು ಪೊಲೀಸರು ಹೇಳಿದರು. ಪ್ರೇಮದ ವಿಚಾರಕ್ಕೆ ಕೊಲೆ ನಡೆದಿದೆ ಎಂಬುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ ಎಂದು ಪೊಲೀಸರು ಹೇಳಿದರು. ಗ್ರಾಮಾಂತರ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

## ಕಾಲ್ತುಳಿತ ಪ್ರಕರಣ: ಟೀಕೆ, ಸಮರ್ಥನೆ ಬಿಡಿ: ಪ್ರೊ.ಬಿ.ಕೆ.ಚಂದ್ರಶೇಖರ್

• ಉದಯವಾಹಿನಿ, ಬೆಂಗಳೂರು

ಆರ್‌ಸಿಬಿ ಆಟಗಾರರ ಅಭಿನಂದನಾ ಕಾರ್ಯಕ್ರಮದಲ್ಲಿ ಕಾಲ್ತುಳಿತ ಸಂಭವಿಸಿ ಜನರು ಮೃತಪಟ್ಟ ಘಟನೆಗೆ ಸಂಬಂಧಿಸಿದಂತೆ ವಿರೋಧ ಪಕ್ಷಗಳು ಸರ್ಕಾರವನ್ನು ಟೀಕಿಸುವ ಮತ್ತು ಸರ್ಕಾರ ತನ್ನ ನಡೆಯನ್ನು ಸಮರ್ಥಿಸಿಕೊಳ್ಳುವ ಚಾಳಿಯನ್ನು ಬಿಡಬೇಕು ಎಂದು ಕಾಂಗ್ರೆಸ್‌ನ ಹಿರಿಯ ನಾಯಕ ಪ್ರೊ.ಬಿ.ಕೆ.ಚಂದ್ರಶೇಖರ್ ಹೇಳಿದ್ದಾರೆ. ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಆರ್‌ಸಿಬಿ ಆಟಗಾರರಿಗೆ ಅಭಿನಂದನಾ ಕಾರ್ಯಕ್ರಮ ನಡೆಸುವ ಸಂಬಂಧ ಶಿಷ್ಟಾಚಾರ ಇಲಾಖೆ ಮತ್ತು ಗುಪ್ತಚರ ಇಲಾಖೆಗಳಿಂದ ಸರ್ಕಾರವು ಮಾಹಿತಿ ಪಡೆದುಕೊಂಡಿರಲಿಲ್ಲ. ಸಂಬಂಧಿತ ಪ್ರಾಧಿಕಾರಗಳಿಂದ ಅಗತ್ಯ ಅನುಮತಿ ಪಡೆದುಕೊಳ್ಳದೇ, ತೆರೆದ ವಾಹನದಲ್ಲಿ ಆಟಗಾರರ ಮೆರವಣಿಗೆ ನಡೆಸುವುದಾಗಿ ಆರ್‌ಸಿಬಿ ಏಕಪಕ್ಷೀಯವಾಗಿ ಘೋಷಿಸಿತ್ತು. ಮೆರವಣಿಗೆ ನಡೆಸಬಾರದು ಎಂದು ಗೃಹ ಸಚಿವ ಜಿ.ಪರಮೇಶ್ವರ ಕಟ್ಟುನಿಟ್ಟಾಗಿ ಹೇಳಿದ್ದರು ಎಂದಿದ್ದಾರೆ. ಈ ಅವಘಡವನ್ನು ವಿಶ್ಲೇಷಿಸುವಲ್ಲಿ ಈ ಎಲ್ಲಾ ಅಂಶಗಳನ್ನು ಪರಿಶೀಲಿಸಬೇಕು. ಆದರೆ ಇವುಗಳನ್ನು ಕಡೆಗಣಿಸಲಾಗಿದೆ. ಈ ಎಲ್ಲಾದರ ಹೊರತಾಗಿ, ಹೊರಗೆ ಜನರು ಸಾಯುತ್ತಿರುವಾಗ ಕ್ರೀಡಾಂಗಣದಲ್ಲಿ ಸನ್ಮಾನ ಕಾರ್ಯಕ್ರಮ ನಡೆಸಬೇಕಿತ್ತೇ ಎಂದು ಪ್ರಶ್ನಿಸಬೇಕಿದೆ' ಎಂದಿದ್ದಾರೆ.

## ಪೀಣ್ಯ ದಾಸರಹಳ್ಳಿ: ಉದ್ಯಾನಕ್ಕೆ ರಾಷ್ಟ್ರಕವಿ ಕುವೆಂಪು' ನಾಮಕರಣ

• ಉದಯವಾಹಿನಿ, ಪೀಣ್ಯ ದಾಸರಹಳ್ಳಿ

ರಾಜಗೋಪಾಲ ವಾರ್ಡ್ ಜಿ.ಕೆ.ಡಬ್ಲ್ಯೂ ಬಡಾವಣೆಯ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಉದ್ಯಾನಕ್ಕೆ ರಾಷ್ಟ್ರಕವಿ ಕುವೆಂಪು ಉದ್ಯಾನ ಎಂದು ಹೆಸರಿಡಲಾಯಿತು. ರಾಷ್ಟ್ರಕವಿ ಕುವೆಂಪು ಉದ್ಯಾನ ನಾಮಫಲಕ ಉದ್ಘಾಟಿಸಿದ ಶಾಸಕ ಎಸ್. ಮುನಿರಾಜು, ಕುವೆಂಪು ಅವರು ತಮ್ಮ ಸಾಹಿತ್ಯದ ಮೂಲಕ ವೈಚಾರಿಕ ಚಿಂತನೆಯನ್ನು ಬಿತ್ತಿದವರು. ಅಂತಹ ದಾರ್ಶನಿಕರ ಹೆಸರನ್ನು ಉದ್ಯಾನಕ್ಕೆ ಇಡಲು ನನಗೆ ಹೆಮ್ಮೆ ಎನಿಸುತ್ತದೆ ಎಂದರು. ಹಸಿರು ಪ್ರತಿಷ್ಠಾನದ ಅಧ್ಯಕ್ಷ ಕೆ.ಜಿ. ಕುಮಾರ್, ಸಮೃದ್ಧಿ ಪ್ರತಿಷ್ಠಾನದ ಅಧ್ಯಕ್ಷ ದಿನೇಶ್, ಸವಿತಾ ದಿನೇಶ್, ನರಸಿಂಹಮೂರ್ತಿ, ಪತ್ರಕರ್ತ ಗೋವಿಂದರಾಜು ಪಟೇಲ್, ನಾಗೇಶ್, ವೈ.ಜಿ.ನಾಗರಾಜ್, ವಿಜಯ್, ಕಮಲ, ಬಿ.ಕೆ. ರಂಗಸ್ವಾಮಿ, ಸುರೇಶ್, ಕನ್ನಡಪರ ಮತ್ತು ಕುವೆಂಪು ಅಭಿಮಾನಿಗಳು, ಜಿ.ಕೆ ಡಬ್ಲ್ಯೂ ಬಡಾವಣೆಯ ನಿವಾಸಿಗಳು ಭಾಗವಹಿಸಿದ್ದರು.

## ಮಾದಿಗರೊಂದಿಗೆ ತ್ರಿಮತಸ್ಥರ ಸಮೀಕರಣ ಬೇಡ: ಶ್ರೀಗುರು ರವಿದಾಸ ಪರಿಷತ್

• ಉದಯವಾಹಿನಿ, ಬೆಂಗಳೂರು

ಡೋಹರ, ಸಮಗಾರ. ಮಚಗಾರ ಸಮುದಾಯಗಳನ್ನು ಮಾದಿಗರೊಂದಿಗೆ ಸಮೀಕರಣ ಮಾಡುವುದನ್ನು ನಿಲ್ಲಿಸಬೇಕು. ಈ ತ್ರಿಮತಸ್ಥ ಸಮುದಾಯಗಳಿಗೂ ಮತ್ತು ಮಾದಿಗ ಸಮುದಾಯಕ್ಕೂ ಸಂಬಂಧವಿಲ್ಲ ಎಂದು ತ್ರಿಮತಸ್ಥ ಶ್ರೀಗುರು ರವಿದಾಸ ಪರಿಷತ್ ತಿಳಿಸಿದೆ. ಮಾದಿಗ, ಸಮಗಾರ, ಚನ್ನಯ್ಯ, ಡೋಹರ, ದಕ್ಕಲಿಗ ಜಾತಿ ಉಪಜಾತಿ ಸಂಘಟನೆಗಳ ಒಕ್ಕೂಟ-ಕರ್ನಾಟಕ', ಮಾದಿಗ, ಸಮಗಾರ, ಚನ್ನಯ್ಯ, ಡೋಹರ ಹಾಗೂ ಹೊಲೆಯ ಸಮಾಜಗಳ ಒಕ್ಕೂಟ-ಕರ್ನಾಟಕ ರಾಜ್ಯ ಹೆಸರುಗಳಲ್ಲಿ ಪೋಸ್ಟರ್‌ಗಳನ್ನು ಹಂಚಲಾಗುತ್ತಿದೆ. ಇದು ಸಾಂಸ್ಕೃತಿಕ ಅತಿಕ್ರಮಣವಾಗಿದ್ದು, ತ್ರಿಮತಸ್ಥ ಚರ್ಮಕಾರರ ಭಾವನೆಗೆ ಧಕ್ಕೆ ತಂದಿದೆ' ಎಂದು ಪರಿಷತ್‌ನ ಸಂಚಾಲಕರು ತಿಳಿಸಿದ್ದಾರೆ. ಇದು ಶ್ರೇಷ್ಠ-ಕನಿಷ್ಠದ ವ್ಯಸನದ ಪ್ರಶ್ನೆ ಅಲ್ಲ. ತ್ರಿಮತಸ್ಥರ ಅಸ್ತಿತ್ವದ ಮತ್ತು ಅಸ್ಮಿತೆಯ ಪ್ರಶ್ನೆ. ಎರಡು ಪರಕೀಯ, ಭಿನ್ನ ಸಮುದಾಯಗಳಾಗಿವೆ. ವಿಧಾನಗಳು, ವಿಧಿ ನಿಷೇಧಗಳು, ಧಾರ್ಮಿಕ ಆಚರಣೆಗಳು, ಸಾಮಾಜಿಕ ಸಂಪ್ರದಾಯಗಳು, ಜೀವನ ಪದ್ಧತಿ, ಸಂಸ್ಕಾರಗಳು, ದೇವತಾರಾಧನೆ ಕ್ರಮ, ಆಹಾರ ಕ್ರಮಗಳು ಮಾದಿಗ ಸಮುದಾಯದ ಜೀವನ ಶೈಲಿಗಿಂತ ಸಂಪೂರ್ಣ ಭಿನ್ನವಾಗಿದೆ' ಎಂದು ವಿವರಿಸಿದ್ದಾರೆ. ಮಾದಿಗ, ಮಾದರ್, ಎಡಗೈ, ಎಡಗುಂಪು ಇದ್ಯಾವುದೂ ಅಲ್ಲದ ಡೋಹರ, ಮಚಿಗಾರ. ಸಮಗಾರರನ್ನು ಯಾವುದೇ ಸೂಚನೆ ನೀಡದೇ ಮಾದಿಗ ಜಾತಿಯವರು ಎಂದು ಬಿಂಬಿಸಲಾಗುತ್ತಿದೆ. ಎಡಗೈ ಗುಂಪು ಎಂದು ಹಣೆಪಟ್ಟಿ ಕಟ್ಟುವ ಪ್ರಯತ್ನಗಳು ಖಂಡನೀಯ. ಅಸ್ಪೃಶ್ಯರಲ್ಲೇ ದುರ್ಬಲ ಸಮುದಾಯ ನಮ್ಮದು. ಮಾದಿಗರ 28 ಸಮುದಾಯಗಳು ಎಂದು ಈ ಮೂರು ಸಮುದಾಯಗಳನ್ನು ಸೇರಿಸಿ ವರ್ಗೀಕರಿಸಿದರೆ ಶಾಶ್ವತ ಅಪಾಯ ಉಂಟಾಗುತ್ತದೆ ಎಂದು ಅವರು ಎಚ್ಚರಿಸಿದ್ದಾರೆ.

## ಯ ಟಾಪ್ 100 ರ್ಯಾಂಕ್‌ಗಳಲ್ಲಿ 55 ಕರ್ನಾಟಕ ವಿದ್ಯಾರ್ಥಿಗಳು


ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಕರ್ನಾಟಕದ ವೈದ್ಯಕೀಯ, ಎಂಜಿನಿಯರಿಂಗ್, ದಂತ ವೈದ್ಯಕೀಯ ಕಾಲೇಜುಗಳ ಒಕ್ಕೂಟ 2025 ರ ಪದವಿಪೂರ್ವ ಪ್ರವೇಶ ಪರೀಕ್ಷೆಯ ಫಲಿತಾಂಶಗಳನ್ನು ಪ್ರಕಟಿಸಿದ್ದು ಈ ವರ್ಷ ಕರ್ನಾಟಕದ ವಿದ್ಯಾರ್ಥಿಗಳು ಅಗ್ರ 100 ರ್ಯಾಂಕ್‌ಗಳಲ್ಲಿ 55 ರ್ಯಾಂಕ್‌ಗಳನ್ನು ಗಳಿಸಿದ್ದಾರೆ. ದಕ್ಷಿಣ ಕನ್ನಡದ ಮೂಡಬಿದ್ರಿಯ ಶಿಶಿರ್ ಎಚ್ ಶೆಟ್ಟಿ ಅಗ್ರ ರ್ಯಾಂಕ್‌ಗಳಿಸಿದರೆ, ಪಂಜಾಬ್‌ನ ಮಲಿಕ್ ಜೈನ್, ಕರ್ನಾಟಕದ ವರುಣ್ ಜೆ ಕುಮಾರ್ ಕ್ರಮವಾಗಿ ಎರಡನೇ ಮತ್ತು ಮೂರನೇ ರ್ಯಾಂಕ್‌ಗಳಿಸಿದ್ದಾರೆ. ಇತರ ರಾಜ್ಯಗಳ ವಿದ್ಯಾರ್ಥಿಗಳ ಜೊತೆಗೆ ಕರ್ನಾಟಕದ ನಾಲ್ಕು ಅಭ್ಯರ್ಥಿಗಳು ಮೊದಲ 10 ಸ್ಥಾನದಲ್ಲಿದ್ದಾರೆ. ಒಟ್ಟು 11,412 ರಲ್ಲಿ ಕರ್ನಾಟಕದ ಸುಮಾರು 3,330 ವಿದ್ಯಾರ್ಥಿಗಳು ಶೇಕಡಾ 90.100 ಶ್ರೇಣಿಯಲ್ಲಿದ್ದಾರೆ. 1,31,937 ಅರ್ಜಿದಾರರಲ್ಲಿ, 1.13 ಲಕ್ಷಕ್ಕೂ ಹೆಚ್ಚು ಅಭ್ಯರ್ಥಿಗಳು ಪ್ರವೇಶ ಪರೀಕ್ಷೆಗೆ ಹಾಜರಾಗಿದ್ದರು, ಕಾಮೆಡ್ ಕೆ ಮೇ 10 ಮತ್ತು ಮೇ 25 ರಂದು ದೇಶಾದ್ಯಂತ 179 ನಗರಗಳಲ್ಲಿ ಎರಡು ಹಂತಗಳಲ್ಲಿ ನಡೆಸಲಾಯಿತು. ಮೇ 28 ರಂದು ಪ್ರಕಟಿಸಲಾದ ತಾತ್ಕಾಲಿಕ ಕೀಲಿಯ ವಿರುದ್ಧ 69 ಆಕ್ಷೇಪಣೆಗಳು ಬಂದಿದ್ದು, ಕಾಮೆಡ್ ಕೆ ಒಕ್ಕೂಟವು ಪರಿಶೀಲಿಸಿದ ನಂತರ, ಜೂನ್ 4 ರಂದು ಅಂತಿಮ ಉತ್ತರ ಕೀಲಿಯನ್ನು ಬಿಡುಗಡೆ ಮಾಡಲಾಯಿತು. ದಕ್ಷಿಣ ಕನ್ನಡದ ಮೂಡಬಿದ್ರಿಯ ಎಕ್ಸಲೆಂಟ್ ಪಿಯು ಕಾಲೇಜಿನ ಶಿಶಿರ್ ಎಚ್ ಶೆಟ್ಟಿಯ್ ಅಔಒಇಆಏ ಪರೀಕ್ಷೆಯಲ್ಲಿ ಅಗ್ರಸ್ಥಾನ ಪಡೆದಿದ್ದಾರೆ.

## ಖಾಸಗಿ ಕಾರ್ಯಕ್ರಮಕ್ಕಾಗಿ ರಸ್ತೆ ತಡೆ: ಪ್ರತಿಭಟನೆಗಿಳಿದ ಮಲ್ಲೇಶ್ವರಂ ನಿವಾಸಿಗಳು

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ಗೃಹ ಪ್ರವೇಶಕ್ಕಾಗಿ ಕುಟುಂಬವೊಂದು ಅಧಿಕಾರಿಗಳಿಂದ ಅನುಮತಿ ಪಡೆಯದೆ ಮಲ್ಲೇಶ್ವರಂ 4ನೇ ಮುಖ್ಯರಸ್ತೆ, 13ನೇ ಕ್ರಾಸ್ ರಸ್ತೆಯನ್ನು ತಡೆಹಿಡಿದಿದ್ದು, ಇದರ ಪರಿಣಾಮ ಸುತ್ತಮುತ್ತಲಿನ ರಸ್ತೆಗಳಲ್ಲಿ ಸಂಚಾರ ದಟ್ಟಣೆ ಎದುರಾಗಿತ್ತು. ಸರ್ಕಾರಿ ಬಾಲಕಿಯರ ಪಿಯು ಕಾಲೇಜಿನ ಎದುರಿನ ರಸ್ತೆಯಲ್ಲಿ ಅತಿಥಿಗಳಿಗೆ ಊಟ ಬಡಿಸಲು ಪೆಂಡಾಲ್ ಹಾಕಲಾಗಿತ್ತು. ಕುಟುಂಬವು ಸಾರ್ವಜನಿಕ ರಸ್ತೆಯ 50 ಮೀಟರ್‌ಗಿಂತಲೂ ಹೆಚ್ಚು ಸ್ಥಳವನ್ನು ಬಳಸಿಕೊಂಡಿತ್ತು. ರಸ್ತೆಯ ಎರಡೂ ಬದಿಗಳಲ್ಲಿ ವಾಹನಗಳು ನಿಂತಿದ್ದರಿಂದ ಆ ಪ್ರದೇಶದಲ್ಲಿ ಸಂಚಾರಕ್ಕೆ ತೀವ್ರ ತೊಂದರೆಯಾಯಿತು. ಅನಧಿಕೃತವಾಗಿ ರಸ್ತೆ ಮುಚ್ಚಿದ್ದಕ್ಕೆ ಇತರ ನಿವಾಸಿಗಳು ಆಕ್ಷೇಪ ವ್ಯಕ್ತಪಡಿಸಿದರು. ಅಲ್ಲದೆ, ಸಮಾರಂಭದ ಆಯೋಜಕರು ಅನುಮತಿ ಪಡೆದಿದ್ದಾರೆಯೇ ಎಂದು ಪ್ರಶ್ನಿಸಿದರು. ಈ ವೇಳೆ ಸ್ಥಳದಲ್ಲಿ ಕೆಲ ಕಾಲ ಅಹಿತಕರ ವಾತಾವರಣ ನಿರ್ಮಾಣವಾಗಿತ್ತು.

ಸ್ಥಳೀಯ ನಿವಾಸಿ ರಾಜೀವಿ ಎಂಬುವವರು ಮಾತನಾಡಿ, ಕಾರ್ಯಕ್ರಮಕ್ಕಾಗಿ ನೀವು ಸಾರ್ವಜನಿಕ ರಸ್ತೆಯನ್ನೇಕೆ ಬಳಸುತ್ತಿದ್ದೀರಿ ಎಂದು ನಾವು ಕುಟುಂಬವನ್ನು ಪ್ರಶ್ನಿಸಿದೆವು. ಅವರು ಆರಂಭದಲ್ಲಿ ಪೊಲೀಸರಿಂದ ಅನುಮತಿ ಪಡೆದಿದ್ದೇವೆ ಎಂದು ಹೇಳಿದರು. ನಾವು ಪರಿಶೀಲಿಸಿದಾಗ ಪೊಲೀಸರು ಅಂತಹ ಯಾವುದೇ ಅನುಮತಿ ನೀಡಲ್ಲ ಎಂದು ಹೇಳಿದರು.

ನಂತರ, ಸ್ಥಳೀಯ ಶಾಸಕರಾದ ಅವರು ಅನುಮತಿ ನೀಡಿದ್ದಾರೆಂದು ಹೇಳಿದರು. ಆದರೆ, ಶಾಸಕರು ಅನುಮತಿ ನೀಡಿಲ್ಲ ಎಂದು ಹೇಳಿದ್ದರು. ನಂತರ 112 ಗೆ ಕರೆ ಮಾಡಿದಾಗ ಪೊಲೀಸರು ಆಗಮಿಸಿ ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತಂದರು. ಪೆಂಡಾಲ್‌ನ್ನು ತೆಗೆದುಹಾಕಿದರು ಎಂದು ಹೇಳಿದ್ದಾರೆ. ಅವರು ನಿಯಮಗಳನ್ನು ಉಲ್ಲಂಘಿಸಿದ್ದಲ್ಲದೆ, ಪ್ರಶ್ನಿಸಿದ ನಿವಾಸಿಗಳಿಗೂ ಬೆದರಿಕೆ ಹಾಕಿದ್ದಾರನೆಂದು ಎಂದು ಮತ್ತೊಬ್ಬ ನಿವಾಸಿ ತಿಳಿಸಿದ್ದಾರೆ.

# ವರ್ತುಲ ರೈಲ್ವೆ ಯೋಜನೆಗೆ 2500 ಎಕರೆ ಭೂಸ್ವಾಧೀನ

### 287 ಕಿಲೋ ಮೀಟರ್ ವೃತ್ತಾಕಾರದ ರೈಲ್ವೆ ಯೋಜನೆ ಇದಾಗಿದ್ದು, 81 ಸಾವಿರ ಕೋಟಿ ರೂ. ವೆಚ್ಚ

• ಉದಯವಾಹಿನಿ, ಬೆಂಗಳೂರು

ವರ್ತುಲ ರೈಲ್ವೆ ಯೋಜನೆಗೆ ಸಂಬಂಧಿಸಿದಂತೆ ಬೆಂಗಳೂರು ಸುತ್ತಮುತ್ತಲ ಪ್ರದೇಶಗಳಲ್ಲಿ 2500 ಎಕರೆ ಭೂಸ್ವಾಧೀನಕ್ಕೆ ನಿರ್ಧಾರ ಮಾಡಲಾಗಿದೆ. ಭೂಮಿ ನೀಡಿದವರಿಗೆ ಪರಿಹಾರವನ್ನು ಕೇಂದ್ರ ರೈಲ್ವೆ ಇಲಾಖೆಯೇ ನೀಡಲಿದೆ ಎಂದು ಕೇಂದ್ರ ಸರ್ಕಾರದ ರೈಲ್ವೆ ಖಾತೆ ರಾಜ್ಯ ಸಚಿವ ವಿ ಸೋಮಣ್ಣ ತಿಳಿಸಿದ್ದಾರೆ.

ಬೆಂಗಳೂರು ಸುತ್ತಮುತ್ತ ಸಂಚಾರ ದಟ್ಟಣೆ ಕಡಿಮೆ ಮಾಡುವ ಉದ್ದೇಶದಿಂದ ಈ ವರ್ತುಲ ರೈಲ್ವೆ ಯೋಜನೆಯನ್ನು ಜಾರಿಗೆ ತರಲಾಗುತ್ತಿದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ 8 ಪ್ರಮುಖ ಪಟ್ಟಣಗಳನ್ನು ರೈಲು ಸಂಪರ್ಕದ ಮೂಲಕ ಬೆಸೆಯಲಾಗುತ್ತಿದೆ. ಒಟ್ಟು 287 ಕಿಲೋ ಮೀಟರ್ ವೃತ್ತಾಕಾರದ ರೈಲ್ವೆ ಯೋಜನೆ ಇದಾಗಿದ್ದು, 81 ಸಾವಿರ ಕೋಟಿ ರೂ. ವೆಚ್ಚ ಮಾಡಲಾಗುತ್ತಿದೆ. ಈಗಾಗಲೇ ಸಮೀಕ್ಷಾ ಕಾರ್ಯ ನಡೆಯುತ್ತಿದೆ. ರಾಮನಗರ, ಬೆಂಗಳೂರು ಗ್ರಾಮಾಂತರ, ಕೋಲಾರ ಹಾಗೂ ಬೆಂಗಳೂರು ನಗರವನ್ನು ಸಂಪರ್ಕಿಸುವ ವೃತ್ತಾಕಾರದ ರೈಲ್ವೆ ಸಂಚಾರ ಆರಂಭಿಸುವುದು ಈ ಯೋಜನೆಯ ಉದ್ದೇಶವಾಗಿದೆ.

ಕುಮಾರಕೃಪಾ ಅತಿಥಿಗೃಹದಲ್ಲಿ ರೈಲ್ವೆ ಇಲಾಖೆಯ ಸಹಾಯಕ ಸಚಿವ ವಿ.ಸೋಮಣ್ಣ ನೇತೃತ್ವದಲ್ಲಿ ರಾಜ್ಯದ ರೈಲ್ವೆ ಯೋಜನೆಗಳ ಅನುಷ್ಠಾನಕ್ಕೆ ಸಂಬಂಧಿಸಿದ ಸಭೆ ನಡೆಯಿತು.


ಉದಯವಾಹಿನಿ ಚಿತ್ರ

ಈ ಸಭೆಯಲ್ಲಿ ವಿ ಸೋಮಣ್ಣ ಮಾತನಾಡಿದರು. ಮುಂದಿನ 50 ವರ್ಷಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ವರ್ತುಲ ರೈಲ್ವೆ ಯೋಜನೆ ರೂಪಿಸಲಾಗುತ್ತಿದೆ. ಇದಕ್ಕೆ ಅಗತ್ಯ ಡಿಪಿಆರ್ ಸಿದ್ಧಪಡಿಸಲಾಗುವುದು ಎಂದು ತಿಳಿಸಿದರು. (ಅಮಿತ್ ಶಾ ಅವರನ್ನ ಭೇಟಿ ಮಾಡಿದ ವಿ ಸೋಮಣ್ಣ) ಮುಂದಿನ 50 ವರ್ಷಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ವರ್ತುಲ ರೈಲ್ವೆ ಯೋಜನೆ ರೂಪಿಸಲಾಗಿದೆ. ಅದಕ್ಕೆ ಸಂಬಂಧಿಸಿದಂತೆ ಸಮೀಕ್ಷೆ ನಡೆಸಲಾಗಿದೆ. ಕೆಲ ನ್ಯೂನತೆ ಹಾಗೂ ಸವಾಲುಗಳಿರುವ ಬಗ್ಗೆ ಸಂಸದರು ತಿಳಿಸಿದ್ದಾರೆ. ಅವುಗಳನ್ನು ಸರಿಪಡಿಸಿ ವಿಸ್ತೃತ ಯೋಜನಾ ವರದಿ (ಡಿಪಿಆರ್) ರೂಪಿಸಲಾಗುವುದು ಎಂದು ವಿವರಿಸಿದರು.

**ಭೂ ಸ್ವಾಧೀನಕ್ಕೆ ಸಮಿತಿ:** ಭೂಸ್ವಾಧೀನಕ್ಕಾಗಿ ರಾಜ್ಯ ಹಾಗೂ ಕೇಂದ್ರ ಸರ್ಕಾರದ ಅಧಿಕಾರಿಗಳನ್ನು ಒಳಗೊಂಡ ಸಮಿತಿ ರಚನೆ ಮಾಡಲಾಗುವುದು. ನೈರುತ್ಯ ರೈಲ್ವೆ ಬೆಂಗಳೂರು ವಿಭಾಗೀಯ ವ್ಯವಸ್ಥಾಪಕರು, ಭೂಸ್ವಾಧೀನ ಅಧಿಕಾರಿ, ಉನ್ನತಾಧಿಕಾರಿಗಳು, ಕೆಐಎಡಿಬಿ, ಕೆ-ರೈಡ್, ಬಿಬಿಎಂಪಿ, ನಗರ ಹಾಗೂ ಗ್ರಾಮಾಂತರ ಜಿಲ್ಲಾಡಳಿತ ಸೇರಿದ ಎಲ್ಲಾ ಅಧಿಕಾರಿಗಳು ಈ ಸಮಿತಿಯಲ್ಲಿ ಎಂದು ಸಚಿವರು ತಿಳಿಸಿದರು.

**ಪರಿಹಾರ ಹೇಗೆ:** ಯೋಜನೆಗೆ ಭೂಸ್ವಾಧೀನ ಮಾಡಿಕೊಂಡವರಿಗೆ ಪರಿಹಾರವನ್ನು ರೈಲ್ವೆ ಇಲಾಖೆ, ರಾಜ್ಯ ಸರ್ಕಾರ, ಸುಪ್ರೀಂ ಕೋರ್ಟ್ ಮಾರ್ಗಸೂಚಿಯಂತೆ ಅನುಸರಿಸಲಾಗುವುದು. ಯಾರಿಗೂ ತೊಂದರೆಯಾಗದಂತೆ ಖಾಸಗಿ ಜಮೀನು ಪಡೆಯಲು ಕ್ರಮವಹಿಸಲಾಗುತ್ತದೆ ಎಂದು ವಿ ಸೋಮಣ್ಣ ಭರವಸೆ ನೀಡಿದರು.

**ಮೂರು ಹಂತಗಳಲ್ಲಿ ಯೋಜನೆ**

- ಹಂತ 1 - ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನಿಡವಂದ - ದೊಡ್ಡಬಳ್ಳಾಪುರ - ದೇವನಹಳ್ಳಿ- ಕೋಲಾರದ ಮಾಲೂರುವರೆಗೂ.
- ಹಂತ 2 - ಕೋಲಾರದಮಾಲೂರು - ಬೆಂಗಳೂರು ಗ್ರಾಮಾಂತರದ ಆನೇಕಲ್ - ಬೆಂಗಳೂರು ನಗರದ ಹೆಜ್ಜಾಲವರೆಗೂ.
- ಹೆಜ್ಜಾಲ - ರಾಮನಗರ ಜಿಲ್ಲೆಯ ಸೋಲೂರು -ನಿಡವಂದ

**ಉಪ ನಗರ ರೈಲು ಕೂಡ ಸೇರ್ಪಡ**

**ವರ್ತುಲ ರೈಲು ಯೋಜನೆಗೆ ಸಾಧ್ಯವಿರುವೆಡೆ ಉಪನಗರ ರೈಲನ್ನು ಜೋಡಣೆ ಮಾಡಲು ಯೋಜನೆ ರೂಪಿಸಲಾಗುತ್ತಿದೆ. ಜತೆಗೆ ರಾಷ್ಟ್ರೀಯ ಹೆದ್ದಾರಿಗಳಯ, ರಾಜ್ಯ ಹೆದ್ದಾರಿಗಳು ಕೂಡ ಸಂಪರ್ಕ ಹೊಂದಲಿವೆ. ಇದು ಸಾರ್ವಜನಿಕರಿಗೆ ಅನುಕೂಲವಾಗಲಿದೆ ಎಂದು ಸಚಿವ ವಿ ಸೋಮಣ್ಣ ಮಾಹಿತಿ ನೀಡಿದರು.**

## ಸಂಸ್ಥೆಗಳಿಂದ ಪಾದಚಾರಿ ಮಾರ್ಗ ಅಭಿವೃದ್ಧಿ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಖಾಸಗಿ ಸಂಸ್ಥೆಗಳು, ಅಪಾರ್ಟ್‌ಮೆಂಟ್, ಕಾಂಪ್ಲೆಕ್ಸ್ ಹಾಗೂ ಇತರ ಖಾಸಗಿ ಸಂಸ್ಥೆಗಳು ತಮ್ಮ ಆವರಣದ ಮುಂಭಾಗದಲ್ಲಿರುವ ಪಾದಚಾರಿ ಮಾರ್ಗಗಳನ್ನು ಸ್ವಯಂ ಪ್ರೇರಿತವಾಗಿ ಅಭಿವೃದ್ಧಿಪಡಿಸಿ, ನಿರ್ವಹಣೆ ಮಾಡಬೇಕು ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಸೂಚಿಸಿದರು.

ಮಹದೇವಪುರ ವಲಯದಲ್ಲಿ ಪರಿಶೀಲನೆ ಸಂದರ್ಭದಲ್ಲಿ ಮಾತನಾಡಿದ ಅವರು, ಖಾಸಗಿಯವರು ಪಾದಚಾರಿ ಮಾರ್ಗದ ಅಭಿವೃದ್ಧಿ ಹಾಗೂ ನಿರ್ವಹಣೆ ಮಾಡಲು ಅನುಕೂಲವಾಗಲು ವಿಭಾಗೀಯ ಆದೇಶ ಹೊರಡಿಸುವಂತೆ ಅಧಿಕಾರಿಗಳಿಗೆ ಆದೇಶಿಸಿದರು. ರಸ್ತೆ ಬದಿಯ ಎಲ್ಲಾ ಮನೆಗಳ ಮುಂಭಾಗದ ಗೇಟುಗಳು ಒಳಭಾಗಕ್ಕೆ ತೆರೆಯುವಂತಿರಬೇಕು. ಪಾದಚಾರಿ ಮಾರ್ಗದ ಮೇಲೆ ಹೊರಗೆ ತೆರೆಯುವಂತಹ ಗೇಟುಗಳನ್ನು ಅಳವಡಿಸಿದವರಿಗೆ ದಂಡ ವಿಧಿಸಬೇಕು. ಈ ನಿಯಮವನ್ನು ಕಡ್ಡಾಯವಾಗಿ ಜಾರಿಗೆ ತರುವ ಉದ್ದೇಶದಿಂದ ಎಲ್ಲಾ ಆವರಣದ ಗೇಟುಗಳ ಸಮಗ್ರ ಪರಿಶೀಲನೆ ನಡೆಸಬೇಕು' ಎಂದು ಸೂಚಿಸಿದರು. ಮಹದೇವಪುರ ವಲಯ ವ್ಯಾಪ್ತಿಯ ಸೀತಾರಾಮ್ ಪಾಳ್ಯ ಮೆಟ್ರೊ ನಿಲ್ದಾಣದಿಂದ ಬಿಇಎಂಎಲ್ ಲೇಔಟ್ ಮುಖ್ಯರಸ್ತೆವರೆಗೆ ಪರಿಶೀಲಿಸಿದ ಮಹೇಶ್ವರ್ ರಾವ್, ಪಾದಚಾರಿ ಮಾರ್ಗದ ಒತ್ತುವರಿ ತೆರವು, ರಾಜಕಾಲುವೆಯ ಹತ್ತಿರದ ಕಟ್ಟಡಗಳ ತೆರವಿಗೆ ಕ್ರಮ ವಹಿಸಲು ಸೂಚಿಸಿದರು. ವಲಯ ಆಯುಕ್ತರು ಅಭಿವೃದ್ಧಿ ಕಾಮಗಾರಿಗಳ ಬಗ್ಗೆ ನಿರಂತರ ಪರಿಶೀಲಿಸಬೇಕು ಎಂದು ತಿಳಿಸಿದರು. ಬ್ರಿಗೇಡ್ ಟೆಕ್ ಗಾರ್ಡನ್ ಸಂಸ್ಥೆಯವರು ಪಾದಚಾರಿ ಮಾರ್ಗದಲ್ಲಿ ಅಡ್ಡಲಾಗಿ ಅಳವಡಿಸಿರುವ ಕರ್ಬ್‌ಗಳನ್ನು ಕೂಡಲೇ ತೆರವುಗೊಳಿಸಬೇಕು, ಐಟಿಪಿಎಲ್ ಮುಖ್ಯ ರಸ್ತೆಯಲ್ಲಿರುವ ಶಿವಶಕ್ತಿ ಬಾರ್‌ನವರು ಮದ್ಯದ ಬಾಟಲ್, ಪ್ಲಾಸ್ಟಿಕ್ ಬಾಟಲ್‌ಗಳನ್ನು ರಸ್ತೆಗೆ ಎಸದಿದ್ದು, ಅದನ್ನು ತೆರವುಗೊಳಿಸಿ. ಬಾರ್‌ನವರಿಗೆ ದಂಡ ವಿಧಿಸಲು ಸೂಚಿಸಿದರು.

ಗ್ರಾಫೈಟ್ ಇಂಡಿಯಾ ಮುಖ್ಯರಸ್ತೆಯಲ್ಲಿನ ರಾಯಲ್ ಬಿಲ್ಡಿಂಗ್ ಹೌಸ್‌ನವರು ತ್ಯಾಜ್ಯವನ್ನು ಪಾದಚಾರಿ ಮಾರ್ಗದಲ್ಲಿ ಹಾಕಿದ್ದು, ಅವರಿಗೆ ದಂಡ ವಿಧಿಸಬೇಕು. ವಾಹನಗಳನ್ನು ನಿಲುಗಡೆ ಮಾಡುವುದನ್ನು ತಡೆಯಬೇಕು ಎಂದರು. ಐಟಿಪಿಎಲ್ ಮುಖ್ಯರಸ್ತೆಯಲ್ಲಿರುವ ಅಕ್ಕೆ ಎನ್‌ಕೋರ್ ಅಪಾರ್ಟ್‌ಮೆಂಟ್‌ನವರು ತ್ಯಾಜ್ಯ ನೀರನ್ನು ಚರಂಡಿಗೆ ಬಿಡುತ್ತಿದ್ದು, ಅವರ ಮೇಲೆ ಕ್ರಮ ಕೈಗೊಳ್ಳಲು ಸೂಚಿಸಿದರು.

## ತಲಾ ರೂ.1ಕೋಟಿ ಪರಿಹಾರ ನೀಡಲು ಸಿ.ಎಂ.ಇಬ್ರಾಹಿಂ ಆಗ್ರಹ

• ಉದಯವಾಹಿನಿ, ಬೆಂಗಳೂರು

ಆರ್‌ಸಿಬಿ ತಂಡದ ಸಂಭ್ರಮಾಚರಣೆ ವೇಳೆ ಕಾಲ್ತುಳಿತದಲ್ಲಿ ಅಮಾಯಕರು ಬಲಿಯಾಗಿದ್ದು, ಅವರ ಕುಟುಂಬಗಳಿಗೆ 1 ಕೋಟಿ ಹಾಗೂ ಗಾಯಾಳುಗಳಿಗೆ ರೂ. 25 ಲಕ್ಷ ಪರಿಹಾರ ನೀಡಬೇಕು ಎಂದು ಕೇಂದ್ರ ಮಾಜಿ ಸಚಿವ ಸಿ.ಎಂ.ಇಬ್ರಾಹಿಂ ಆಗ್ರಹಿಸಿದರು.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹಣ ಕೊಟ್ಟು ಆಟಗಾರರನ್ನು ಖರೀದಿಸುವ ಐಪಿಎಲ್ ಕ್ರಿಕೆಟ್ ದೇಶದ ಅತಿ ದೊಡ್ಡ ಜೂಜು ಕ್ರೀಡೆ. ಇದರ ಹುಚ್ಚು ಅಭಿಮಾನದಿಂದಾಗಿ ಕೋಟ್ಯಂತರ ರೂಪಾಯಿ ಕಳೆದುಕೊಂಡವರಿದ್ದಾರೆ. ಈ ಜೂಜಾಟದ ಕ್ರೀಡೆಯನ್ನು ದೇಶದಿಂದಲೇ ನಿಷೇಧಿಸಲು ಬಿಸಿಸಿಐ ಕ್ರಮ ವಹಿಸಬೇಕು' ಎಂದು ಆಗ್ರಹಿಸಿದರು. ಐಪಿಎಲ್‌ನಲ್ಲಿ ಗೆದ್ದವರನ್ನು ವಿಧಾನಸೌಧದ ಮುಂಭಾಗಕ್ಕೆ ಕರೆತಂದು ಸರ್ಕಾರ ಸನ್ಮಾನಿಸಲು ಅವರೇನು ಪಹಲ್ಗಾಂನಲ್ಲಿ ನಾಗರಿಕರ ರಕ್ಷಣೆಗೆ ಹೋರಾಡಿದವರೇ ಹಾಕಿ, ವಾಲಿಬಾಲ್, ಕಬಡ್ಡಿಯಂತೆ ದೇಶಿಯ ಕ್ರೀಡೆಗಳು. ಕ್ರಿಕೆಟ್ ದೇಶಿಯ ಕ್ರೀಡೆಯಲ್ಲ. ಅದಕ್ಕೆ ಅಷ್ಟೊಂದು ಮಾನ್ಯತೆ ಯಾಕೆ ನೀಡಬೇಕು? ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಸ್ಥಳಾವಕಾಶ ಕಡಿಮೆ ಇದ್ದರೂ ಪೊಲೀಸರ ಅನುಮತಿ ಇಲ್ಲದೇ ಭಾರಿ ಸಂಖ್ಯೆಯಲ್ಲಿ ಸೇರಲು ಅವಕಾಶ ಯಾಕೆ ನೀಡಿದರು ಎಂದು ಪ್ರಶ್ನಿಸಿದರು. ಸರ್ಕಾರ ಹಾಗೂ ಕರ್ನಾಟಕ ಕ್ರಿಕೆಟ್ ಅಸೋಸಿಯೇಷನ್, ಆರ್‌ಸಿಬಿ ಮ್ಯಾನೇಜ್‌ಮೆಂಟ್ ಯಾವುದೇ ಮುಂಜಾಗ್ರತಾ ಕ್ರಮ ವಹಿಸದೆ ಲೋಪವೆಸಗಿವೆ. ಅವಘಡಕ್ಕೆ ಕಾರಣರಾದ ಎಲ್ಲಾ ತಪ್ಪಿತಸ್ಥರಿಗೂ ಶಿಕ್ಷೆಯಾಗಬೇಕು ಎಂದು ಆಗ್ರಹಿಸಿದರು.

**ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ ಅಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ಮಾತನಾಡಿ, 'ಐಪಿಎಲ್ ಕ್ರಿಕೆಟ್ ಎಂಬುದು ಮಟ್ಕಾ, ರಮ್ಮಿಯಂತೆ ದೊಡ್ಡ ಜೂಜು ದಂಧೆ. ಸರ್ಕಾರ ತನ್ನ ಪ್ರಚಾರಕ್ಕಾಗಿ ಸಂಭ್ರಮಾಚರಣೆ ನಡೆಸಿದೆ. ಸರಿಯಾಗಿ ನಿಭಾಯಿಸಲು ಆಗದೆ 11 ಮಂದಿ ಮೃತಪಪಟ್ಟ ಮೇಲೆ ಈಗ ಕಣ್ಣೀರು ಸುರಿಸುವ ಹೊಸ ನಾಟಕ ಶುರುಮಾಡಿದ್ದಾರೆ' ಎಂದು ಟೀಕಿಸಿದರು.**

ಮುಖ್ಯಮಂತ್ರಿ ಸಿದ್ದರಾಮಯ್ಯ ಈ ರೀತಿಯಾಗಿ ಕಾರ್ಯಕ್ರಮ ಆಯೋಜನೆಗೆ ನಿರ್ಧಾರ ಕೈಗೊಳ್ಳುವುದಿಲ್ಲ. ಕೆಲವರ ಪ್ರೇರಣೆಯಿಂದ ಹೀಗಾಗಿದೆ. ಗೋವಿಂದರಾಜು ಅವರನ್ನು ಮುಖ್ಯಮಂತ್ರಿಯ ರಾಜಕೀಯ ಕಾರ್ಯದರ್ಶಿ ಸ್ಥಾನದಿಂದ ಕೆಳಗಿಳಿಸಲಾಗಿದೆ. ತನಿಖೆ ಬಳಿಕ ತಪ್ಪಿತಸ್ಥರು ಯಾರು ಎಂಬುದು ಎಲ್ಲವೂ ಗೊತ್ತಾಗಲಿದೆ ಎಂದರು.

## ಲೈಂಗಿಕ ಶಿಕ್ಷಣ ನೀಡಲು ಮುಂದಾದ ಇಲಾಖೆ, ಕೆಲ ಸಂಘಟನೆಗಳ ಆಕ್ರೋಶ

• ಉದಯವಾಹಿನಿ, ಬೆಂಗಳೂರು



ಉದಯವಾಹಿನಿ ಚಿತ್ರ

ಮಕ್ಕಳಲ್ಲಿ ಜಾಗೃತಿ ಮೂಡಿಸಲು ಪ್ರಸಕ್ತ ಶೈಕ್ಷಣಿಕ ಸಾಲಿನಿಂದ ನೈತಿಕ ಶಿಕ್ಷಣದ ಹೆಸರಿನಲ್ಲಿ ಲೈಂಗಿಕ ಶಿಕ್ಷಣ ನೀಡಲು ಶಾಲಾ ಶಿಕ್ಷಣ ಇಲಾಖೆ ಮುಂದಾಗಿದ್ದು, ಕೆಲ ಸಂಘಟನೆಗಳು ಆಕ್ರೋಶಕ್ಕೆ ಕಾರಣವಾಗಿದೆ. ಶಾಲೆಗಳಲ್ಲಿ ಲೈಂಗಿಕ ಶಿಕ್ಷಣ ನೀಡಲು ಈ ಹಿಂದೆ 2015 ರಲ್ಲಿಯೂ ಪ್ರಯತ್ನಗಳಾಗಿತ್ತು. ಆಗ ಹೆಚ್.ಎಸ್.ದೊರೆಸ್ವಾಮಿ ಸೇರಿದಂತೆ ಅನೇಕರು ಭಾರಿ ವಿರೋಧ ವ್ಯಕ್ತ ಪಡಿಸಿದ್ದರು. ಮಕ್ಕಳಲ್ಲಿ ಲೈಂಗಿಕ ಶಿಕ್ಷಣ ನೀಡಿ ಸಮಾಜದ ಅಧಃಪತನಕ್ಕೆ ಸರ್ಕಾರವೇ ಕಾರಣವಾಗಲಿದೆ ಎಂದು ಆಕ್ರೋಶಗಳು ವ್ಯಕ್ತವಾಗಿದ್ದವು. ಪ್ರಗತಿ ಪರ ಸಂಘಟನೆಗಳು ಸೇರಿದಂತೆ ಭಾರೀ ವಿರೋಧ ವ್ಯಕ್ತವಾದ ಹಿನ್ನೆಲೆಯಲ್ಲಿ ಸರ್ಕಾರ ತನ್ನ ಆಲೋಚನೆಗಳಿಂದ ಹಿಂದೆ ಸರಿದಿತ್ತು. ಈಗ ಮತ್ತೆ ಲೈಂಗಿಕ ಶಿಕ್ಷಣದ ವಿವಾದ ಸದ್ದು ಮಾಡಲಾರಂಭಿಸಿದೆ. ಕೇಂದ್ರ ಸರ್ಕಾರ ಹೊಸ ಶಿಕ್ಷಣ ನೀತಿ ರೂಪಿಸಿದ್ದು, ಅದನ್ನು ಒಪ್ಪುವುದಿಲ್ಲ ಎಂದು ಕಾಂಗ್ರೆಸ್ ಪಕ್ಷದ ತನ್ನ ಚುನಾವಣಾ ಪ್ರಣಾಳಿಕೆಯಲ್ಲೇ ಪ್ರಕಟಿಸಿತ್ತು. ಸರ್ಕಾರ ರಚನೆಯಾದ ಮೇಲೆ ರಾಜ್ಯ ಸರ್ಕಾರ ಪ್ರತ್ಯೇಕ ಶಿಕ್ಷಣ ನೀತಿ ರೂಪಿಸಲು ಉನ್ನತಾಧಿಕಾರ ಸಮಿತಿ ರಚನೆ ಮಾಡಿದೆ.

ರಾಜ್ಯ ಶಿಕ್ಷಣ ನೀತಿ ಇನ್ನೂ ಅಖೈರುಗೊಂಡಿಲ್ಲ, ಈ ನಡುವೆ ನೈತಿಕ ಶಿಕ್ಷಣ ನೀಡುವ ಚರ್ಚೆಗಳು ಆರಂಭವಾಗಿವೆ. 8 ರಿಂದ 12ನೇ ತರಗತಿಯ ಮಕ್ಕಳವರೆಗೆ ಆಯಾ ವಯಸ್ಸಿಗೆ ಅನುಗುಣವಾಗಿ ಲೈಂಗಿಕ ಶಿಕ್ಷಣ ನೀಡಲು ಶಾಲಾ ಶಿಕ್ಷಣ ಇಲಾಖೆ ಮುಂದಾಗಿದೆ. ಮಕ್ಕಳಲ್ಲಿ ಅವಧಿ ಮೀರಿದ ಬೆಳವಣಿಗೆ, ಅಸಹಜವಾದ ಪ್ರೌಢಾವಸ್ಥೆ, ಹಾರ್ಮೋನ್ ಬೆಳವಣಿಗೆ ಸೇರಿದಂತೆ ನಾನಾ ರೀತಿಯ ವೈಪರೀತ್ಯಗಳು ಕಂಡು ಬರುತ್ತಿವೆ. ಇದರಿಂದ ಮಕ್ಕಳಲ್ಲಿ ಮಾನಸಿಕ ಚಂಚಲತೆ, ಗೊಂದಲಗಳು ತೀವ್ರಗೊಳ್ಳುತ್ತಿವೆ. ವೈಜ್ಞಾನಿಕ ಹಾಗೂ ಆಧುನಿಕ ಯುಗದಲ್ಲಿ ವಿದ್ಯುನ್ಮಾನ ಮಾಧ್ಯಮಗಳು ಮಕ್ಕಳನ್ನು ಮತ್ತಷ್ಟು ಮುಂದಾಲೋಚನೆಗೆ ಗುರಿ ಮಾಡಿವೆ. ಈ ಹಿನ್ನೆಲೆಯಲ್ಲಿ ವಿಕ್ಷಿಪ್ತ ಬೆಳವಣಿಗೆಗಳಾಗುತ್ತಿವೆ. ಅವುಗಳನ್ನು ಬಾಲ್ಯಾವಸ್ಥೆಯಲ್ಲೇ ನಿಯಂತ್ರಿಸಲು ಸೂಕ್ತ ಶಿಕ್ಷಣ ಅಗತ್ಯ ಎಂಬ ಸಲಹೆಗಳಿವೆ. ಮನೆಯಲ್ಲಿ ಪೋಷಕರು ಹಾರ್ಮೋನ್ ಬೆಳವಣಿಗೆಗಳು ಮತ್ತು ಅದರಿಂದಾಗುವ ಪರಿಣಾಮಗಳ ಬಗ್ಗೆ ವೈಜ್ಞಾನಿಕ ತಿಳುವಳಿಕೆ ನೀಡುವುದು ಕಷ್ಟ ಸಾಧ್ಯವಾಗಿದ್ದು, ಶಾಲಾ-ಕಾಲೇಜು ಹಂತದಲ್ಲಿ ಈ ಅರಿವು ಮೂಡಿಸುವುದಾದರೆ ಮಕ್ಕಳು ಹೆಚ್ಚು ಪ್ರಜ್ಞಾವಂತಿಕೆ ಹಾಗೂ ಜಾಗೃತರಾಗಲು ಸಾಧ್ಯವಾಗುತ್ತದೆ ಎಂಬ ವಾದಗಳಿವೆ. ನೈತಿಕ ಶಿಕ್ಷಣದೊಂದಿಗೆ ಹಿಂದೆ ಮಹಾಭಾರತ ಹಾಗೂ ರಾಮಾಯಣದ ಸಾರಾಂಶಗವನ್ನು ಮಕ್ಕಳಿಗೆ ಬೋಧಿಸಲು ಹಿಂದಿನ ಬಿಜೆಪಿ ಸರ್ಕಾರ ಮುಂದಾಗಿತ್ತು.

# ಬಿ ದಯಾನಂದ ಪರ ದನಿ ಎತ್ತಿದ ಕಾಂಗ್ರೆಸ್ ಹಾಲಿ ಸಚಿವರ ಪತ್ನಿ!

### ಸಾಮಾಜಿಕ ಜಾಲತಾಣದಲ್ಲಿ ಬಿ.ದಯಾನಂದ್ ಪರ ಸಹಾನುಭೂತಿ ವ್ಯಕ್ತವಾಗುತ್ತಿದೆ

• ಉದಯವಾಹಿನಿ, ಬೆಂಗಳೂರು

ಚಿನ್ನಸ್ವಾಮಿ ಸ್ಟೇಡಿಯಂ ಕಾಲ್ತುಳಿದ ದುರಂತದಲ್ಲಿ ಪೊಲೀಸ್ ವೈಫಲ್ಯದ ಆಪಾದನೆಯಡಿ ಬೆಂಗಳೂರು ನಗರ ಪೊಲೀಸ್ ಆಯುಕ್ತರ ಸ್ಥಾನದಿಂದ ಅಮಾನತುಗೊಂಡಿರುವ ಬಿ. ದಯಾನಂದ್ ಪರ ಸಹಾನುಭೂತಿ ವ್ಯಕ್ತವಾಗುತ್ತಿದೆ.

ಸ್ವತಃ ಕಾಂಗ್ರೆಸ್ ಹಿರಿಯ ಸಚಿವರ ಪತ್ನಿಯೇ ಬಿ ದಯಾನಂದ್ ಪರ ಸಾಮಾಜಿಕ ಜಾಲತಾಣದಲ್ಲಿ ದನಿ ಎತ್ತಿದ್ದಾರೆ. ಬಿ ದಯಾನಂದ್ ಅವರನ್ನು ಅಮಾನತು ಮಾಡಿದ ಬಳಿಕ ಸರ್ಕಾರದ ನಿರ್ಧಾರಕ್ಕೆ ವ್ಯಾಪಕ ಖಂಡನೆ ವ್ಯಕ್ತವಾಡಿದೆ. ವಿಶೇಷವಾಗಿ ಸೋಷಿಯಲ್ ಮೀಡಿಯಾಗಳಲ್ಲಿ ದಯಾನಂದ್ ಅವರನ್ನು ಬೆಂಬಲಿಸಿ ಪೋಸ್ಟ್‌ಗಳು ಹರಿದಾಡುತ್ತಿರುವುದು ಗಮನ ಸೆಳೆದಿದೆ. ಸಚಿವ ದಿನೇಶ್ ಗುಂಡೂರಾವ್ ಪತ್ನಿ ಟಬುರಾವ್ ಟ್ವೀಟರ್‌ನಲ್ಲಿ (ಎಕ್ಸ್) ತಮ್ಮ ಅಭಿಪ್ರಾಯ ದಾಖಲಿಸಿದ್ದು, ದಯಾನಂದ್ ಘನತೆಯ ಹಾಗೂ ಪ್ರಾಮಾಣಿಕ, ಉತ್ತಮ ಅಧಿಕಾರಿ, ಎಂದು ತಿಳಿಸಿದ್ದಾರೆ.

**ಸಚಿವರ ಪತ್ನಿ ಪೋಸ್ಟ್ ಆರ್ ಅಶೋಕ್ ಉಲ್ಲೇಖ:** ಟಬುರಾವ್ ಅವರ ಟ್ವೀಟ್ ಅನ್ನು ಉಲ್ಲೇಖ ಮಾಡಿ ಪ್ರತಿಕ್ರಿಯೆ ನೀಡಿರುವ ವಿರೋಧ ಪಕ್ಷದ ನಾಯಕ ಆರ್ ಅಶೋಕ್ ಅವರು, ಮಂತ್ರಿಗಳ ಕುಟುಂಬ ಸದಸ್ಯರು ಸಹ ಕಾಲ್ತುಳಿತದ ವಿಷಯದಲ್ಲಿ ಬೆಂಗಳೂರು ನಗರ ಪೊಲೀಸ್ ಆಯುಕ್ತ ಬಿ.ದಯಾನಂದ ಅವರನ್ನು ಬಲಿಪಶುವನ್ನಾಗಿ ಮಾಡಲಾಗಿದೆ ಎಂದು ಒಪ್ಪುತ್ತಾರೆ. ಸಿಎಂ ಸಿದ್ದರಾಮಯ್ಯ ಅವರೇ ಕಾಲ್ತುಳಿತ ದುರಂತ ವಿಚಾರದಲ್ಲಿ ಜನ



ಹಾದಿ ಬೀದಿಯಲ್ಲಿ ನಿಮ್ಮ ಸರ್ಕಾರಕ್ಕೆ ಶಾಪ ಹಾಕುತ್ತಿರುವ ವಿಷಯ ಎಲ್ಲರಿಗೂ ಗೊತ್ತಿರುವುದೆ. ಆದರೆ, ಈಗ ಸ್ವತಃ ನಿಮ್ಮ ಕಾಂಗ್ರೆಸ್ ಪಕ್ಷದ ಮಂತ್ರಿಗಳು, ಶಾಸಕರು, ಅವರ ಕುಟುಂಬ ಸದಸ್ಯರೇ ನಿಮಗೆ ಛೀಮಾರಿ ಹಾಕುತ್ತಿದ್ದಾರೆ. ಇನ್ನೆಷ್ಟು ದಿನ ಸ್ವಾಮಿ ಈ ಭಂಡ ಬಾಳು ರಾಜೀನಾಮೆ ಕೊಟ್ಟು ಮನೆಗೆ ಹೋಗಿ ಗೌರವ ಉಳಿಸಿಕೊಳ್ಳಿ ಎಂದು ಕಿಡಿಕಾರಿದ್ದಾರೆ.

ದಯಾನಂದ್ ಅವರ ಅಮಾನತು ಖಂಡಿಸಿದ ಮಂಡ್ಯ ಜಿಲ್ಲೆಯ ಕಾನ್‌ಸ್ಟೆಬಲ್ ನರಸಿಂಹ ರಾಜು, ಕೈಗೆ ಕಪ್ಪು ಪಟ್ಟಿ ಧರಿಸಿ, ಅಂಬೇಡ್ಕರ್ ಫೋಟೊ ಹಿಡಿದು ರಾಜಭವನದ ಮುಂದೆ ಸಾಂಕೇತಿಕ ಪ್ರತಿಭಟನೆ ನಡೆಸಿದರು. ಜತೆಗೆ, ದಯಾನಂದ್ ಅವರ ಅಮಾನತು ಹಿಂಪಡೆಯಲು ರಾಜ್ಯ ಸರಕಾರಕ್ಕೆ ರಾಜ್ಯಪಾಲರು ಸೂಚಿಸಬೇಕು ಎಂಬ ಕೋರಿಕೆಯ ದೂರನ್ನು ಸಲ್ಲಿಸುವ ಇರಾದೆ ಹೊಂದಿದ್ದರು. ಆದರೆ, ಸ್ಥಳದಲ್ಲಿದ್ದ ಪೊಲೀಸರು ನರಸಿಂಹರಾಜು ಅವರನ್ನು ವಶಕ್ಕೆ ಪಡೆದು ವಿಧಾನಸೌಧ ಠಾಣೆಗೆ ಕರೆದೊಯ್ದರು. ನಗರ ಪೊಲೀಸ್ ಆಯುಕ್ತರಾಗಿ ಎರಡು ವರ್ಷಗಳ ಕಾಲ ದಯಾನಂದ್ ಅವರ ಕಾರ್ಯದ ಆಡಳಿತವನ್ನು ಉಲ್ಲೇಖಿಸಿರುವ ನೂರಾರು ಮಂದಿ ಸಾಮಾಜಿಕ ಜಾಲತಾಣಗಳಲ್ಲಿ ಸರಕಾರವನ್ನು ತರಾಟೆಗೆ ತೆಗೆದುಕೊಂಡಿದ್ದಾರೆ. ನಗರದ ಪೊಲೀಸ್ ಠಾಣೆಗಳಲ್ಲಿನ ಲಂಚಗುಳಿತನಕ್ಕೆ ಕಡಿವಾಣ, ಪಾರದರ್ಶಕ ಪೊಲೀಸಿಂಗ್‌ಗೆ ಒತ್ತು ನೀಡಿದ್ದ ಕ್ರಮಗಳನ್ನು ಮುಂದಿಟ್ಟಿರುವ ನಾಗರಿಕರು, ಸರಕಾರದ ತೀರ್ಮಾನವನ್ನು ಕಟುವಾಗಿ ಪ್ರಶ್ನಿಸಿದ್ದಾರೆ.

**ಪೊಲೀಸ್ ಇಲಾಖೆಯ ಕರಾಳ ಅಧ್ಯಾಯ ಎಂದ ಭಾಸ್ಕರ್ ರಾವ್:** ಮತ್ತೊಂದೆಡೆ, ರಾಜ್ಯ ಸರಕಾರದ ನಡೆಯನ್ನು ತೀವ್ರವಾಗಿ ಖಂಡಿಸಿರುವ ಮಾಜಿ ಪೊಲೀಸ್ ಆಯುಕ್ತ, ಬಿಜೆಪಿ ವಕ್ತಾರ ಭಾಸ್ಕರ ರಾವ್ ಕಮಿಷನರ್ ದಯಾನಂದ್ ಅವರ ಅಮಾನತು ರಾಜ್ಯ ಪೊಲೀಸ್ ಇಲಾಖೆಯ ಕರಾಳ ಅಧ್ಯಾಯವಾಗಲಿದೆ' ಎಂದು ತಮ್ಮ ಎಕ್ಸ್ ಖಾತೆಯಲ್ಲಿ ಬರೆದಿದ್ದಾರೆ.

**ಕನ್ನಡ ಹೋರಾಟಗಾರ ರೂಪೇಶ್ ರಾಜಣ್ಣ ಆಗ್ರಹ**

**ಅಧಿಕಾರಿಗಳು ತಮಗೆ ತಾವೇ ಕಾರ್ಯಕ್ರಮ ನಡೆಯಲಿ ಎಂದು ತೀರ್ಮಾನಿಸಲು ಸಾಧ್ಯವಿಲ್ಲ. ಇದು ರಾಜಕೀಯ ತೀರ್ಮಾನ. ಇದನ್ನು ಯಾರು ಮಾಡಿದ್ದಾರೋ ಅವರ ಮೇಲೆ ಕ್ರಮ ಆಗಲಿ. ಅದಕ್ಕೆ ಪೊಲೀಸ್ ಅಧಿಕಾರಿಗಳ್ಯಾಕೆ ಬಲಿಯಾಗಬೇಕು. ದಕ್ಷ ಅಧಿಕಾರಿ, ಜನಪರ ಕೆಲಸ ಮಾಡುತ್ತಿದ್ದ ದಯಾನಂದ್ ಅವರ ಅಮಾನತು ವಾಪಸ್ ಪಡೆಯಬೇಕು' ಎಂದು ಸರಕಾರಕ್ಕೆ ಕನ್ನಡ ಹೋರಾಟಗಾರ ರೂಪೇಶ್ ರಾಜಣ್ಣ ಆಗ್ರಹಿಸಿದ್ದಾರೆ.**

**ಐ ಸ್ಟ್ಯಾಂಡ್ ಫಾರ್ ದಯಾನಂದ್ ಪೋಸ್ಟರ್**

**ಪೊಲೀಸ್ ಇಲಾಖೆ ಹಾಗೂ ನಿವೃತ್ತ ಪೊಲೀಸ್ ಅಧಿಕಾರಿಗಳು ಸರಕಾರದ ತೀರ್ಮಾನದ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದು, ಪ್ರಾಮಾಣಿಕತೆಗೆ ಸರಕಾರ ನೀಡಿದ ಉಡುಗೊರೆ' ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಸಾಮಾಜಿಕ ಜಾಲತಾಣಗಳಲ್ಲಿಯೂ ಐ ಸ್ಟ್ಯಾಂಡ್ ಫಾರ್ ದಯಾನಂದ್' ಪೋಸ್ಟರ್‌ಗಳನ್ನು ಹಂಚಿಕೊಂಡು ದಯಾನಂದ್ ಅವರ ಪರ ನಿಂತಿದ್ದಾರೆ.**

ಉದಯವಾಹಿನಿ

ಪ್ರಾದೇಶಿಕ

ಸೋಮವಾರ 09 ಜೂನ್ 2025 | 03

# ಸರ್ಕಾರದ ವಿರುದ್ಧ ಹೆಚ್‌ಡಿಕೆ ತೀವ್ರ ಕಿಡಿ

## ಕಾವೇರಿ ಆರತಿ ಯೋಜನೆಗೆ 100 ಕೋಟಿ ರೂ. ಏಕೆ ಬೇಕು?

• **ಉದಯವಾಹಿನಿ, ಮಂಡ್ಯ**

ಕಾವೇರಿ ಆರತಿ ಯೋಜನೆಗೆ 100 ಕೋಟಿ ರೂಪಾಯಿ ವೆಚ್ಚ ಮಾಡುವ ರಾಜ್ಯ ಸರ್ಕಾರದ ಪ್ರಸ್ತಾವನೆಗೆ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿಯವರು ತೀವ್ರವಾಗಿ ಕಿಡಿಕಾರಿದ್ದಾರೆ. ಮಂಡ್ಯದಲ್ಲಿ ಮೈಶುಗರ್ ಪ್ರೌಢಶಾಲೆಯ ಅಮೃತ ಮಹೋತ್ಸವ ಸಮಾರಂಭದಲ್ಲಿ ಮಾತನಾಡಿದ ಅವರು, ಕಾವೇರಿ ಆರತಿಗೆ 100 ಕೋಟಿ ರೂಪಾಯಿಗಳು ಏಕೆ ಬೇಕು ಜೆಡಿಎಸ್ ನಾಯಕ ಪುಟ್ಟರಾಜು ಕೆರೆ ತೊಣ್ಣೂರಿನಲ್ಲಿ ಇಂತಹ ಕಾರ್ಯಕ್ರಮ ಮಾಡಿದಾಗ ಎಷ್ಟು ಖರ್ಚಾಗಿತ್ತು ಇಷ್ಟೊಂದು ಬೃಹತ್ ಮೊತ್ತ ವೆಚ್ಚ ಮಾಡುವುದು ಏತಕ್ಕೆ ಎಂದು ಪ್ರಶ್ನೆ ಮಾಡಿದರು.

ಬೆಂಗಳೂರು ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಸಂಭವಿಸಿದ ಕಾಲ್ತುಳಿತದ ವಿಚಾರದಲ್ಲಿ ರಾಜ್ಯ ಸರಕಾರ ಗಂಟೆ ಗಂಟೆಗೊಂದು ನಿರ್ಧಾರ ಮಾಡುತ್ತಿದೆ. ಅಂತಿಮವಾಗಿ ಏನು ಮಾಡುತ್ತದೆ ಎಂಬುದನ್ನು ನೋಡಬೇಕು. ಮೊದಲು ಮ್ಯಾಜಿಸ್ಟ್ರಿಯಲ್ ತನಿಖೆ ಎಂದರು. ಆಮೇಲೆ ನ್ಯಾಯಾಂಗ ತನಿಖೆ ಎಂದು ಹೇಳಿದರು. ಈಗ ಸಿಐಡಿಗೆ ಕೊಡುತ್ತೇವೆ ಎನ್ನುತ್ತಿದ್ದಾರೆ. ಅಂತಿಮವಾಗಿ ಯಾವ ತನಿಖೆ ವರದಿ ಪಡೆದುಕೊಳ್ಳುತ್ತಾರೆ ನೋಡೋಣ ಎಂದು ಟೀಕಿಸಿದರು. ಇದನ್ನು ಸರಕಾರ ಎನ್ನಲು ಆಗುತ್ತದೆಯೇ


ಉದಯವಾಹಿನಿ ಚಿತ್ರ

ಯಾವುದೇ ತೀರ್ಮಾನ ಮಾಡಿದರೆ ಅದರಲ್ಲಿ ಸ್ಪಷ್ಟತೆ ಇರಬೇಕು.

ಅಧಿಕಾರಿಗಳ ತಪ್ಪು ಏನಿತ್ತು ಎಫ್‌ಐಆರ್‌ನಲ್ಲಿ ಅಧಿಕಾರಿಗಳು ಕರ್ತವ್ಯ ಲೋಪವಾಗಿಲ್ಲ ಎಂದು ಉಲ್ಲೇಖ ಮಾಡಿದ್ದಾರೆ. ಆದರೆ, ಈ ವಿಚಾರದಲ್ಲಿ ಸರಕಾರ ಸಂಪೂರ್ಣವಾಗಿ ವಿಫಲವಾಗಿದೆ ಎಂದು ಕಿಡಿಕಾರಿದರು. ಇದೇ ವೇಳೆ ಕುಮಾರಸ್ವಾಮಿ ತಮ್ಮ ಆರೋಗ್ಯ ನೋಡಿಕೊಳ್ಳಲಿ ಎಂದು ಹೇಳಿರುವ ಮಾಜಿ ಸಂಸದ

> **ಪಹಲ್ಗಾಮ್, ಪ್ರಯಾಗ್‌ರಾಜ್‌ನಲ್ಲಿ ನಡೆದ ಘಟನೆಗಳನ್ನು ಹೇಳುತ್ತಿದ್ದಾರೆ. ಆ ಘಟನೆಗಳಿಗೂ ಇದಕ್ಕೂ ಏನು ಸಂಬಂಧ ಇಲ್ಲಿ ಇವರು ಮಾಡಿರುವ ತಪ್ಪಿಗೆ ಪಹಲ್ಗಾಮ್, ಪ್ರಯಾಗ್‌ರಾಜ್ ವಿಚಾರ ತರುತ್ತಿದ್ದಾರೆ. ಮನಮೋಹನ್‌ಸಿಂಗ್ ಪ್ರಧಾನಿಯಾಗಿದ್ದಾಗ ಮುಂಬೈ ಮೇಲೆ ಉಗ್ರರ ದಾಳಿ ಆಗಿತ್ತಲ್ಲವೇ? ಆಗ ಮನಮೋಹನ್‌ಸಿಂಗ್ ಅವರು ರಾಜೀನಾಮೆ ಕೊಟ್ಟಿದ್ರಾ, ಕೇವಲ ಸಿಎಂ, ಡಿಸಿಎಂ ವರ್ಚಸ್ಸು ಹೆಚ್ಚಿಸಿಕೊಳ್ಳಲಿಕ್ಕೆ ಮಾಡಿದ ಶೋ ಇದು ವಾಗ್ದಾಳಿ ನಡೆಸಿದರು.**

ಡಿ.ಕೆ. ಸುರೇಶ್ ಹೇಳಿಕೆಗೆ ತಿರುಗೇಟು ಕೊಟ್ಟ ಅವರು, ನನ್ನ ಆರೋಗ್ಯವನ್ನು ದೇವರು ನೋಡಿಕೊಳ್ಳುತ್ತಾನೆ. ಮಂಡ್ಯ ಜನರ ಹಾರೈಕೆಯಿಂದ ನನಗೆ ಏನೂ ಆಗೋದಿಲ್ಲ. ನಾನು ಯಾವುದೇ ಒತ್ತಡದಲ್ಲಿ ಇಲ್ಲ. ಅವರೇ ಒತ್ತಡದಲ್ಲಿ ಇದ್ದಾರೆ ಎಂದು ಟಾಂಗ್ ನೀಡಿದರು.

# ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘಕ್ಕೆ ಚಾಲನೆ


ಉದಯವಾಹಿನಿ ಚಿತ್ರ

• **ಉದಯವಾಹಿನಿ, ಗುಬ್ಬಿ**

ಕೃಷಿ ಜೊತೆ ಹೈನುಗಾರಿಕೆ ರೂಢಿಸಿಕೊಂಡಲ್ಲಿ ರೈತರು ಉತ್ತಮ ಆದಾಯ ಪಡೆಯಲು ಸಾಧ್ಯ ಎಂದು ಶಾಸಕ ಶ್ರೀನಿವಾಸ್ ಹೇಳಿದರು.

ತಾಲ್ಲೂಕಿನ ಮಠ ಗ್ರಾಮದಲ್ಲಿ ಶನಿವಾರ ಹಾಲು ಉತ್ಪಾದಕ ಮಹಿಳಾ ಸಹಕಾರ ಸಂಘ ಉದ್ಘಾಟಿಸಿ ಮಾತನಾಡಿದರು. ಮಹಿಳೆಯರು ಹಾಲು ಉತ್ಪಾದಕ ಸಹಕಾರ ಸಂಘಗಳನ್ನು ಸ್ಥಾಪಿಸಲು ಮುಂದೆ ಬಂದಿರುವುದು ಉತ್ತಮ ಬೆಳವಣಿಗೆ. ಸಾಧ್ಯವಿರುವಷ್ಟು ಹಸುಗಳನ್ನು ಸಾಕಿಕೊಂಡಲ್ಲಿ ನಿರಂತರ ಆದಾಯ ಕಾಣಲು ಸಾಧ್ಯ. ಇದರಿಂದ ಕೃಷಿ ಚಟುವಟಿಕೆ ಹಾಗೂ ಕುಟುಂಬದ ನಿರ್ವಹಣೆಗೆ ಅನುಕೂಲವಾಗುವುದು.

ಉತ್ತಮ ಉದ್ದೇಶದಿಂದ ಸಹಕಾರ ಸಂಘ ಸ್ಥಾಪಿಸಲಾಗಿದ್ದು, ಯಾವುದೇ ಗೊಂದಲಕ್ಕೆ ಅವಕಾಶ ಕೊಡದೆ ಎಲ್ಲರೂ ಒಗ್ಗಟ್ಟಿನಿಂದ ಇದ್ದು ಸಹಕಾರ ಸಂಘವನ್ನು ಅಭಿವೃದ್ಧಿಯತ್ತ ಕೊಂಡೊಯ್ಯಬೇಕು ಎಂದರು.

## ಮಿನಿ ನ್ಯೂಸ್

### ವಸತಿ ಶಾಲೆ ಪ್ರವೇಶಕ್ಕೆ ಅರ್ಜಿ ಆಹ್ವಾನ

• **ಉದಯವಾಹಿನಿ, ಶಿರಾ**

ತಾಲ್ಲೂಕಿನಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಡಿ ಕಾರ್ಯನಿರ್ವಹಿಸುತ್ತಿರುವ ಅರು ವಸತಿ ಶಾಲೆಗಳಲ್ಲಿ 2025-26ನೇ ಸಾಲಿನಲ್ಲಿ ಉಳಿಕೆಯಿರುವ 7. 8 ಮತ್ತು 9ನೇ ತರಗತಿಗಳ ಖಾಲಿ ಸೀಟುಗಳ ಭರ್ತಿಗೆ ಅರ್ಜಿ ಆಹ್ವಾನಿಸಲಾಗಿದೆ. ಅಂಕಪಟ್ಟಿ, ಜಾತಿ ಪ್ರಮಾಣಪತ್ರಗಳೊಂದಿಗೆ ಸಮೀಪದ ವಸತಿ ಶಾಲೆಗಳು ಹಾಗೂ ಸಹಾಯಕ ಅರ್ಜಿ ಸಲ್ಲಿಸಬಹುದಾಗಿದೆ. ಅರ್ಜಿ ಸಲ್ಲಿಸಲು ಜೂನ್ 12 ಕಡೆಯ ದಿನ ಎಂದು ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ವಿ.ಕೆ.ಬಡಿಗೇರ ತಿಳಿಸಿದ್ದಾರೆ.

### ಉತ್ತರ ಪ್ರದೇಶದ ಬಾಲಕಿ ರಕ್ಷಣೆ

• **ಉದಯವಾಹಿನಿ, ತುಮಕೂರು**

ಉತ್ತರ ಪ್ರದೇಶದ ಮಾಲ್ವಾ ಜಿಲ್ಲೆಯ 15 ವರ್ಷದ ಬಾಲಕಿಯನ್ನು ಕ್ಯಾತ್ಸಂದ್ರ ಠಾಣೆ ಪೊಲೀಸರು ನಗರದಲ್ಲಿ ರಕ್ಷಿಸಿ, ಬಾಲಕಿಯರ ಬಾಲ ಮಂದಿರಕ್ಕೆ ಸೇರಿಸಿದ್ದಾರೆ. ಬಾಲಕಿ ಕಾಣೆಯಾದ ಬಗ್ಗೆ ಮಾಲ್ವಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಪೊಲೀಸರು ಬಾಲಕಿಗಾಗಿ ಹುಡುಕಾಟ ನಡೆಸುತ್ತಿದ್ದರು.

ಉತ್ತರ ಪ್ರದೇಶ ಪೊಲೀಸರು ನೀಡಿದ ಮಾಹಿತಿ ಮೇರೆಗೆ ಬಾಲಕಿಯನ್ನು ರಕ್ಷಿಸಿ, ಆಕೆಯ ಜತೆಗಿದ್ದ ಶಾನವಾಜ್ (25) ಎಂಬ ಯುವಕನನ್ನು ವಶಕ್ಕೆ ಪಡೆದಿದ್ದಾರೆ. ಬಾಲಕಿ ಒಪ್ಪಿ ಯುವಕನ ಜತೆ ಬಂದಿದ್ದು, ಇಬ್ಬರನ್ನೂ ಉತ್ತರ ಪ್ರದೇಶದ ಪೊಲೀಸರಿಗೆ ಹಸ್ತಾಂತರಿಸಲಾಗುವುದು ಎಂದು ಕ್ಯಾತ್ಸಂದ್ರ ಪೊಲೀಸರು ತಿಳಿಸಿದ್ದಾರೆ.

# ಕೆನಾಲ್: ಜಿಲ್ಲೆಗೆ ಅನ್ಯಾಯ ಮಾಡಲು ಹೊರಟ ಸರ್ಕಾರ

• **ಉದಯವಾಹಿನಿ, ಕೊರಟಗೆರೆ**

ಜಿಲ್ಲೆಯ ರೈತರು, ಸಾರ್ವಜನಿಕರ ಹಿತದೃಷ್ಟಿಯಿಂದ ನೀರಾವರಿ ಹೋರಾಟ ನಡೆಸಿದ ಮುಖಂಡರು ಹಾಗೂ ಸ್ವಾಮೀಜಿಗಳ ವಿರುದ್ಧ ಪೊಲೀಸ್ ಇಲಾಖೆ ಬಳಸಿಕೊಂಡು ಕ್ರಿಮಿನಲ್ ಮೊಕ್ಕದ್ದಮೆ ಹೂಡಿರುವ ರಾಜ್ಯ ಸರ್ಕಾರದ ಕ್ರಮ ಖಂಡನೀಯ ಎಂದು ಬಿಜೆಪಿ ಮುಖಂಡ ಬಿ.ಎಚ್.ಅನಿಲ್ ಕುಮಾರ್ ತಿಳಿಸಿದರು. ಪಟ್ಟಣದಲ್ಲಿ ಬಿಜೆಪಿ, ಜೆಡಿಎಸ್ ಜಂಟಿ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು.

ಈಗಾಗಲೇ ಜಿಲ್ಲೆಗೆ ನಿಗದಿಯಾಗಿರುವ ಹೇಮಾವತಿ ನೀರು ಇಲ್ಲಿಯವರೆಗೂ ಸರಿಯಾಗಿ ಬಂದಿಲ್ಲ. ಅಂತಹದರಲ್ಲಿ ಅದೇ ನೀರನ್ನು ಕೆನಾಲ್ ಮೂಲಕ ಕುಣಿಗಲ್ ತಾಲ್ಲೂಕಿಗೆ ಹರಿಸುವ ನೆಪದಲ್ಲಿ ಮಾಗಡಿ ಹಾಗೂ ರಾಮನಗರಕ್ಕೆ ತೆಗೆದುಕೊಂಡು ಹೋಗುವ ಹುನ್ನಾರದ ವಿರುದ್ಧ ಹೋರಾಟ ಮುಂದುವರೆಸುತ್ತೇವೆ. ಬಯಲು ಸೀಮೆ ಪ್ರದೇಶಗಳಾದ ಕೊರಟಗೆರೆ, ಮಧುಗಿರಿ, ಪಾವಗಡ ಭಾಗಕ್ಕೆ ನೀರಿನ ಅವಶ್ಯಕತೆ ಇದ್ದು. ಈ ಭಾಗಕ್ಕೆ ನೀರು ಕಡಿತಗೊಳಿಸಲು ಬಿಡುವುದಿಲ್ಲ. ಇದರ ವಿರುದ್ಧ ರೈತರು, ಮುಖಂಡರು ಹಾಗೂ ಸ್ವಾಮೀಜಿಗಳು ಪ್ರತಿಭಟನೆ ಮಾಡುವುದು ಪ್ರಜಾಪ್ರಭುತ್ವ. ಅದನ್ನು ಕ್ರಿಮಿನಲ್ ಮೊಕದ್ದಮೆ ಹೂಡುವ ಮೂಲಕ ಹತ್ತಿಕ್ಕುವ ಪ್ರಯತ್ನ ನಡೆಯುತ್ತಿದೆ


ಉದಯವಾಹಿನಿ ಚಿತ್ರ

ಎಂದು ಆಪಾದಿಸಿದರು.

ಮುಖಂಡ ವಿಶ್ವನಾಥ ಅಪ್ಪಾಜಪ್ಪ ಮಾತನಾಡಿ, ಜಿಲ್ಲೆಯ ಇಬ್ಬರು ಸಚಿವರಾದ ಪರಮೇಶ್ವರ ಹಾಗೂ ಕೆ.ಎನ್.ರಾಜಣ್ಣ ಅವರ ಜಾಣನಡೆ ಜಿಲ್ಲೆಯ ಜನರಲ್ಲಿ ಬೇಸರ ತರಿಸಿದೆ. ಯಾರನ್ನೋ ಮೆಚ್ಚಿಸಲು ಜಿಲ್ಲೆಯ ಜನರ ಹಿತಾಸಕ್ತಿ ಬಲಿಕೊಡುವುದು

> **ಜೆಡಿಎಸ್ ತಾಲ್ಲೂಕು ಕಾರ್ಯಾಧ್ಯಕ್ಷ ತುಂಬಾಡಿ ಲಕ್ಷ್ಮೀಶ ಮಾತನಾಡಿ, ಮಾಗಡಿ, ರಾಮನಗರಕ್ಕೆ ನೀರು ತರಲು ಪರ್ಯಾಯ ಯೋಜನೆ ಜಾರಿ ರೂಪಿಸಲಿ. ಅದನ್ನು ಬಿಟ್ಟು ಇಲ್ಲಿನ ನೀರು ಹರಿಸಲು ಬಿಡುವುದಿಲ್ಲ. ಈ ಯೋಜನೆಯಿಂದ ಈ ಭಾಗದ ರೈತರಿಗೆ ಅನ್ಯಾಯವಾಗಲಿದೆ ಎಂದು ಹೇಳಿದರು. ಈ ಬಗ್ಗೆ ಜಿಲ್ಲೆಯ ಉಸ್ತುವಾರಿ ಸಚಿವರೂ ಆಗಿರುವ ಕ್ಷೇತ್ರದ ಶಾಸಕರು ದ್ವಿಮುಖ ನೀತಿ ಅನುಸರಿಸಬಾರದು. ಜಿಲ್ಲೆ ಜನರಿಗೆ ಅನ್ಯಾಯವಾಗದಂತೆ ಅವರ ಹಿತ ಕಾಪಾಡಬೇಕು ಎಂದರು.**

ಒಳಿತಾಗುವುದಿಲ್ಲ ಎಂದರು. ಬಿಜೆಪಿ ತಾಲ್ಲೂಕು ಮಂಡಲ ಅಧ್ಯಕ್ಷ ರುದ್ರೇಶ್, ಪಿ.ಎಲ್.ಡಿ.ಬ್ಯಾಂಕ್ ಅಧ್ಯಕ್ಷ ಚಿಕ್ಕರಂಗಯ್ಯ, ಬಿಜೆಪಿ ತಾಲ್ಲೂಕು ಮಾಜಿ ಅಧ್ಯಕ್ಷ ದರ್ಶನ್, ದಾಡಿ ವೆಂಕಟೇಶ್ ಮಾತನಾಡಿದರು.

# ಪರವಾನಗಿ ಇಲ್ಲದೆ ಕೇರಳಕ್ಕೆ ಅಕ್ರಮ ಕಲ್ಲು ಸಾಗಣೆ: ರೂ.91 ಸಾವಿರ ದಂಡ


ಉದಯವಾಹಿನಿ ಚಿತ್ರ

• **ಉದಯವಾಹಿನಿ, ಗುಂಡ್ಲುಪೇಟೆ**

ಪರವಾನಗಿ ಇಲ್ಲದೆ ಕೇರಳಕ್ಕೆ ಅಕ್ರಮವಾಗಿ ಕಲ್ಲು ಸಾಗಣೆ ಮಾಡುತ್ತಿದ್ದ ಎರಡು ಟಿಪ್ಪರ್‌ಗಳನ್ನು ಗಣಿ ಇಲಾಖೆ ಅಧಿಕಾರಿಗಳು ಹಿಡಿದು ದಂಡ ವಿಧಿಸಿರುವ ಘಟನೆ ತಾಲ್ಲೂಕಿನ ಮದ್ದೂರು ಗೇಟ್ ಬಳಿಯಲ್ಲಿ ನಡೆದಿದೆ. ತಾಲ್ಲೂಕಿನಿಂದ ಕೇರಳಕ್ಕೆ ಪರವಾನಗಿ ತೆಗೆದುಕೊಳ್ಳದೆ ಬಿಳಿ ಕಲ್ಲು ತುಂಬಿಕೊಂಡು ಸಂಚರಿಸುತ್ತಿದ್ದ ಕೆ.ಎಲ್-08 ಸಿಎ-0331 ಹಾಗೂ ಕೆ.ಎಲ್-42 ಟಿ-8343 ನೋಂದಣಿಯ ಎರಡು ಟಿಪ್ಪರ್ ಲಾರಿಗಳನ್ನು ಗಣಿ ಇಲಾಖೆ ಅಧಿಕಾರಿಗಳು ಮದ್ದೂರು ಗೇಟ್ ತಡೆದು ಪರಿಶೀಲನೆ ನಡೆಸಿದಾಗ ಪರವಾನಗಿ ಇಲ್ಲದಿರುವುದು ಕಂಡು ಬಂದಿದೆ. ಇದರಲ್ಲಿ ಒಂದು ಟಿಪ್ಪರ್‌ಗೆ ಸ್ಥಳದಲ್ಲಿ ರೂ.91,620 ದಂಡ ವಿಧಿಸಿ, ಮತ್ತೊಂದು ಟಿಪ್ಪರ್ ಲಾರಿಯನ್ನು ಜಪ್ತಿ ಮಾಡಿ ಗುಂಡ್ಲುಪೇಟೆ ಪೊಲೀಸರ ಸುಪರ್ದಿಗೆ ನೀಡಲಾಗಿದೆ.

# ಬೆಂಕಿ ಬಿದ್ದರೂ ತಿಳಿಯದೇ ಟ್ರ್ಯಾಕ್ಟರ್ ಚಾಲನೆ

• **ಉದಯವಾಹಿನಿ, ಚಾಮರಾಜನಗರ**

ಜೋಳದ ಕಡ್ಡಿ ಮೆದೆಗೆ ಬೆಂಕಿ ಬಿದ್ದರೂ ಕೂಡ ಟ್ರ್ಯಾಕ್ಟರ್ ಚಾಲನೆ ಮಾಡುತ್ತಿದ್ದ, ಘಟನೆ ಹನೂರು ತಾಲ್ಲೂಕಿನ ಎಡಹಳ್ಳಿ ದೊಡ್ಡಿ ಸಮೀಪ ನಡೆದಿದೆ. ಹನೂರಿನ ಆರ್‌ಎಸ್ ದೊಡ್ಡಿ ಗ್ರಾಮದಿಂದ ಚಿಂಚಳ್ಳಿ ಗ್ರಾಮಕ್ಕೆ ರವಿ ಎಂಬವರು ಟ್ರ್ಯಾಕ್ಟರ್‌ನಲ್ಲಿ ಜೋಳದ ಕಡ್ಡಿಯನ್ನು ತುಂಬಿಕೊಂಡು ಹೋಗುತ್ತಿದ್ದಾಗ ಎಡಹಳ್ಳಿ ದೊಡ್ಡಿ ಗ್ರಾಮದ ಸಮೀಪ ಜೋಳದ ಕಡ್ಡಿಗೆ ಬೆಂಕಿ ಹತ್ತಿಕೊಂಡಿದೆ.

ಆದರೆ ಇದನ್ನು ಗಮನಿಸದೆ ಟ್ರ್ಯಾಕ್ಟರ್ ಚಾಲನೆ ಮಾಡುತ್ತಿದ್ದುದನ್ನು ಕಂಡ ಅದೇ ಮಾರ್ಗದಲ್ಲಿ ಬರುತ್ತಿದ್ದ ಹನೂರು ಠಾಣೆ ಇನ್ಸ್‌ಪೆಕ್ಟರ್ ಆನಂದಮೂರ್ತಿ ಮಾಹಿತಿ ನೀಡಿದ್ದಾರೆ. ಜೋಳದ ಕಟ್ಟಿಗೆ ಬೆಂಕಿ ಹತ್ತಿಕೊಂಡಿರುವ ವಿಚಾರ ತಿಳಿಸಿ ಕೂಲಿ ಕಾರ್ಮಿಕರಾದ ಬಸವಣ್ಣ, ಮಹದೇವಸ್ವಾಮಿ, ಸಿದ್ದಪ್ಪ ಅವರನ್ನು ಕೆಳಗಿಳಿಸಿದ್ದಾರೆ. ನಂತರ, ರವಿ ಅವರಿಗೆ ಜೋಳದ


ಉದಯವಾಹಿನಿ ಚಿತ್ರ

ಕಡ್ಡಿಯನ್ನು ಅನ್‌ಲೋಡ್ ಮಾಡುವಂತೆ ಹೇಳಿ ಟ್ರ್ಯಾಕ್ಟರ್ ನಿಲ್ಲಿಸಿ ಅನಾಹುತ ತಪ್ಪಿಸಿದ್ದಾರೆ.

# ತಾಲ್ಲೂಕಿನ ಎಚ್.ಕ್ರಾಸ್‌ನಲ್ಲಿ ಬೇಕಿದೆ ಸಂಚಾರ ನಿಯಂತ್ರಣ

• **ಉದಯವಾಹಿನಿ, ಶಿಡ್ಲಘಟ್ಟ**

ಸಂಚಾರ ನಿಯಂತ್ರಣಕ್ಕಾಗಿ ತಾಲ್ಲೂಕಿನ ಎಚ್.ಕ್ರಾಸ್‌ನಲ್ಲಿ ಮುಖ್ಯ ವೃತ್ತದಲ್ಲಿ ಅಳವಡಿಸಿರುವ ಸಿಗ್ನಲ್ ದೀಪಗಳು ಸರಿಯಾಗಿ ಕಾರ್ಯನಿರ್ವಹಿಸದ ಕಾರಣ, ಜನಸಾಮಾನ್ಯರು ಅಪಾಯಕ್ಕೆ ಸಿಲುಕುತ್ತಿದ್ದಾರೆ. ವಾಹನ ಸವಾರರು, ಮನಸೋ ಇಚ್ಛೆ ಚಾಲನೆ ಮಾಡುತ್ತಿದ್ದು, ಯಾವ ಸಮಯಕ್ಕೆ ಅಪಘಾತಗಳು ಸಂಭವಿಸುತ್ತವೋ ಎಂದು ಸ್ಥಳೀಯರು ಆತಂಕ ವ್ಯಕ್ತಪಡಿಸುತ್ತಾರೆ.ಕೋಲಾರ, ಚಿಂತಾಮಣಿ, ವಿಜಯಪುರ, ಹೊಸಕೋಟೆ ಕಡೆಗಳಿಂದ ಬರುವ ವಾಹನಗಳು, ಸಂಚರಿಸುವಂತಹ ಮುಖ್ಯ

ವೃತ್ತವಾಗಿದ್ದು, ಇಲ್ಲಿ ವಾಹನಗಳ ದಟ್ಟಣೆಯೂ ಹೆಚ್ಚಾಗಿದೆ. ಇದು ಶಿಡ್ಲಘಟ್ಟ ತಾಲ್ಲೂಕಿನ ಪ್ರಮುಖ ವ್ಯಾಪಾರ ಕೇಂದ್ರವಾಗಿ, ಹೊಸಕೋಟೆ ಮತ್ತು ಶಿಡ್ಲಘಟ್ಟ ತಾಲ್ಲೂಕುಗಳ ಜನರನ್ನು ಒಟ್ಟಿಗೆ ಸೇರಿಸುವಂತಹ ಜಾಗವೂ ಆಗಿದೆ.

ಚಿಂತಾಮಣಿಯಿಂದ ಬೆಂಗಳೂರಿನ ಕಡೆಗೆ, ಕೋಲಾರದಿಂದ ಚಿಕ್ಕಬಳ್ಳಾಪುರದ ಕಡೆಗೆ ಸಂಚರಿಸುವ ವಾಹನಗಳು ಇದೇ ರಸ್ತೆಯಲ್ಲೇ ಹೋಗಬೇಕು. ಬಸ್ಸುಗಳು ಸೇರಿದಂತೆ ಸರಕು ಸಾಗಾಣಿಕೆಯ ವಾಹನ, ಶಾಲಾ, ಕಾಲೇಜುಗಳ ವಾಹನಗಳು ಹೆಚ್ಚಿನ ಸಂಖ್ಯೆಯಲ್ಲಿ ಸಂಚಾರ ಮಾಡುವುದರಿಂದ ವಾಹನಗಳ ದಟ್ಟಣೆ ನಿಯಂತ್ರಣ ಮಾಡಲು ಸಿಗ್ನಲ್ ದೀಪಗಳನ್ನು ಅಳವಡಿಕೆ ಮಾಡಿದ್ದರೂ ದೀಪಗಳು ಕಾರ್ಯನಿರ್ವಹಿಸುತ್ತಿಲ್ಲದ ಕಾರಣ ವಾಹನ ಸವಾರರು ತಮಗಿಷ್ಟ ಬಂದಂತೆ ಹೋಗುತ್ತಾರೆ. ಪಾದಚಾರಿಗಳು, ದ್ವಿಚಕ್ರ ವಾಹನಗಳ ಸವಾರರು ರಸ್ತೆ ದಾಟಬೇಕಾದರೆ ಸಾಹಸ ಮಾಡಬೇಕಾಗಿದೆ. ರಸ್ತೆ ದಾಟುವಾಗ ಹಲವರು ಅಪಘಾತಗಳಿಗೆ ತುತ್ತಾಗಿ ಅಂಗವಿಕಲರಾಗಿದ್ದಾರೆ. ರಾತ್ರಿಯಲ್ಲಂತೂ ಇಲ್ಲಿ ರಸ್ತೆ ದಾಟುವುದು ದುಸ್ಸಾಹಸವಾಗುತ್ತಿದೆ. ಇಲ್ಲಿನ ಸಿಗ್ನಲ್ ದೀಪ ಸರಿಪಡಿಸಿ, ಪೊಲೀಸ್ ಸಿಬ್ಬಂದಿಯನ್ನು ನೇಮಕ ಮಾಡಬೇಕು ಎಂದು ಸ್ಥಳೀಯರಾದ ಶ್ರೀನಿವಾಸ್, ನರಸಿಂಹಮೂರ್ತಿ, ರಾಘವೇಂದ್ರ, ಒತ್ತಾಯಿಸಿದರು.

ಪ್ರತಿ ಶನಿವಾರ ಇಲ್ಲಿ ವಾರದ ಸಂತೆ ನಡೆಯುತ್ತದೆ. ಸುತ್ತಮುತ್ತಲಿನ ಊರುಗಳಿಂದ ಸಾವಿರಾರು ಜನ ಬರುತ್ತಾರೆ. ಇಲ್ಲಿ ಸಂಚಾರ ದಟ್ಟಣೆ ಸಮಸ್ಯೆಯೂ ಜಾಸ್ತಿಯಾಗುತ್ತದೆ. ಇಲ್ಲಿ ಪೊಲೀಸ್ ಚೌಕಿ ನಿರ್ಮಾಣ ಮಾಡಿ, ವಾಹನ ಸುಗಮವಾಗಿ ಸಂಚರಿಸುವುದಕ್ಕೆ ವ್ಯವಸ್ಥೆ ಮಾಡಿದರೆ ಪ್ರಯಾಣಿಕರು ಅಪಾಯಕ್ಕೆ ಸಿಲುಕುವುದನ್ನು ತಪ್ಪಿಸಲು ಸಾಧ್ಯವಾಗುತ್ತದೆ ಎಂದು ಸ್ಥಳೀಯ ವ್ಯಾಪಾರಿ ಹರೀಶ್ ಹೇಳಿದರು.

**ಸೂಕ್ತ ಪೊಲೀಸ್ ವ್ಯವಸ್ಥೆ ಅಗತ್ಯ:** ಇಲ್ಲಿನ ಸರ್ಕಲ್‌ನಲ್ಲಿ ಪೊಲೀಸರನ್ನು ನಿಯೋಜನೆ ಮಾಡಬೇಕು. ಇಲ್ಲಿಂದ ಸಂಚರಿಸುವ ಮುಖ್ಯ ರಸ್ತೆಗಳು, ರಾಜ್ಯ ಹೆದ್ದಾರಿಗಳಾಗಿದ್ದು ಹೊರರಾಜ್ಯಗಳಿಂದ ಬರುವ ಅಪರಿಚಿತರು. ಅನುಮಾನಾಸ್ಪದವಾಗಿ ಸಂಚರಿಸುವವರ ಮೇಲೆ ನಿಗಾವಹಿಸಬೇಕಿದೆ. ಸರಗಳ್ಳತನ ಮಾಡುವವರು ಸೇರಿದಂತೆ ಅಪರಾಧ ಕೃತ್ಯಗಳನ್ನು ಎಸಗುವವರ ಮೇಲೆ ನಿಗಾವಹಿಸುವುದಕ್ಕೂ ಅನುಕೂಲವಾಗಲಿದೆ ಎಂದು ಸ್ಥಳೀಯರು ಹೇಳಿದರು.


ಉದಯವಾಹಿನಿ ಚಿತ್ರ

# ಭಾರತ ಜಗತ್ತಿನಲ್ಲಿ ನಂ.1 ದೇಶವಾಗಬೇಕು

## ಭಕ್ತಿಯ ಭಾವ ವೃದ್ದಿಯಾಗುವಂತೆ ಆಧ್ಯಾತ್ಮಿಕ ಮನಸ್ಸು ಉದ್ದೀಪನ ಆಗುವಂತೆ ಕಾರ್ಯಕ್ರಮ

• **ಉದಯವಾಹಿನಿ, ಮೈಸೂರು**

ಭಾರತ ಜಗತ್ತಿನಲ್ಲಿ ನಂಬರ್ ಒನ್ ದೇಶ ಆಗಬೇಕೆಂದು ಕೇಂದ್ರ ಸಚಿವ ಪ್ರಹಲ್ಲಾದ ಜೋಶಿ ಅವರು ಆಶಿಸಿದರು.

ಅವಧೂತದತ್ತ ಪೀಠದಲ್ಲಿ ಇಂದಿನಿಂದ ಪ್ರಾರಂಭವಾಗಿರುವ ವಿಶ್ವದ ಮೊಟ್ಟಮೊದಲ ಸಹಸ್ರ ಚಂಡಿ ಯಾಗ ಮತ್ತು ವನದುರ್ಗ ವೃಕ್ಷ ಶಾಂತಿ ಮಹಾಯಜ್ಞ ಪುಜಾ ಕಾರ್ಯದಲ್ಲಿ ಭಾಗವಹಿಸಿದ ನಂತರ ಮಾತನಾಡಿದರು. ಅನೇಕ ವಿಷಯದಲ್ಲಿ ಭಾರತ ಜಗತ್ತಿನಲ್ಲಿ ಈಗ ನಾಲ್ಕನೇ ಸ್ಥಾನದಲ್ಲಿದೆ, ಆರ್ಥಿಕ ವಿಷಯದಲ್ಲೂ 4ನೇ ಸ್ಥಾನಕ್ಕೆ ಬಂದಿದ್ದೇವೆ. ನಮ್ಮ ದೇಶ ನಂಬರ್ ಒನ್ ಸ್ಥಾನಕ್ಕೆ ಬರಬೇಕು.

ಅದಕ್ಕಾಗಿ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ ಆಶೀರ್ವಾದ ಸದಾ ನಮ್ಮೆಲ್ಲರ ಮೇಲೆ ಇರುತ್ತದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಜಗತ್ತಿನಲ್ಲಿ ಶಾಂತಿ ನೆಮ್ಮದಿ ಮತ್ತು ಸೃಷ್ಟಿಯ ಜತೆಗೆ ಸಮತೋಲನ ಇರಬೇಕು ಹಾಗಾಗಿ ದೇಶ ಬಲಾಢ್ಯ ಆಗಬೇಕು ಎಂದು ಜೋಶಿ ಅಭಿಪ್ರಾಯಪಟ್ಟರು. ಗಣಪತಿ ಶ್ರೀಗಳು 14 ದಿನಗಳ ಕಾಲ ಸಹಸ್ರ ಚಂಡಿಯಾಗ ವನದುರ್ಗ ವೃಕ್ಷ ಶಾಂತಿ ಮಹಾ ಯಜ್ಞವನ್ನು ನಮ್ಮೆಲ್ಲರ ಮನಸ್ಸಿಗೆ ನಾಟುವಂತೆ, ಭಕ್ತಿಯ ಭಾವ ವೃದ್ದಿಯಾಗುವಂತೆ ಆಧ್ಯಾತ್ಮಿಕ ಮನಸ್ಸು ಉದ್ದೀಪನ ಆಗುವಂತೆ ಈ ಕಾರ್ಯಕ್ರಮ ಮಾಡುತ್ತಿದ್ದಾರೆ ಒಂಬತ್ತು ಸಾವಿರ ಪೂಜನೀಯ ವೃಕ್ಷಗಳಿಂದ ಪೂಜೆ ಮಾಡಲಾಗುತ್ತಿದೆ ಎಂದು ಸಂತಸ ವ್ಯಕ್ತಪಡಿಸಿದರು.


ಉದಯವಾಹಿನಿ ಚಿತ್ರ

ಗಣಪತಿ ಸ್ವಾಮೀಜಿಯವರು ಪ್ರಹ್ಲಾದ ಜೋಶಿ ಮತ್ತು ಶಾಸಕ ಟಿ.ಎಸ್. ಶ್ರೀವತ್ಸ ಅವರ ಕೈನಿಂದಲೇ ಹೋಮ ಕಾರ್ಯ ಮಾಡಿಸಿದ್ದು ವಿಶೇಷವಾಗಿತ್ತು. ಬೆಳಗ್ಗೆ ಏಳು ಗಂಟೆಗೆ ಅವಧೂತ ದತ್ತಪೀಠದ ಆವರಣದಲ್ಲಿ 11 ಹೋಮ ಕುಂಡಗಳಲ್ಲಿ ಸಹಸ್ರ ಚಂಡಿ ಯಾಗ ಪ್ರಾರಂಭವಾಯಿತು. ಇದರ ಜತೆಗೆ ರುದ್ರ ಹೋಮ ಕೂಡಾ ನೆರವೇರಿತು.

ನಂತರ ಭಕ್ತಾದಿಗಳಿಂದ ಸೌಂದರ್ಯ ಲಹರಿ ಮತ್ತು ಲಲಿತಾ ಸಹಸ್ರನಾಮ ಕೂಡ ನಡೆಯಿತು. ಚಡಿಯಾಗ ಪೂಜಾ ಕಾರ್ಯದಲ್ಲಿ ಕಾಶಿ ವಿಶ್ವನಾಥ ದೇವಸ್ಥಾನದ ಸಿಇಒ ವಿಶ್ವಭೂಷಣ್ ಮಿಶ್ರ ಕೂಡ ಪಾಲ್ಗೊಂಡಿದ್ದರು.

> **ಇಡೀ ಜಗತ್ತಿನಲ್ಲಿ ಕಾಡು ಮತ್ತು ಗಿಡಗಳು ಕಡಿಮೆಯಾಗುತ್ತಿದೆ. ಆದರೆ, ನಮ್ಮ ಭಾರತ ದೇಶದಲ್ಲಿ ಕಳೆದ 11 ವರ್ಷಗಳಲ್ಲಿ ಶೇ.17ರಷ್ಟು ಕಾಡು ವೃದ್ಧಿಯಾಗಿದೆ. ಇದಕ್ಕೆ ನಿಜವಾದ ಮೂಲಭೂತ ಕಾರಣ ಎಂದರೆ ಆಧ್ಯಾತ್ಮ ಭಕ್ತಿ, ದೇವರ ಮೇಲೆ ನಮ್ಮ ನಂಬಿಕೆ, ಸ್ವಾಮೀಜಿಯವರು ಮಾಡುತ್ತಿರುವ ಇಂತಹ ಚಂಡಿಯಾಗ ಎಂದರು. ಈ ಮೂಲಕ ಸೃಷ್ಟಿಯನ್ನು ಸಂರಕ್ಷಿಸಬೇಕು ಎಂದು ಗಣಪತಿ ಸ್ವಾಮೀಜಿಯವರು ಸಂದೇಶ ಕೊಟ್ಟಿದ್ದಾರೆ. ಇಂತಹ ಪುಣ್ಯ ಮತ್ತು ಪವಿತ್ರ ಕಾರ್ಯದಲ್ಲಿ ನನಗೆ ಅನಿರೀಕ್ಷಿತವಾಗಿ ಭಾಗವಹಿಸುವ ಲಾಭ ಸಿಕ್ಕಿದೆ. ಅದಕ್ಕಾಗಿ ಗಣಪತಿ ಸ್ವಾಮೀಜಿಯವರು ಮತ್ತು ಕಿರಿಯ ಶ್ರೀ ದತ್ತ ವಿಜಯಾನಂದ ಶ್ರೀಗಳಿಗೆ ನಾನು ಭಕ್ತಿ ಪೂರ್ವಕವಾಗಿ ನಮಿಸುತ್ತೇನೆ ಎಂದು ತಿಳಿಸಿದರು.**

ಪ್ರಹ್ಲಾದ ಜೋಶಿಯವರೊಂದಿಗೆ ಶಾಸಕ ಟಿ.ಎಸ್. ಶ್ರೀವತ್ಸ, ಬಿಜೆಪಿ ನಗರ ಅಧ್ಯಕ್ಷ ಎಲ್.ನಾಗೇಂದ್ರ ಮತ್ತು ಜೋಗಿ ಮಂಜು ಮತ್ತಿತರರು ಹಾಜರಿದ್ದರು.

# ಏನು ತಪ್ಪು ಮಾಡಿದ್ದಾರೆ ಅಂತ ಕ್ರಮ ಕೈಗೊಳ್ಳಬೇಕು


ಉದಯವಾಹಿನಿ ಚಿತ್ರ

• **ಉದಯವಾಹಿನಿ, ಮೈಸೂರು**

ವಿಧಾನ ಸೌಧದಲ್ಲಿ ಏನಾಗಿದೆ? ಸತ್ಯವತಿ ಏನ್ ಮಾಡಿದ್ದಾರೆ? ಏನು ತಪ್ಪಾಗಿದೆ ಎಂದು ಕ್ರಮ ಕೈಗೊಳ್ಳಬೇಕು ಎಂದು ಪ್ರಶ್ನಿಸುವ ಮೂಲಕ ಸಿಎಂ ಸಿದ್ದರಾಮಯ್ಯ ಸತ್ಯವತಿಗೆ ಕ್ಲೀನ್‌ಚಿಟ್ ನೀಡಿದ್ದಾರೆ. ವಿಧಾನಸೌಧದಲ್ಲಿ ಆರ್‌ಸಿಬಿ ವಿಜಯೋತ್ಸವ ಆಚರಣೆಗೆ ಅವಕಾಶ ನೀಡಿದರೆ ಬಂದೋಬಸ್ತ್‌ಗೆ ಸಮಸ್ಯೆಯಾಗುತ್ತದೆ ಎಂದು ವಿಧಾನಸೌಧದ ಡಿಸಿಪಿ ಕರಿಬಸವನಗೌಡ ಅವರು ಆಡಳಿತ ಮತ್ತು ಸಿಬ್ಬಂದಿ ಸುಧಾರಣಾ ಇಲಾಖೆ ಕಾರ್ಯದರ್ಶಿ ಸತ್ಯವತಿ ಅವರಿಗೆ ಬರೆದ ಪತ್ರ ಇಂದು ಬಹಿರಂಗವಾಗಿತ್ತು. ಈ ಪತ್ರ ಬಹಿರಂಗವಾದ ಬೆನ್ನಲ್ಲೇ ಮಾಧ್ಯಮಗಳು ಇಂದು ಸಂಜೆ ಬೆಂಗಳೂರಿನಿಂದ ಮೈಸೂರಿಗೆ ಆಗಮಿಸಿದ ಸಿಎಂ ಸಿದ್ದರಾಮಯ್ಯನವರಿಗೆ ಈ ವಿಚಾರಕ್ಕೆ ಸಂಬಂಧಿಸಿದಂತೆ ಪ್ರಶ್ನೆಗಳನ್ನು ಕೇಳಿದವು. ವಿಮಾನ ನಿಲ್ದಾಣದಲ್ಲಿ ಪ್ರತಿಕ್ರಿಯಿಸಿದ ಸಿಎಂ, ಪೊಲೀಸರ ಪತ್ರಕ್ಕೆ ಸತ್ಯವತಿ ಏನು ಉತ್ತರ ನೀಡಿದ್ದಾಳೆ ಎನ್ನುವುದು ನಿಮಗೆ ಗೊತ್ತಾ ಎಂದು ಮರು ಪ್ರಶ್ನೆ ಹಾಕಿದರು. ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ನಡೆದ ಕಾರ್ಯಕ್ರಮಕ್ಕೆ ನನಗೆ ಆಹ್ವಾನ ಇರಲಿಲ್ಲ. ವಿಧಾನಸೌಧದ ಕಾರ್ಯಕ್ರಮವನ್ನು ಸರ್ಕಾರ ಆಯೋಜನೆ ಮಾಡಿಲ್ಲ. ಕರ್ನಾಟಕ ರಾಜ್ಯ ಕ್ರಿಕೆಟ್ ಮಂಡಳಿ ಈ ಕಾರ್ಯಕ್ರಮ ಆಯೋಜನೆ ಮಾಡಿತ್ತು. ಸತ್ಯವತಿಯವರು ನನ್ನ ಬಳಿ ಈ ಕಾರ್ಯಕ್ರಮದ ಬಗ್ಗೆ ಕೇಳಿದರು. ನಾನು ಅನುಮತಿ ನೀಡಿ ಎಂದು ಹೇಳಿದ್ದೇನೆ. ವಿಧಾನಸೌಧದಲ್ಲಿ ಏನಾದರೂ ಘಟನೆ ಆಗಿದ್ಯಾ, ಸತ್ಯವತಿ ಏನು ತಪ್ಪು ಮಾಡಿದ್ದಾರೆ ಎಂದು ಕ್ರಮ ಕೈಗೊಳ್ಳಬೇಕು ಎಂದು ಸಿಎಂ ಪ್ರಶ್ನಿಸಿದರು.

ಸರ್ಕಾರದ ಮುಖ್ಯ ಕಾರ್ಯದರ್ಶಿ ಕರೆದಿದ್ದರು ನಾನು ಹೋಗಿದ್ದೆ. ವಿಧಾನಸೌಧದ ಕಾರ್ಯಕ್ರಮಕ್ಕೆ ರಾಜ್ಯಪಾಲರು ಆಗಮಿಸಿದ್ದರು. ಕ್ರಿಕೆಟ್ ಸ್ಟೇಡಿಯಂನಲ್ಲಿ ನಡೆದ ಘಟನೆಗೂ ನಮಗೂ ಯಾವುದೇ ಸಂಬಂಧವಿಲ್ಲ. ವಿಧಾನಸೌಧದಲ್ಲಿ ಯಾವುದೇ ಘಟನೆ ನಡೆದಿಲ್ಲ ಅಷ್ಟೇ. ಕುಂಭ ಮೇಳದಲ್ಲಿ ಕಾಲ್ತುಳಿತ ನಡೆದಾಗ ಯಾರಾದರೂ ರಾಜೀನಾಮೆ ನೀಡಿದ್ರಾ, ಎಂದು ಮರು ಪ್ರಶ್ನೆ ಹಾಕಿದರು.

ಬಿಜೆಪಿಯವರು ನ್ಯಾಯಾಂಗ ತನಿಖೆಗೆ ಆಗ್ರಹಿಸಿದ್ದರು. ಸರ್ಕಾರ ನ್ಯಾಯಾಂಗ ತನಿಖೆಗೆ ಒಪ್ಪಿಸಿದೆ. ಬಿಜೆಪಿಯವರು ರಾಜಕೀಯಕ್ಕಾಗಿ ಪ್ರತಿಭಟನೆ ನಡೆಸುತ್ತಿದ್ದಾರೆ. ಅವರೇ ವಿಕ್ಟರಿ ಯಾತ್ರೆಗೆ ಅನುಮತಿ ನೀಡಿಲ್ಲ ಎಂದು ಪೋಸ್ಟ್ ಹಾಕಿದ್ದರು ಎಂದು ಹೇಳುವ ಮೂಲಕ ತಿರುಗೇಟು ನೀಡಿದರು.

# ಆರ್‌ಸಿಬಿ ಬ್ಯಾನ್ ಮಾಡಿ, ಐಪಿಎಲ್ ರದ್ದುಗೊಳಿಸಿ

## ತಪ್ಪಿತಸ್ಥರ ಮೇಲೆ ಕೂಡಲೇ ಕಠಿಣ ಕ್ರಮಕ್ಕೆ ಒತ್ತಾಯ, ವಾಟಾಳ್ ನಾಗರಾಜ್ ಮೈಸೂರಿನಲ್ಲಿ ಪ್ರತಿಭಟನೆ

• **ಉದಯವಾಹಿನಿ, ಮೈಸೂರು**

ಆರ್‌ಸಿಬಿ ಟ್ರೋಫಿ ಗೆದ್ದ ಸಂಭ್ರಮಾಚರಣೆಯಲ್ಲಿ ಹನ್ನೊಂದು ಜನ ಪ್ರಾಣ ಕಳೆದುಕೊಂಡಿದ್ದರು. ಸರ್ಕಾರದ ನಿರ್ವಹಣೆ ವೈಫಲ್ಯದ ಬಗ್ಗೆ ಖಂಡನೆ ವ್ಯಕ್ತಪಡಿಸಿ ಮೈಸೂರಿನಲ್ಲಿ ವಾಟಾಳ್ ನಾಗರಾಜ್ ಪ್ರತಿಭಟನೆ ನಡೆಸಿದ್ದಾರೆ. ಮೈಸೂರಿನಲ್ಲಿ ವಾಟಾಳ್ ನಾಗರಾಜ್ ನೇತೃತ್ವದಲ್ಲಿ ನಗರದ ಹಾರ್ಡಿಂಜ್ ವೃತ್ತದ ಬಳಿ ಪ್ರತಿಭಟನೆ ನಡೆಸಲಾಯಿತು. ಕನ್ನಡ ಪರ ಸಂಘಟನೆಗಳು ವಾಟಾಳ್ ಅವರಿಗೆ ಬೆಂಬಲ ನೀಡಿದವು. ಐಪಿಎಲ್ ಪಂದ್ಯಾವಳಿಯನ್ನು ನಿಷೇಧಿಸಬೇಕು. ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ. ರಾಜ್ಯ ಸರ್ಕಾರವೇ ಈ ಘಟನೆಯ ಸಂಪೂರ್ಣ ಹೊಣೆ ಹೊರಬೇಕು ಎಂದು ಒತ್ತಾಯಿಸಿದ್ದಾರೆ.

**ಐಪಿಎಲ್ ರದ್ದು ಮಾಡಬೇಕು:** ಪ್ರತಿಭಟನಾಕಾರರು ಐಪಿಎಲ್ ರದ್ದು ಮಾಡಬೇಕು ಎಂದು ವಾಟಾಳ್ ನಾಗರಾಜ್ ಆಗ್ರಹಿಸಿದರು. ಆರ್‌ಸಿಬಿ ತಂಡವನ್ನು ಸಹ ರದ್ದು ಮಾಡಬೇಕು ಎಂದು ಒತ್ತಾಯಿಸಿದರು. ವಾಟಾಳ್ ನಾಗರಾಜ್ ಅವರು ಪ್ರತಿಭಟನೆಯಲ್ಲಿ ಸರ್ಕಾರದ ಮುಂದೆ ಹಲವು ಬೇಡಿಕೆಗಳನ್ನು ಮುಂದಿಟ್ಟಿದ್ದಾರೆ. ಕಾಲ್ತುಳಿತ ದುರಂತದಲ್ಲಿ ಮೃತಪಟ್ಟವರ ಕುಟುಂಬಕ್ಕೆ ಕ್ರಿಕೆಟ್ ಮಂಡಳಿಯಿಂದ 5 ಕೋಟಿ ಪರಿಹಾರ ನೀಡಬೇಕು. ಸರ್ಕಾರದಿಂದ 1 ಕೋಟಿ ಪರಿಹಾರ ಕೊಡಬೇಕು ಎಂದು ಒತ್ತಾಯಿಸಿದ್ದಾರೆ. ಸಿದ್ದರಾಮಯ್ಯನವರು ರಾಜೀನಾಮೆ ಕೊಡೋದು ಬಿಡೋದು


ಉದಯವಾಹಿನಿ ಚಿತ್ರ

ಅವರಿಗೆ ಬಿಟ್ಟಿದ್ದು ಎಂದು ವಾಟಾಳ್ ನಾಗರಾಜ್ ಅವರು ಹೇಳಿದ್ದಾರೆ. ಸರ್ಕಾರ ಕೂಡಲೇ ಐಪಿಎಲ್ ಗೇಮ್ ರದ್ದು ಮಾಡಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು. ತಪ್ಪಿತಸ್ಥರ ಮೇಲೆ ತಕ್ಷಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು. ಈ ಘಟನೆಗೆ ರಾಜ್ಯ ಸರ್ಕಾರವೇ ಜವಾಬ್ದಾರಿ ಎಂದು ಅವರು ಹೇಳಿದರು.

**ಆರ್‌ಸಿಬಿ ಟ್ರೋಫಿ ಗೆದ್ದ ಮೇಲೆ ಆಗಿದ್ದೇನು:** (ಜೂನ್ 4) ರಂದು ಚಿನ್ನಸ್ವಾಮಿ ಕ್ರೀಡಾಂಗಣದ ಹೊರಗೆ ಆರ್‌ಸಿಬಿ ವಿಜಯೋತ್ಸವದ ಸಂದರ್ಭದಲ್ಲಿ ನೂಕುನುಗ್ಗಲು ಉಂಟಾಗಿ ಕಾಲ್ತುಳಿತ ಸಂಭವಿಸಿತು. ಈ ದುರಂತದಲ್ಲಿ 11 ಜನರು ಸಾವನ್ನಪ್ಪಿದ್ದಾರೆ ಮತ್ತು 47ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ. ಮೃತಪಟ್ಟವರಲ್ಲಿ ಹೆಚ್ಚಿನವರು ಯುವಕರಾಗಿದ್ದರು. ಕ್ರೀಡಾಂಗಣದ ಸಾಮರ್ಥ್ಯಕ್ಕಿಂತ ಹೆಚ್ಚು ಪಟ್ಟು ಸಂಖ್ಯೆಯ ಅಭಿಮಾನಿಗಳು ಆಗಮಿಸಿದ್ದ ಕಾರಣ, ಸೂಕ್ತ ನಿರ್ವಹಣೆ ಮತ್ತು ಭದ್ರತಾ ವ್ಯವಸ್ಥೆಗಳ ಕೊರತೆ, ಉಚಿತ ಪಾಸ್ ವಿತರಣೆ ಗೊಂದಲಗಳಿಂದ ದುರಂತ ಸಂಭವಿಸಿದೆ.

ಬೆಂಗಳೂರು ನಗರ ಪೊಲೀಸ್ ಕಮಿಷನರ್ ಬಿ. ದಯಾನಂದ್‌ರನ್ನು ಕರ್ತವ್ಯ ಲೋಪದ ಆರೋಪದ ಮೇಲೆ ಅಮಾನತುಗೊಳಿಸಲಾಗಿದೆ. ದಯಾನಂದ್ ಅವರೊಂದಿಗೆ, ಹೆಚ್ಚುವರಿ ಪೊಲೀಸ್ ಕಮಿಷನರ್ ವಿಕಾಸ್ ಕುಮಾರ್, ಕೇಂದ್ರ ವಿಭಾಗದ ಡಿಸಿಪಿ ಎಚ್. ಟಿ. ಶೇಖರ್, ಕಬ್ಬನ್ ಪಾರ್ಕ್ ಎಸಿಪಿ ಸಿ. ಬಾಲಕೃಷ್ಣ, ಪೊಲೀಸ್ ಇನ್ಸ್‌ಪೆಕ್ಟರ್ ಎ.ಕೆ. ಗಿರೀಶ್, ಘಟನೆ ನಡೆದ ಸ್ಥಳದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಇತರ ಸಿಬ್ಬಂದಿಯನ್ನು ಅಮಾನತುಗೊಳಿಸಲಾಗಿದೆ.

ಇವರ ನಿರ್ಲಕ್ಷ್ಯ ಮತ್ತು ಬೇಜವಾಬ್ದಾರಿತನವೇ ದುರಂತಕ್ಕೆ ಕಾರಣ ಎಂದು ಪ್ರಾಥಮಿಕ ಮಾಹಿತಿಯಿಂದ ತಿಳಿದುಬಂದಿದೆ.

### ಕರ್ತವ್ಯ ಲೋಪ ಅಮಾನತು, ಬಂಧನದ ಶಿಕ್ಷೆ

**ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್ ಕಾರ್ಯದರ್ಶಿ ಎ. ಶಂಕರ್ ಮತ್ತು ಖಜಾಂಚಿ ಇ.ಎಸ್. ಜಯರಾಮ್ನೈತಿಕ ಹೊಣೆ ಹೊತ್ತು ಇಬ್ಬರೂ ತಮ್ಮ ಹುದ್ದೆಗಳಿಗೆ ರಾಜೀನಾಮೆ ನೀಡಿದ್ದಾರೆ. ಆರ್‌ಸಿಬಿ ಫ್ರಾಂಚೈಸಿ, ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್ ಮತ್ತು DNA ಇವೆಂಟ್ ಮ್ಯಾನೇಜ್‌ಮೆಂಟ್ ಪ್ರೈವೆಟ್ ಲಿಮಿಟೆಡ್‌ನ ಮುಖ್ಯಸ್ಥರು ಈ ಮೂರೂ ಸಂಸ್ಥೆಗಳ ಮುಖ್ಯಸ್ಥರನ್ನು ಬಂಧಿಸಲು ಸರ್ಕಾರ ಸೂಚನೆ ನೀಡಿದೆ ಮತ್ತು ಇವರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಇವರ ಬೇಜವಾಬ್ದಾರಿತನದಿಂದಲೇ ದುರಂತ ಸಂಭವಿಸಿದೆ ಎಂದು ಸರ್ಕಾರ ತೀರ್ಮಾನಿಸಿದೆ. ಇನ್ನೂ ಪ್ರಕರಣದ ತನಿಖೆಯನ್ನು ಸಿಐಡಿಗೆ ವಹಿಸಲಾಗಿದೆ. ಆರ್‌ಸಿಬಿ ಮಾರ್ಕೆಟಿಂಗ್ ಮುಖ್ಯಸ್ಥ ನಿಖಿಲ್ ಸೋಸ್ಲೆಯವರು ನ್ಯಾಯಾಂಗ ಬಂಧನದಲ್ಲಿದ್ದಾರೆ.**

ಅಂತರಾಳದಿಂದ... EDITORIAL

# ತಾನೇ ತೋಡಿದ ಖೆಡ್ಡಾದೊಳಗೆ ಬಿದ್ದು ಘೀಳಿಡುತ್ತಿರುವ ಆನೆ

ಉತ್ತರ ಪ್ರದೇಶವೂ ಸೇರಿದಂತೆ ದೇಶದಲ್ಲಿ ಬಿಎಸ್ಪಿಯ ಸ್ಥಿತಿ ಚಿಂತಾಜನಕವಾಗಿದೆ. ಈ ದೇಶದ ಬಹುಜನರ ನೋವುನಲಿವುಗಳ ಜೊತೆಗಿನ ಕೊಂಡಿಯನ್ನು ಕಳೆದುಕೊಂಡಂತಿರುವ ಬಿಎಸ್ಪಿಯು ಇಂದು ಮಾಯಾವತಿ ಮತ್ತು ಅವರ ಸೋದರಳಿಯ ಆಕಾಶ್ ಆನಂದ್ ಅವರಿಗೆ ಸೀಮಿತವಾಗಿದೆ. ಕಾಶಿರಾಂ ಬಹುಜನ ಚಳವಳಿಯನ್ನು ರಾಜಕೀಯ ಶಕ್ತಿಯಾಗಿಸಿ ಅಂಬೇಡ್ಕರ್ ಅವರ ಕನಸನ್ನು ಅಕ್ಷರಶಃ ನನಸು ಮಾಡುವ ಪ್ರಯತ್ನದಲ್ಲಿದ್ದರು. ಪರಿಣಾಮವಾಗಿ ಮಾಯಾವತಿಯವರು ಮೂರು ಬಾರಿ ಉತ್ತರ ಪ್ರದೇಶದ ಮುಖ್ಯಮಂತ್ರಿಯಾಗಲು ಸಾಧ್ಯವಾಯಿತು. ಒಂದು ಹಂತದಲ್ಲಿ ಭವಿಷ್ಯದ ಭಾರತದ ಪ್ರಧಾನಿ ಅಭ್ಯರ್ಥಿಯಾಗಿಯೂ ಮಾಧ್ಯಮಗಳಲ್ಲಿ ಗುರುತಿಸಲ್ಪಟ್ಟರು. ಆದರೆ ಇಂದು ಅವರಿಂದಲೇ ಬಿಎಸ್ಪಿ ಹೀನಾಯ ಸ್ಥಿತಿ ತಲುಪಿದೆ. ಇದು ಈ ದೇಶದ ಬಹುಜನರ ಬಹುದೊಡ್ಡ ಸೋಲು ಎನ್ನುವುದರಲ್ಲಿ ಎರಡು ಮಾತಿಲ್ಲ. ಕಾಶ್ಮೀರಾಂ ಅವರು ಕಟ್ಟಿ ಬೆಳೆಸಿದ ಬಹುಜನ ಪಕ್ಷವನ್ನು ಸರ್ವಜನ ಪಕ್ಷವನ್ನಾಗಿಸುವ ಅವರ ಪ್ರಯತ್ನ ಆರಂಭದಲ್ಲಿ ಭಾರೀ ಯಶಸ್ಸು ಕಂಡಿತಾದರೂ, ಮುಂದೆ ಅದುವೇ ಅವರಿಗೆ ತಿರುಗು ಬಾಣವಾಯಿತು. ಬಹುಜನ ಪಕ್ಷವನ್ನು ನಿಧಾನಕ್ಕೆ ಮೇಲ್ಜಾತಿಯ ಜನರು ನಿಯಂತ್ರಿಸತೊಡಗಿದಂತೆಯೇ ಬಿಎಸ್ಪಿ ಸ್ವತಃ ಉತ್ತರ ಪ್ರದೇಶದಲ್ಲೇ ಹಿನ್ನಡೆಯನ್ನು ಅನುಭವಿಸತೊಡಗಿತು. ಜಾತ್ಯತೀತ ಪಕ್ಷಗಳೊಂದಿಗೆ ಮೈತ್ರಿಗೆ ನಿರಾಕರಿಸುತ್ತಾ ಬಿಜೆಪಿಗೆ ಹೆಚ್ಚು ಹೆಚ್ಚು ಹತ್ತಿರವಾಗತೊಡಗಿತು.

ಪ್ರಧಾನಿ ಮೋದಿಯ ಜನವಿರೋಧಿ ನೀತಿಗಳ ವಿರುದ್ಧ ದಲಿತ ವಿರೋಧಿ ನಿಲುವುಗಳ ವಿರುದ್ಧ ಮೌನ ತಾಳುತ್ತಾ, ಜಾತ್ಯತೀತ ಪಕ್ಷಗಳ ಮೇಲೆ ತಮ್ಮ ದಾಳಿಗಳನ್ನು ತೀವ್ರಗೊಳಿಸಿ ಪಕ್ಷದ ಅಸ್ತಿತ್ವವನ್ನು ಉಳಿಸಿಕೊಳ್ಳುವ ವ್ಯರ್ಥ ಪ್ರಯತ್ನ ನಡೆಸಿದರು. ಕಳೆದ ಒಂದು ದಶಕದಲ್ಲಿ ಮಾಯಾವತಿಯ ನಿಲುವುಗಳಿಂದಾಗಿ ಬಿಎಸ್ಪಿ ಸಂಪೂರ್ಣ ಬದಿಗೆ ತಳ್ಳಲ್ಪಟ್ಟಿತು. ಬಿಎಸ್ಪಿಯನ್ನು ಬಿಜೆಪಿ ನಿಯಂತ್ರಿಸುತ್ತಿದೆ ಎನ್ನುವ ಆರೋಪ ವ್ಯಾಪಕವಾಗಿದ್ದು ಉತ್ತರ ಪ್ರದೇಶದಲ್ಲಿ ಬಿಜೆಪಿ ತನ್ನನ್ನು ತಾನು ವಿಸ್ತರಿಸಿಕೊಳ್ಳಲು ಬಿಎಸ್ಪಿಯನ್ನು ಪರೋಕ್ಷವಾಗಿ ಬಳಸಿಕೊಳ್ಳುತ್ತಿದೆ ಎನ್ನುವುದು ವಾಸ್ತವವಾಗಿದೆ. ಬಿಎಸ್ಪಿಯೊಳಗಿದ್ದ ಮಾಜಿ ನಾಯಕರೇ ಇದನ್ನು ಒಪ್ಪಿಕೊಂಡಿದ್ದಾರೆ.

**ಬಹುಜನ ಸಮಾಜ ಪಕ್ಷದ ಗತ ವೈಭವ ಮರಳಿ ಬರುವುದಿಲ್ಲ ಎನ್ನುವುದನ್ನು ಕೊನೆಗೂ ಮಾಯಾವತಿ ಅಧಿಕೃತವಾಗಿ ಒಪ್ಪಿಕೊಂಡಿದ್ದಾರೆ. ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು ಇವಿಎಂ ಬದಲು ಮತ ಪತ್ರಗಳ ಮೂಲಕ ಚುನಾವಣೆ ನಡೆದರೆ ಪಕ್ಷದ ಗತ ವೈಭವ ಮರುಕಳಿಸಲಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಬಿಎಸ್ಪಿ ಅಭ್ಯರ್ಥಿಗಳು ಜಯಗಳಿಸುವುದನ್ನು ತಡೆಯಲು ಇವಿಎಂಗಳನ್ನು ತಿರುಚಲಾಗುತ್ತಿದೆ. ಪರಿಣಾಮವಾಗಿ ಬಿಎಸ್ಪಿ ಕನಿಷ್ಠಮಟ್ಟದಲ್ಲಿ ಉಳಿದಿದೆ. ಇದು ಬಿಎಸ್ಪಿಯಲ್ಲಿರುವ ದಲಿತರು ಮತ್ತು ಅಂಚಿನಲ್ಲಿರುವ ಇತರ ಮತದಾರರ ನಂಬಿಕೆಯನ್ನು ಮುರಿಯುವ ಪ್ರಯತ್ನವಾಗಿದೆ ಎಂದೂ ಅವರು ಕಳವಳ ವ್ಯಕ್ತಪಡಿಸಿದ್ದಾರೆ.**

ಇವಿಎಂ ತಿರುಚಲಾಗುತ್ತಿದೆ, ಇವಿಎಂ ಮೂಲಕ ಬಿಜೆಪಿ ಗೆಲ್ಲುತ್ತಿದೆ ಎನ್ನುವ ಆರೋಪಗಳನ್ನು ಎಲ್ಲಾ ಪಕ್ಷಗಳೂ ಮಾಡಿಕೊಂಡು ಬಂದಿವೆ. ವಿರೋಧ ಪಕ್ಷಗಳು ಒಂದಾಗಿ ಇವಿಎಂ ವಿರುದ್ಧ ಚುನಾವಣಾ ಆಯೋಗಕ್ಕೆ ದೂರು ನೀಡಿವೆ. ನ್ಯಾಯಾಲಯದ ಮೆಟ್ಟಿಲನ್ನೂ ಏರಿವೆ.


ಇವಿಎಂ ಹೊರತು ಪಡಿಸಿದ ಚುನಾವಣೆಯನ್ನು ಸುಪ್ರೀಂಕೋರ್ಟ್ ಕೂಡ ಬೆಂಬಲಿಸಿಲ್ಲ. ಚುನಾವಣಾ ಆಯೋಗವಂತೂ ಇವಿಎಂ ಪರವಾಗಿ ಬಲವಾಗಿದೆ ನಿಂತಿದೆ. ಇವಿಎಂ ತಿರುಚುವುದು ಸಾಧ್ಯವೇ ಇಲ್ಲ ಎನ್ನುವ ಹೇಳಿಕೆಗೆ ಅದು ಬದ್ಧವಾಗಿದೆ. ಇವಿಎಂ ವಿರುದ್ಧ ಮಾತನಾಡಿದ ವಿರೋಧ ಪಕ್ಷಗಳನ್ನೇ ಆರೋಪಿ ಸ್ಥಾನದಲ್ಲಿ ನಿಲ್ಲಿಸಿದೆ.

ಇವಿಎಂನ್ನು ಬದಲಾಯಿಸಬೇಕು ಎನ್ನುವ ಒತ್ತಾಯದ ಬದಲಿಗೆ ಇದೀಗ ಇವಿಎಂನಲ್ಲಿ ಸುಧಾರಣೆಗಳನ್ನು ತರುವ ಕುರಿತಂತೆ ವಿರೋಧ ಪಕ್ಷಗಳು ಒತ್ತಡಗಳನ್ನು ಹೇರುತ್ತಿವೆ.

ಇವುಗಳ ನಡುವೆಯೂ ಕಾಂಗ್ರೆಸ್ ಪಕ್ಷ ರಾಹುಲ್ ಗಾಂಧಿ ನೇತೃತ್ವದಲ್ಲಿ ದೇಶಾದ್ಯಂತ ಮೋದಿ ನೇತೃತ್ವದ ಸರಕಾರದ ವಿರುದ್ಧ ಆಂದೋಲನಗಳನ್ನು ರೂಪಿಸುತ್ತಲೇ ಬಂದಿದೆ. ಸಂವಿಧಾನದ ಪರವಾಗಿ ದೇಶಾದ್ಯಂತ ರ್ಯಾಲಿಗಳನ್ನು ಹಮ್ಮಿಕೊಂಡಿದೆ. ಆರ್‌ಎಸ್‌ಎಸ್‌ನ್ನು ಸಿದ್ಧಾಂತಗಳ ಬಗ್ಗೆ ದಲಿತ ವಿರೋಧಿ ದೌರ್ಜನ್ಯಗಳ ಬಗ್ಗೆ ರಾಹುಲ್ ಮಾತನಾಡಿದ್ದಾರೆ ಮಾತ್ರವಲ್ಲ ದೇಶದ ಹಲವೆಡೆ ರಾಹುಲ್ಗಾಂಧಿಯ ವಿರುದ್ಧ ಬಿಜೆಪಿ ದೂರುಗಳನ್ನು ದಾಖಲಿಸಿದೆ. ಸಮಾಜವಾದಿ ಪಕ್ಷಲೂ ಉತ್ತರ ಪ್ರದೇಶದಲ್ಲಿ ಬಿಜೆಪಿ ಮತ್ತು ಆರ್‌ಎಸ್‌ಎಸ್ ಎದುರಿಸಲು ತನ್ನದೇ ಮಿತಿಯಲ್ಲಿ ಹೋರಾಡುತ್ತಾ ಬರುತ್ತಿದೆ. ಇಂತಹ ಹೊತ್ತಿನಲ್ಲಿ ಮಾಯಾವತಿಯ ನೇತೃತ್ವದಲ್ಲಿ ಬಿಎಸ್ಪಿಯು ಕಳೆದ ಒಂದು ದಶಕದಲ್ಲಿ ಯಾವುದೇ ಚಳವಳಿಯನ್ನು ರೂಪಿಸಿದ ಉದಾಹರಣೆಯಿಲ್ಲ. ಬದಲಿಗೆ, ಉತ್ತರ ಪ್ರದೇಶದಲ್ಲಿ ಬಿಎಸ್ಪಿಗೆ ಪರ್ಯಾಯವಾಗಿ ದಲಿತ ಸಮುದಾಯದಿಂದ ಹೊರ ಹೊಮ್ಮಿದ ಚಂದ್ರಶೇಖರ ಆಝಾದ್‌ರಂತಹ ನಾಯಕರ ದಮನಕ್ಕೆ ಆದ್ಯತೆ ನೀಡಿತು. ದಲಿತರ ಮೇಲೆ ಪದೇ ಪದೇ ನಡೆಯುತ್ತಿರುವ ದೌರ್ಜನ್ಯಗಳು, ವೇಮುಲಾ ಆತ್ಮಹತ್ಯೆ, ಮೇಲ್ಜಾತಿಯ ಬಡವರಿಗೆ ಮೀಸಲಾತಿ, ದಲಿತ ದೌರ್ಜನ್ಯ ಕಾಯ್ದೆಗಳ ದುರ್ಬಲಗೊಳಿಸುವಿಕೆ ಇತ್ಯಾದಿಗಳ ವಿರುದ್ಧ ಬಿಎಸ್ಪಿ ಯಾವ ಆಂದೋಲನವನ್ನೂ ಸಂಘಟಿಸಿಲ್ಲ.

ಮಾಯಾವತಿಯವರು ಜಾತ್ಯತೀತ ಪಕ್ಷಗಳನ್ನೇ ತನ್ನ ಮೊದಲ ವೈರಿ ಎಂಬಂತೆ ನಡೆಸಿಕೊಂಡು ಬಂದರು. ಲೋಕಸಭೆ ಮತ್ತು ವಿಧಾನಸಭಾ ಚುನಾವಣೆಯಲ್ಲೂ ಸ್ವತಂತ್ರವಾಗಿ ಸ್ಪರ್ಧಿಸುವ ಮೂಲಕ ಬಿಜೆಪಿಗೆ ಅನುಕೂಲ ಮಾಡಿಕೊಟ್ಟರು.

---



## ರಾಮಾಯಣ

### ಭರತನು ಕೈಕೇಯಿ ದೇವಿಯ ಮೇಲೆ ಕೋಪಿಸಿದ್ದು

• ಹಿಂದಿನ ಸಂಚಿಕೆಯಿಂದ **78ನೆಯ ಅಧ್ಯಾಯ**

ಕೈಕೇಯಾದೇವಿಯು ತನ್ನ ಸ್ತ್ರೀಸ್ವಭಾವವಾದ ಚಾಂಚಲ್ಯಬುದ್ಧಿಯಿಂದ ತಾನು ಮಾಡಿದ ಕೃತ್ಯವನ್ನು ಯಥಾರ್ಥವಾಗಿಯೇ ಹೇಳತೊಡಗಿದಳು : ಭರತ, ಶ್ರೀರಾಮನು ಬ್ರಾಹ್ಮಣರ ದ್ರವ್ಯವನ್ನು ಅಪಹರಿಸಲಿಲ್ಲ. ಧನಾಢ್ಯರಾದವರನ್ನು ದರಿದ್ರರನ್ನಾಗಿ ಮಾಡಲಿಲ್ಲ. ಪರಸ್ತ್ರೀಯರನ್ನು ಕಣ್ಣಿಂದಲಾದರೂ ರಾಮನು ದೃಷ್ಟಿಸಿ ನೋಡುವವನಲ್ಲ. ನಾನು ಆತನ ಪಟ್ಟಾಭಿಷೇಕ ವಾರ್ತೆಯನ್ನು ಕೇಳಿದೆನು. ಆಗ ಶ್ರೀರಾಮನ ಪಟ್ಟಾಭಿಷೇಕವನ್ನು ನಿಲ್ಲಿಸಿ ಅವನನ್ನು ವನವಾಸಕ್ಕೆ ಕಳುಹಿಸಿ ನಿನಗೆ ಪಟ್ಟವನ್ನು ಕಟ್ಟಬೇಕೆಂದು ದಶರಥರಾಜನನ್ನು ಬೇಡಿಕೊಂಡೆನು. ಆತನು ಪೂರ್ವದಲ್ಲಿ ದೇವಾಸುರರ ಯುದ್ಧದಲ್ಲಿ ನನಗೆ ವರವನ್ನು ಕೊಟ್ಟ ವೃತ್ತಾಂತವನ್ನು ನೆನೆದು ಶ್ರೀರಾಮನನ್ನು ವನಕ್ಕೆ ಕಳುಹಿಸಿದನು. ಶ್ರೀರಾಮನು ಸೀತಾಲಕ್ಷ್ಮಣಸಮೇತನಾಗಿ ವನಕ್ಕೆ ಹೋದನು. ಆಮೇಲೆ ದಶರಥರಾಯನು ತನ್ನ ಪ್ರಿಯಪುತ್ರನನ್ನು ಕಾಣದೆ ಪುತ್ರಶೋಕದಿಂದ ಹಂಬಲಿಸಿ ಚೈತನ್ಯ ಗುಂದಿ ಸ್ವರ್ಗಸ್ಥನಾದನು.

ಇನ್ನು ನೀನು ರಾಜ್ಯಾಧಿಪತ್ಯವನ್ನು ಮಾಡು. ನಿನ್ನ ನಿಮಿತ್ತವಾಗಿ ನಾನು ಇಂಥ ಕೃತ್ಯವನ್ನು ಮಾಡಿದೆನು. ಎಲೈ ಮಗನೆ ನೀನು ಶೋಕವನ್ನು ಮಾಡಬೇಡ, ಮನಸ್ಸಿಗೆ ಚಿಂತೆಯುಂಟುಮಾಡಿಕೊಳ್ಳದೆ ಧೈರ್ಯವನ್ನಾಶ್ರಯಿಸು. ಅಯೋಧ್ಯಾ ಪಟ್ಟಣವು ನಿನ್ನ ಅಧೀನ ವಾಗಿದೆ. ಈ ರಾಜ್ಯದಲ್ಲಿ ಶತ್ರುಗಳ ಭಯವಿಲ್ಲ. ಶೀಘ್ರದಲ್ಲಿ ವಸಿಷ್ಠಮುನಿ ಮೊದಲಾದ ಬ್ರಾಹ್ಮಣೋತ್ತಮರನ್ನು ಕರೆಕಳುಹಿಸಿ ದಶರಥರಾಯನ ಅಂತ್ಯಕರ್ಮವನ್ನು ತೀರಿಸಿ ಪಟ್ಟವನ್ನು ಕಟ್ಟಿಕೊಂಡು ಸುಖದಿಂದ ರಾಜ್ಯವನ್ನು ಪರಿಪಾಲಿಸು ಎಂದು ಭರತನಿಗೆ ಬುದ್ಧಿ ಹೇಳಿದಳು. **ಭರತನು ಕೈಕೇಯಿ ದೇವಿಯ ಮೇಲೆ ಕೋಪಿಸಿದ್ದು:** ಭರತನು ಆ ವೃತ್ತಾಂತವನ್ನು ಕೇಳಿ ಅತ್ಯಂತ ದುಃಖಾಕ್ರಾಂತನಾಗಿ ಕೈಕೇಯಾದೇವಿಯನ್ನು ಕುರಿತು ಹೀಗೆಂದನು: ನನ್ನ ತಂದೆಯಾದ ದಶರಥರಾಯನೂ ಆತನಿಗೆ ಸಮಾನನಾದ ಶ್ರೀರಾಮನ ಇಲ್ಲದ ರಾಜ್ಯದಿಂದ ನನಗೇನು ಪ್ರಯೋಜನ ಮೊದಲು ದಶರಥರಾಯನು ಸ್ವರ್ಗಸ್ಥನಾದ ವೃತ್ತಾಂತವನ್ನು ಕೇಳಿ ಈಗ ಸೀತಾಲಕ್ಷ್ಮಣಸಮೇತನಾಗಿ ಶ್ರೀರಾಮನು ವನಕ್ಕೆ ಹೋದ ವೃತ್ತಾಂತವನ್ನು ಕೇಳಿದೆನು. ಗಾಯದಮೇಲೆ ಗಾಯವಾದಂತೆ ನನಗೆ ಮಹತ್ತಾದ ವ್ಯಥೆಯುಂಟಾಗಿದೆ.

ಶ್ರೀರಾಮನನ್ನು ವನಕ್ಕೆ ಕಳುಹಿಸಿ, ಪುತ್ರಶೋಕದಿಂದ ಹಂಬಲಿಸಿ ಶರೀರತ್ಯಾಗವನ್ನು ಮಾಡುವಂತೆ ಮಾಡಿದ ದಶರಥರಾಯನ ವಂಶಕ್ಕೆ ನೀನು ಕಾಳರಾತ್ರಿಯಾದೆ.

ನನ್ನ ತಂದೆಯು ಬೂದಿಯಲ್ಲಿ ಮುಚ್ಚಿದ ಕೆಂಡದಂತಿರುವ ನಿನ್ನನ್ನು ಅರಿಯದೆ ಕೈಹಿಡಿದು ನಿನ್ನಿಂದ ಮೃತ್ಯುದೇವತೆಯ ವಶವಾದನು ಎಲೈ ಕುಲಗೆಡುಕಿ, ನೀನು ಅಜ್ಞಾನದಿಂದ ಇಕ್ಷ್ವಾಕುವಂಶಕ್ಕೆ ದೊಡ್ಡ ಅಪಕೀರ್ತಿಯನ್ನು ತಂದೆ. ಗುರುಭಕ್ತಿ ರಹಸ್ಯವನ್ನು ಬಲ್ಲ ಶ್ರೀರಾಮನು ತನ್ನ ತಾಯಿಯಾದ ಕೌಸಲ್ಯಾದೇವಿಯಲ್ಲಿ ಹೇಗೆ ಭಯಭಕ್ತಿಯಿಂದ ನಡೆಯುತ್ತಿದ್ದನೋ ಹಾಗೆ ನಿನ್ನಲ್ಲಿಯೂ ಅತಿವಿಶ್ವಾಸದಿಂದ ನಡೆಯುತ್ತಿದ್ದನು. ನನಗೆ ಹಿರಿಯ ತಾಯಿಯಾಗಿ ವಿವೇಕಿಯಾದ ಕೌಸಲಾದೇವಿಯು ನಿನ್ನನ್ನು ಸಾಕ್ಷಾತ್ ಒಡ ಹುಟ್ಟಿದ ತಂಗಿಯೋಪಾದಿಯಲ್ಲಿ ಕಾಣುತ್ತಿದ್ದಳು.

**ಮುಂದುವರಿಯುವುದು...**

---

# ಅಪರೂಪದ ವೈದ್ಯರು ತುಮಕೂರಿನ ಮಾನಸಿಕ ನರರೋಗ ಡಾಕ್ಟರ್ ಸಂಜಯ್ ರಾಜ್

**ಉಮೇಶ್ ಬಾಣಾವರ**

• ಉದಯವಾಹಿನಿ ಬೆಂಗಳೂರು

ವೈದ್ಯ ನಾರಾಯಣೋ ಹರಿ ಎನ್ನುತ್ತಾರೆ ಹಿರಿಯರು ಆದರೆ ಇಂದಿನ ದಿನಗಳಲ್ಲಿ ಸರ್ಕಾರಿ ಆಸ್ಪತ್ರೆಗಳಲ್ಲಿ ಅಲ್ಲಲ್ಲಿ ಉತ್ತಮ ಚಿಕಿತ್ಸೆ ಸಿಗುವುದು ಬಿಟ್ಟರೆ ಹೆಚ್ಚಾಗಿ


ಉತ್ತಮ ಚಿಕಿತ್ಸೆ ಪಡೆದು ಉಚಿತವಾಗಿ ಕಾಯಿಲೆಗಳನ್ನು ವಾಸಿ ಮಾಡಿಕೊಂಡು ಬರುವ ರೋಗಿಗಳು ದಿನೇ ದಿನೇ ಕಮ್ಮಿಯಾಗುತ್ತಿದ್ದಾರೆ ಈಗಿನ ದಿನಗಳಲ್ಲಿ ಒಂದು ಕಾಯಿಲೆಗೆ ಒಂದು ವೈದ್ಯರಂತೆ ರೋಗಿಗಳು ತೋರಿಸಿಕೊಂಡು ಅದಕ್ಕೆ ತಕ್ಕಂತೆ ಔಷಧಿಗಳನ್ನು ಪಡೆದು ತಾವು ದುಡಿದ ಹಣದಲ್ಲಿ ಆರೋಗ್ಯಕ್ಕಾಗಿ ವೆಚ್ಚ ಮಾಡಿ ತಮಗೆ ಬಂದ ಕಾಯಿಲೆಯಿಂದ ಇಡೀ ಶಾಪ ಹಾಕುತ್ತಾ ಇದು ಪೂರ್ವಜನ್ಮದ ಕರ್ಮವೇನು ಎಂದುಕೊಂಡು ಅವರಿಗೆ ಅವರೇ ಶಾಪ ಹಾಕಿಕೊಳ್ಳುತ್ತಾ ನೊಂದುಕೊಂಡೆ ತಮ್ಮ ಜೀವನ ನಡೆಸುತ್ತಿರುತ್ತಾರೆ.

ಇನ್ನೊಂದೆಡೆ ಆರ್ಥಿಕವಾಗಿ ಸಬಲರಾದವರು ತಮಗೆ ಬಂದ ಕಾಯಿಲೆಗೆ ಸೂಕ್ತ ತಜ್ಞ ವೈದ್ಯರನ್ನು ಭೇಟಿ ಮಾಡಿ ಎಷ್ಟೇ ಹಣ ಖರ್ಚಾದರೂ ಯೋಚಿಸದೆ ತಮ್ಮ ಆರೋಗ್ಯವನ್ನು ಸುಧಾರಿಸಿಕೊಂಡು ಹೋಗುತ್ತಿರುತ್ತಾರೆ. ಇವುಗಳ ಮಧ್ಯೆ ಮಧ್ಯಮ ವರ್ಗದ ಜನರು ತಮಗೆ ಏನಾದರೂ ಕಾಯಿಲೆಗಳು ಬಂದರೆ ಅವರಿವರನ್ನು ಸಂಪರ್ಕಿಸಿ ವೈದ್ಯರು ಮತ್ತು ಆಸ್ಪತ್ರೆಗಳ ಮಾಹಿತಿ ಕಲೆಹಾಕಿ ತಮಗೆ ಸಂಬಂಧಪಟ್ಟ ಕಾಯಿಲೆಗಳ ಬಗ್ಗೆ ಚರ್ಚಿಸಿ ಚಿಕಿತ್ಸೆ ಪಡೆದು ತಮ್ಮ ಆದಾಯದಲ್ಲಿ ಚಿಕಿತ್ಸೆ, ಔಷಧಿಗಳನ್ನು ಪಡೆದು ತಮ್ಮ ಜೀವನವನ್ನು ತಮಗೆ ತಾವೇ ಶಪಿಸಿಕೊಂಡು ಜೀವನ ನಡೆಸುತ್ತಿರುತ್ತಾರೆ

ಇದಲ್ಲದೆ ಇದಲ್ಲದೆ ಇಂದಿನ ಆಹಾರ ಪದ್ಧತಿಯಲ್ಲಿ, ಜಂಜಾಟದ ಜೀವನದಲ್ಲಿ ಪ್ರತಿಯೊಬ್ಬ ವ್ಯಕ್ತಿಗೂ ಸಹ ಸಾಮಾನ್ಯ ಕಾಯಿಲೆಗಳಾದ ಬಿಪಿ ಶುಗರ್ ಮನುಷ್ಯನ ಜೊತೆ ಜೊತೆಯಾಗಿಯೇ ಪ್ರಾರಂಭವಾಗಿದೆ ಇದರ ಮಧ್ಯೆ ಶುಗರ್ ಕಾಯಿಲೆ ಬರುವುದು ತಮ್ಮ ದೈನಂದಿನ ಒತ್ತಡದ ಜೀವನದ ಜಂಜಾಟದಿಂದ ಪ್ರಾರಂಭವಾಗುತ್ತಿದೆ ಎಂಬುದು ಸರ್ವೇ



ಡಾ. ಸಂಜಯ್ ರಾಜ್ ಮನಸಿಕ ನರರೋಗ ತಜ್ಞರು ತುಮಕೂರು



ಸಾಮಾನ್ಯವಾಗಿದೆ. ಇದರ ಮಧ್ಯೆ ಈಗಿನ ಒತ್ತಡದ ಜೀವನದ ಬಗ್ಗೆ ಈಗಿನ ಸಮಾಜದಲ್ಲಿ ಮಾನಸಿಕ ಒತ್ತಡ ಭಯ ಸಲ್ಲದ ಆಲೋಚನೆಗಳು ಚಿಕ್ಕ ಪುಟ್ಟ ವಿಷಯಗಳಿಗೂ ಸಹ ಗೊಂದಲಕ್ಕೊಳಗಾಗಿ ಮಾನಸಿಕ ಕಾಯಿಲೆ ಈಗಿನ ಯುವಕರಲ್ಲಿ ಕಾಣಿಸಿಕೊಳ್ಳುತ್ತಾ ಬರುತ್ತಿದೆ ಇದನ್ನು ವೈದ್ಯರ ಬಳಿ ಹೇಳಿಕೊಳ್ಳದೆ ಇದಕ್ಕೆ ಸರಿಯಾದ ವೈದ್ಯರನ್ನು ಹುಡುಕದೆ ಕೆಲವರು ತಮ್ಮ ಕುಟುಂಬದ ಸದಸ್ಯರೊಂದಿಗೆ ಮತ್ತು ಆಪ್ತ ಸ್ನೇಹಿತರಿಗೂ ಸಹ ಹೇಳಿಕೊಳ್ಳದ ರೀತಿಯಲ್ಲಿ ಗೊಂದಲಕ್ಕೆ ಒಳಗಾಗುತ್ತಿರುವುದು ಬಹುತೇಕ ಯುವ ಪೀಳಿಗೆಯಲ್ಲಿ ಹೆಚ್ಚಾಗಿ ಕಂಡು ಬರುತ್ತಿದೆ ಈ ಸಮಸ್ಯೆ ಹೇಳಿಕೊಂಡರೆ ಸಮಾಜದಲ್ಲಿ ಕೀಳರಿಮೆಯಾಗಿ ನೋಡುತ್ತಾರೆ ಎಂಬ ಭಯಕ್ಕಾಗಿ ಕೆಲವರು ಹೇಳಿಕೊಳ್ಳದೆ ಇದರಿಂದ ನಾನ ಕೆಟ್ಟ ಚಟಗಳಿಗೆ ದಾಸರಾಗುತ್ತಿರುವುದು ಸಹ ಕಂಡು ಬರುತ್ತಿದೆ ಧೂಮಪಾನ ಮದ್ಯಪಾನ ಇಂತಹ ಚಟಗಳಿಗೆ ಬಲಿಯಾಗಿ ಈಗ ಇಲ್ಲಿ ತೀವ್ರ ಸ್ವರೂಪವನ್ನು ಸಹ ಪಡೆಯುತ್ತಿದೆ ಮಹಿಳೆಯರಂತೂ ಯಾರೊಂದಿಗೂ ಸಹ ಈ ಸಮಸ್ಯೆಗಳ ಬಗ್ಗೆ ಚರ್ಚಿಸಿದೆ

ಇದಕ್ಕೆ ಸೂಕ್ತ ಚಿಕಿತ್ಸೆ ಪಡೆಯದೆ ಈ ಕಾಯಿಲೆ ತೀವ್ರ ಸ್ವರೂಪ ಪಡೆದುಕೊಳ್ಳುತ್ತಿರುವುದು ಕೆಲವು ವ್ಯಕ್ತಿಗಳಿಂದ ಕಂಡುಬಂದಿದೆ ಮೇಲಾಗಿ ಸರ್ಕಾರವು ಸಹ ತಾಲ್ಲೂಕು ಜಿಲ್ಲಾ ಮಟ್ಟದ ಆಸ್ಪತ್ರೆಗಳಲ್ಲಿ ಮಾನಸಿಕ ಖಿನ್ನತೆಗೆ ಒಳಗಾದವರಿಗೆ ವೈದ್ಯರು ಮತ್ತು ಚಿಕಿತ್ಸೆಯು ವ್ಯವಸ್ಥೆ ಇದ್ದರೂ ಸಹ ಇದು ಸರಿಯಾದ ರೀತಿ ಪ್ರಚಾರಕ್ಕೆ ಬಾರದೆ ಸಾರ್ವಜನಿಕರಿಗೆ ಇದರಿಂದ ಯಾವ ಪ್ರಯೋಜನವೂ ಆಗುತ್ತಿಲ್ಲ ಮತ್ತು ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಈ ಮೇಲಿನ ಕಾಯಿಲೆಗಳಿಂದ ಗುಣಪಟ್ಟ ವ್ಯಕ್ತಿಗಳ ಸಂಖ್ಯೆ ಬಾರಿ ಕಡಿಮೆ ಇರಬಹುದು ಏನೊ! ಈ ಎಲ್ಲಾ ಮೇಲಿನ ವಿಚಾರಗಳನ್ನು ಇಂದು ಪ್ರಸ್ತಾಪಿಸುವ ಕಾರಣ ಬಂದಿದ್ದು ಸ್ನೇಹಿತರೊಬ್ಬರು ಮಾನಸಿಕ ಒತ್ತಡದಿಂದ ಭಯಭೀತರಾಗಿ ರಾಜ್ಯದ ಯಾವ ಆಸ್ಪತ್ರೆಯನ್ನು ಬಿಡದೆ ಸುಖ ಸುಮ್ಮನೆ ಕಾಯಿಲೆಗಳನ್ನು ತಪಾಸಣೆ ಮಾಡಿಸಿಕೊಳ್ಳುವುದು ಈ ವಿಚಿತ್ರ ಕಾಯಿಲೆಗೆ ಒಳಗಾಗಿದ್ದ ಸಂದರ್ಭದಲ್ಲಿ ಈ ಮೇಲಿನ ಸಮಸ್ಯೆಯ ಬಗ್ಗೆ ನಾರಾಯಣ ಹೃದಯಾಲಯದ ಖ್ಯಾತ ಹೃದಯ ತಜ್ಞರೊಂದಿಗೆ ಚರ್ಚೆ ನಡೆಸುತ್ತಿರುವಾಗ ವೈದ್ಯರು ಹೇಳಿದ್ದು ಇದಕ್ಕೆ ಸೂಕ್ತ ವೈದ್ಯರು ಎಂದರೆ ತುಮಕೂರಿನ ಡಾಕ್ಟರ್ ಸಂಜಯ್ ರಾಜ್ ರವರ ಹೆಸರನ್ನು ಇದನ್ನು ಕೇಳಿದ ತಕ್ಷಣ ಕೆಲವೇ ದಿನಗಳಲ್ಲಿ ಸ್ನೇಹಿತರೊಬ್ಬರನ್ನು ಬಹಳ ಅನುಮಾನದಿಂದಲೇ ಡಾಕ್ಟರ್ ಸಂಜಯ್ ರಾಜ್ ರವರ ಬಳಿಗೆ ಕರೆದುಕೊಂಡು ಹೋದೆವು ವೈದ್ಯರು ಸ್ನೇಹಿತರ ಸಮಸ್ಯೆಯನ್ನು ಅವಲೋಕಿಸಿ ಕೆಲವೇ ದಿನಗಳಲ್ಲಿ ಈ ಸಮಸ್ಯೆಗೆ ಪರಿಹಾರ ಹುಡುಕೋಣ ಸೂಕ್ತ ಚಿಕಿತ್ಸೆ ನೀಡಿದ್ದೇನೆ ಅವರು ಈ ಕಾಯಿಲೆಯಿಂದ ವಾಸಿಯಾಗುತ್ತಾರೆ ಎಂದರು ಬಹಳ ಅನುಮಾನದಿಂದಲೇ ವಾಪಸಾದರೂ ವೈದ್ಯರ ಸರಳತೆನ ಮುಗುಳುನಗೆ ರೋಗಿಯೊಂದಿಗೆ ಮಾತನಾಡುವ ರೀತಿಯಿಂದ ಬಹುತೇಕ ಕಾಯಿಲೆ ವಾಸಿಯಾಗುವುದಾದರೂ ನಿಜ ಇದಲ್ಲದೆ ಸ್ನೇಹಿತರ ಕಾಯಿಲೆಯೂ ಸಹ ವಾಸಿಯಾಗುವ ಹಂತಕ್ಕೆ ಬಂದಿದೆ ಇದರೊಂದಿಗೆ ಸ್ನೇಹಿತ ಒಬ್ಬರಿಂದ ನಾಲ್ಕು ಜನ ಮಾನಸಿಕ ಒತ್ತಡದ ಸಮಸ್ಯೆಯಲ್ಲಿದ್ದ ಸ್ನೇಹಿತರು ಇಂದು ಡಾಕ್ಟರ್ ಸಂಜಯ್ ರಾಜ್ ರವರ ಚಿಕಿತ್ಸೆಯಿಂದ ಗುಣಮುಖರಾಗುತ್ತ ಬಂದಿದ್ದಾರೆ



**ಜೀವನವೇ ನರಕಾಯಾತನೆ**

**ಈ ಕಾಯಿಲೆಗೆ ಸಂಬಂಧಪಟ್ಟಂತೆ ಉದಯವಾಹಿನಿ ಪತ್ರಿಕೆಯ ಗಮನಕ್ಕೆ ಬಂದ ಆಸ್ಪತ್ರೆ ಎಂದರೆ ರಾಜ್ಯದಲ್ಲಿ ಹೆಸರುವಾಸಿಯಾಗಿರುವ ಖಾಸಗಿ ಆಸ್ಪತ್ರೆಯೊಂದು ಮತ್ತು ಸರ್ಕಾರಿಯ ಆಸ್ಪತ್ರೆ ಒಂದು ಆ ಖಾಸಗಿ ಆಸ್ಪತ್ರೆಯಲ್ಲಿ ಈ ಮೇಲಿನ ಸಮಸ್ಯೆಯಿಂದ ಮತ್ತು ಕಾಯಿಲೆಗಳಿಂದ ನರಳುತ್ತಿರುವವರ ರೋಗಿಗಳನ್ನು ಸಂಪರ್ಕಿಸಿ ಅವರನ್ನು ಮಾತನಾಡಿಸಲು ಆಗದೇ ಇದ್ದಾಗ ರೋಗಿಗಳನ್ನು ನೋಡಿಕೊಳ್ಳುತ್ತಿರುವವರ ಜೀವನವೇ ನರಕಾಯಾತನೆ ತಿಂಗಳಿಗೊಮ್ಮೆ ರೋಗಿಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಸಾವಿರಾರು ಹಣವನ್ನು ವೈದ್ಯರು ಮತ್ತು ಮಾತ್ರೆಗಳಿಗೆ ನೀಡಿ ಅವರನ್ನು ಕರೆದುಕೊಂಡು ಅವರನ್ನು ನೋಡಿಕೊಳ್ಳುವ ನರಕ ಯಾವ ಶತ್ರುವಿಗೂ ಬೇಡ ಎನ್ನುತ್ತಾರೆ ಮಾನಸಿಕ ರೋಗಿಗಳ ಅವಳಿಂಬಿತರು.**

ಕರ್ನಾಟಕ ಸರ್ಕಾರ ಜಿಲ್ಲೆಯಲ್ಲಿ ಒಂದು ಮಾನಸಿಕ ರೋಗದ ಆಸ್ಪತ್ರೆಯನ್ನು ತೆರೆದು ಈ ಆಸ್ಪತ್ರೆಗಳ ಮೂಲಕ ಸಂಜಯ್ ರಾಜ್ ರಂತಹ ವೈದ್ಯರನ್ನು ನೇಮಿಸಿ ಇಂದಿನ ಒತ್ತಡದ ಜೀವನದ ಮಧ್ಯ ಸಿಲುಕಿನರಳುತ್ತಿರುವ ಯುವ ಪೀಳಿಗೆಗೆ ಚಿಕಿತ್ಸೆಗಳು ಮತ್ತು ಸಲಹೆಗಳ ಕೇಂದ್ರಗಳನ್ನು ತೆರೆಯಬೇಕೆಂದು ಉದಯವಾಹಿನಿ ಪತ್ರಿಕೆ ರಾಜ್ಯದ ಆರೋಗ್ಯ ಸಚಿವರನ್ನು ಮನವಿ ಮಾಡುತ್ತದೆ

---




**ಸಾಮಾಜಿಕ ಕಳಕಳಿ**

ಹೆಚ್.ಎಸ್.ಪ್ರತಿಮಾ ಹಾಸನ್
ಸಾಹಿತಿ,ಶಿಕ್ಷಕಿ,ಸಾಮಾಜಿಕ ಚಿಂತಕಿ.ಹಾಸನ

## ಚುಟುಕು

ನೀನು: ನೀನು ಬೇರೆಯವರಿಗೆ ತೊಂದರೆ ಕೊಡಲ್ಲ,
ತೊಂದ್ರೆ ಕೊಟ್ಟರೆ ಅವರನ್ನ ಬಿಡಲ್ಲ,
ಬೇರೆಯವರ ತರ ಸುಳ್ಳು ಹೇಳೋಕೆ ಬರಲ್ಲ
ಹಾಗಂತ ಮನಸಲ್ಲಿ ಇರೋದು ಹೇಳದೆ ಇರಲ್ಲ.....

ಕತ್ತಿ: ಮರೆಯಲಾಗದೆ ಇರುವುದು ಪ್ರೀತಿ
ಬೇಡವೆಂದರೂ ಬರುವುದು ನೆನಪಿನ ಬುತ್ತಿ



ಮನದ ಆಸೆ ಆಕಾಂಕ್ಷೆಗಳ ಹೊತ್ತಿ
ಭಾವನೆಗಳ ಮಿಡಿತಗಳೊಂದಿಗೆ ಸಂಘರ್ಷ ಮಾಡುತಿದೆ
ಕತ್ತಿ....

---

## ಬ್ಯಾಂಕ್ ಮೊರೆ ಹೋಗುತ್ತಿರುವ ಅರಣ್ಯ ಇಲಾಖೆ

• ಉದಯವಾಹಿನಿ, ಬೆಂಗಳೂರು

ಅರಣ್ಯ ಪ್ರದೇಶ ಅತಿಕ್ರಮಣವನ್ನು ಕಡಿಮೆ ಮಾಡಲು, ಕರ್ನಾಟಕ ಅರಣ್ಯ ಇಲಾಖೆಯು ವಿಭಾಗೀಯ ಅರಣ್ಯ ಸಿಬ್ಬಂದಿ ಮೂಲಕ ಅತಿಕ್ರಮಣ ಪ್ರಕರಣಗಳು ಹೆಚ್ಚಿರುವ ಸ್ಥಳಗಳ ಪಟ್ಟಿಯೊಂದಿಗೆ ಬ್ಯಾಂಕುಗಳನ್ನು ಸಂಪರ್ಕಿಸುತ್ತಿದೆ. ಅರಣ್ಯ ಪ್ರದೇಶಗಳಲ್ಲಿ ಯಾವುದೇ ನಿರ್ಮಾಣ ಮಾಡದಿರಲು ಸಾಲ ನೀಡದಂತೆ ಒತ್ತಾಯಿಸುತ್ತಿದೆ. ಅರಣ್ಯ ಇಲಾಖೆ ಸಿಬ್ಬಂದಿ ಇತ್ತೀಚೆಗೆ ಎರಡು ಕ್ರಮ ಕೈಗೊಂಡಿದ್ದಾರೆ. ಕೋಲಾರ ಜಿಲ್ಲೆಯ ಶ್ರೀನಿವಾಸಪುರ ತಾಲ್ಲೂಕಿನಲ್ಲಿ ಒಬ್ಬರ ಭೂಮಿಗೆ ಸಾಲವನ್ನು ನೀಡದಂತೆ ಬ್ಯಾಂಕ್ ಶಾಖಾ ವ್ಯವಸ್ಥಾಪಕರನ್ನು ಕೋರಲಾಗಿದೆ. ಅತಿಕ್ರಮಣದಾರರ ವಿವರಗಳು ಮತ್ತು ರಿಟ್ ಅರ್ಜಿ ಸಂಖ್ಯೆಗಳೊಂದಿಗೆ ಅವರು ಜೂನ್ 6 ರಂದು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಕೂರಿಗೆಪಲ್ಲಿ ಶಾಖೆಗೆ ಪತ್ರ ಬರೆದಿದ್ದಾರೆ. ಹೊಸಹುಡ್ಯ ಗ್ರಾಮದ ಭೂಮಿಯನ್ನು ಸರ್ಕಾರದ ಅಧಿಸೂಚನೆಯ ಪ್ರಕಾರ ಜಾನಿಗಳಕುಂಟೆ ರಾಜ್ಯ ಅರಣ್ಯದ ಭಾಗವೆಂದು ಘೋಷಿಸಲಾಗಿದೆ ಎಂದು ಶ್ರೀನಿವಾಸಪುರ ಅರಣ್ಯ ವಲಯದ ಅರಣ್ಯ ಅಧಿಕಾರಿಗಳು ಪತ್ರದಲ್ಲಿ ತಿಳಿಸಿದ್ದಾರೆ. ನಾವು ಈ ಹಿಂದೆ ಅತಿಕ್ರಮಣವನ್ನು ನಿಯಂತ್ರಿಸಲು ಮತ್ತು ಅತಿಕ್ರಮಣಗೊಂಡ ಭೂಮಿಯನ್ನು ಮರಳಿ ಪಡೆಯಲು ಹಲವು ಮಾರ್ಗಗಳನ್ನು ಪ್ರಯತ್ನಿಸುತ್ತಿದ್ದೆವು. ಜನರು ಅರಣ್ಯ ಭೂಮಿ ಒತ್ತುವರಿ ಮಾಡಿಕೊಂಡು ಅಲ್ಲಿ ಮನೆಗಳು, ಶಾಲೆಗಳು ಇತ್ಯಾದಿಗಳನ್ನು ನಿರ್ಮಿಸಿದ್ದೇವೆ



**ಅತಿಕ್ರಮಣ ಭೂಮಿಗೆ ಸಾಲ ನೀಡಬೇಡಿ**

ಎಂದು ನ್ಯಾಯಾಲಯಗಳಿಗೆ ಮೊರೆ ಹೋಗುತ್ತಿರುವುದರಿಂದ ಸಾಬೀತು ಪಡಿಸಲು ವಿಫಲರಾಗಿದ್ದೇವೆ. ನಂತರ ಪ್ರಕರಣ ದೀರ್ಘಕಾಲದವರೆಗೆ ಮುಂದುವರಿದರೆ ಕ್ರಮ ಕೈಗೊಳ್ಳಲು ಸಾಧ್ಯವಾಗುವುದಿಲ್ಲ. ಈಗ, ನಾವು ಬ್ಯಾಂಕುಗಳನ್ನು ಸಂಪರ್ಕಿಸುವ ಹೊಸ ವಿಧಾನವನ್ನು ಪ್ರಯತ್ನಿಸುತ್ತಿದ್ದೇವೆ ಎಂದು ಹೆಸರು ಹೇಳಲು ಇಚ್ಛಿಸದ ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ಹೇಳುತ್ತಾರೆ.

ನಿರ್ಮಾಣ ಪ್ರಾರಂಭವಾದ ಮತ್ತು ಬ್ಯಾಂಕ್ ಸಾಲಗಳು ಅನುಮೋದನೆ ಪಡೆದ ಸಂದರ್ಭಗಳಲ್ಲಿ, ಜನರು ಇತರ ಆಯ್ಕೆಗಳನ್ನು ನೋಡುತ್ತಾರೆ.

ಅತಿಕ್ರಮಣದಾರರಿಗೆ ಹಣಕಾಸಿನ ಬೆಂಬಲವನ್ನು ನಿರ್ಬಂಧಿಸಲು ನಾವು ಪ್ರಯತ್ನಿಸುತ್ತೇವೆ. ನ್ಯಾಯಾಲಯಗಳು ಯಥಾಸ್ಥಿತಿ ಕಾಯ್ದುಕೊಳ್ಳಲು ನಿರ್ದೇಶಿಸಿದ್ದರೂ ಸಹ ಈ ಅತಿಕ್ರಮಣದಾರರು ನಿರ್ಮಾಣ ಚಟುವಟಿಕೆಯನ್ನು ಪ್ರಾರಂಭಿಸುತ್ತಾರೆ ಎಂದು ಅಧಿಕಾರಿಗಳು ಹೇಳುತ್ತಾರೆ.

---



**ವಿಶ್ವಾಸ್.ಡಿ.ಗೌಡ**

• ಉದಯವಾಹಿನಿ, ವಿಶೇಷ

## ಸಂಕಷ್ಟ ಚತುರ್ಥಿ ಕಥೆ

ಸಾಂಪ್ರದಾಯಿಕ ಕಥೆಗಳು ಗಣೇಶನನ್ನು ಶಿವನ ಪತ್ನಿಯಾದ ಪಾರ್ವತಿ ದೇವಿಯಿಂದ ರಚಿಸಲಾಗಿದೆ ಎಂದು ಹೇಳುತ್ತದೆ. ಪಾರ್ವತಿ ತನ್ನ ಸ್ನಾನಕ್ಕೆ ಬಳಸಿದ ಶ್ರೀಗಂಧದ ಅರಿಶಿನ ಪೇಸ್ಟ್‌ನಿಂದ ಗಣೇಶನನ್ನು ಸೃಷ್ಟಿಸಿದಳು ಮತ್ತು ಆಕೃತಿಗೆ ಜೀವ ತುಂಬಿದಳು. ಅವಳು ಸ್ನಾನ ಮಾಡುವಾಗ ಅವನನ್ನು ತನ್ನ ಬಾಗಿಲಲ್ಲಿ ಕಾವಲು ಕಾಯುವಂತೆ ಹೇಳಿದಳು.

ಶಿವನು ಹಿಂತಿರುಗಿದನು ಮತ್ತು ಗಣೇಶನಿಗೆ ತಿಳಿದಿಲ್ಲದ ಕಾರಣ, ಅವನು ಅವನನ್ನು ಪ್ರವೇಶಿಸಲು ಅನುಮತಿಸಲಿಲ್ಲ. ಶಿವನು ಕೋಪಗೊಂಡನು ಮತ್ತು ಮಗುವಿಗೆ ಕೆಲವು ನಡವಳಿಕೆಗಳನ್ನು ಕಲಿಸಲು ತನ್ನ ಅನುಯಾಯಿ ದೇವತೆಗಳನ್ನು ಕೇಳಿದನು. ಗಣೇಶನು ಬಹಳ ಶಕ್ತಿಶಾಲಿಯಾಗಿದ್ದನು, ಶಕ್ತಿಯ ಅಥವಾ ಶಕ್ತಿಯ) ಮೂರ್ತರೂಪವಾದ ಪಾರ್ವತಿಯಿಂದ ಜನಿಸಿದನು ಅವರು ದೈವಿಕ ಅನುಯಾಯಿಗಳನ್ನು (ಗಣ ಎಂದು ಕರೆಯುತ್ತಾರೆ) ಸೋಲಿಸಿದರು ಮತ್ತು ಅವರ ತಾಯಿ ಸ್ನಾನ ಮಾಡುವಾಗ ಯಾರಿಗೂ ಪ್ರವೇಶಿಸಲು ಅನುಮತಿಸಲಾಗುವುದಿಲ್ಲ ಎಂದು ಘೋಷಿಸಿದರು. ದೇವಲೋಕದ ಋಷಿ, ನಾರದ, ಸಪ್ತರ್ಷಿಗಳೊಂದಿಗೆ (ಏಳು ಬುದ್ಧಿವಂತ ಋಷಿಗಳು) ಬೆಳೆಯುತ್ತಿರುವ ಪ್ರಕ್ಷುಬ್ಧತೆಯನ್ನು ಗ್ರಹಿಸಿದರು ಮತ್ತು ಯಾವುದೇ ಫಲಿತಾಂಶವಿಲ್ಲದೆ ಹುಡುಗನನ್ನು ಸಮಾಧಾನಪಡಿಸಲು ಹೋದರು. ಕೋಪಗೊಂಡ, ದೇವತೆಗಳ ರಾಜ, ಇಂದ್ರನು ತನ್ನ ಸಂಪೂರ್ಣ ಸ್ವರ್ಗೀಯ ಸೈನ್ಯದೊಂದಿಗೆ ಹುಡುಗನ ಮೇಲೆ ದಾಳಿ ಮಾಡಿದನು, ಆದರೆ ಅವರಿಗೆ ಅವಕಾಶ ಸಿಗಲಿಲ್ಲ. ಅಷ್ಟೊತ್ತಿಗಾಗಲೇ ಈ ವಿಚಾರ ಶಿವ ದೇವತೆಗಳನ್ನು ಸೋಲಿಸಿದ ನಂತರ, ತ್ರಿಮೂರ್ತಿಗಳು, ಬ್ರಹ್ಮಾಂಡದ ನಿಯಂತ್ರಕ, ಸಂರಕ್ಷಕ ಮತ್ತು ವಿನಾಶಕ ಗಣೇಶನ ವಿರುದ್ಧ ಆಕ್ರಮಣವನ್ನು ಪ್ರಾರಂಭಿಸಿದರು. ಹೊಡೆದಾಟದ ನಡುವೆ ಶಿವನು ಮಗುವಿನ ತಲೆಯನ್ನು ತುಂಡರಿಸಿದನು. ತನ್ನ ಮಗ ಸತ್ತದ್ದನ್ನು ನೋಡಿ, ಪಾರ್ವತಿ ದೇವಿಯು ತನ್ನ ನಿಜ ಸ್ವರೂಪವನ್ನು ಆದಿ-ಶಕ್ತಿಯಾಗಿ ಬಹಿರಂಗಪಡಿಸಿದಳು, ಬ್ರಹ್ಮಾಂಡವನ್ನು ಇಂಧನವಾಗಿ ಮತ್ತು ವಸ್ತುವನ್ನು ಉಳಿಸಿಕೊಳ್ಳುವ ಪ್ರಧಾನ ಶಕ್ತಿ. ಭಯಾನಕ ರೂಪವನ್ನು ಪಡೆದು, ತನ್ನ ಮಗನನ್ನು ಕೊಂದ ಬ್ರಹ್ಮಾಂಡವನ್ನು ನಾಶಮಾಡಲು ಮತ್ತು ಉತ್ತಮವಾದದನ್ನು ಮರುಸೃಷ್ಟಿಸಲು ಪ್ರತಿಜ್ಞೆ ಮಾಡಿದಳು. ದೇವತೆಗಳು ಅವಳ ಮುಂದೆ ನಮಸ್ಕರಿಸಿದರು ಮತ್ತು ಶಿವನು ಅವಳ ಮಗ ಮತ್ತೆ ಬದುಕುತ್ತಾನೆ ಎಂದು ಭರವಸೆ ನೀಡಿದನು. ತ್ರಿಮೂರ್ತಿಗಳು ತಲೆಗಾಗಿ ಜಗತ್ತನ್ನು ಬೇಟೆಯಾಡಿದರು ಮತ್ತು ತಾಯಿ ಆನೆಯೊಂದು ಸತ್ತ ಮಗುವಿಗಾಗಿ ಅಳುವುದನ್ನು ಕಂಡರು.

ಅವರು ತಾಯಿಯನ್ನು ಸಮಾಧಾನಪಡಿಸಿದರು ಮತ್ತು ಗಣೇಶನ ತಲೆಯ ಸ್ಥಳದಲ್ಲಿ ಆನೆಯ ತಲೆಯನ್ನು ಸರಿಪಡಿಸಿದರು. ಭಗವಾನ್ ಶಿವಈ ದಿನದಿಂದ, ಹುಡುಗನನ್ನು ಗಣೇಶ ಗಣ-ಈಶ: ಗಣಗಳ ಅಧಿಪತಿ ಎಂದು ಕರೆಯಲಾಗುವುದು ಎಂದು ಘೋಷಿಸಿದರು . ಅಲ್ಲದೆ, ಹಿಂದೂ ಧರ್ಮಗ್ರಂಥಗಳ ಪ್ರಕಾರ, ಈ ಪವಿತ್ರ ದಿನದಂದು ಭಗವಾನ್ ಶಿವನು ವಿಷ್ಣು, ಲಕ್ಷ್ಮಿ ಮತ್ತು ಪಾರ್ವತಿಯನ್ನು ಹೊರತುಪಡಿಸಿ ಇತರ ದೇವರುಗಳ ಮೇಲೆ ತನ್ನ ಮಗನಾದ ಸಂಕಷ್ಟಿಯ (ಗಣೇಶನ ಇನ್ನೊಂದು ಹೆಸರು) ಪ್ರಾಬಲ್ಯವನ್ನು ಘೋಷಿಸಿದನು. ಅಂದಿನಿಂದ, ಸಂಕಷ್ಟಿ ಭಗವಂತನನ್ನು ಸಮೃದ್ಧಿ, ಅದೃಷ್ಟ ಮತ್ತು ಸ್ವಾತಂತ್ರ್ಯದ ದೇವರಾಗಿ ಪೂಜಿಸಲಾಗುತ್ತದೆ. ಸಂಕಷ್ಟಿ ಚತುರ್ಥಿಯ ದಿನದಂದು, ಗಣೇಶನು ತನ್ನ ಎಲ್ಲಾ ಭಕ್ತರಿಗೆ, ಭೂಮಿಯ ಮೇಲೆ ತನ್ನ ಉಪಸ್ಥಿತಿಯನ್ನು ದಯಪಾಲಿಸುತ್ತಾನೆ ಎಂದು ನಂಬಲಾಗಿದೆ.



**ಗಜಾನನಂ ಭೂತ ಗಣಾಧಿ ಸೇವಿತಂ ಶ್ಲೋಕ**

**ಗಜಾನನಂ ಭೂತ ಗಣಾಧಿ ಸೇವಿತಂ ಶ್ಲೋಕದ ಅರ್ಥವೇನೆಂದರೆ (ಶ್ರೀ ವಿಘ್ನೇಶ್ವರನ ಪಾದಕಮಲಗಳಿಗೆ ನಾನು ಗೌರವದಿಂದ ನಮಸ್ಕರಿಸುತ್ತೇನೆ), ಆನೆಯ ಮುಖವುಳ್ಳವನು, ಭೂತಗಣಗಳು (ಸ್ವರ್ಗೀಯ ಸೇವಕರು) ಮತ್ತು ಇತರರಿಂದ ಬಡಿಸಲಾಗುತ್ತದೆ, ಕಪಿತ, ರುಚಿಕರವಾದ ಹಣ್ಣು. ಭಕ್ತರು ಅರ್ಪಿಸುತ್ತಾರೆ ಮತ್ತು ಜಂಬೂವನ್ನು ಸೇವಿಸುತ್ತಾರೆ; ಉಮಾ ದೇವಿಯ (ಪಾರ್ವತಿ ದೇವಿಯ) ಮಗ ಮತ್ತು ತೊಂದರೆಯನ್ನು ಸೋಲಿಸುವವನು, ನಾನು ವಿಘ್ನೇಶ್ವರ ಗಣೇಶನ ಪಾದಕಮಲಗಳಿಗೆ ಗೌರವಪೂರ್ವಕವಾಗಿ ನಮಸ್ಕರಿಸುತ್ತೇನೆ.**

---

## ಸಕ್ಕರೆ ಫೇಸ್‌ಪ್ಯಾಕ್ ಮುಖಕ್ಕೆ ಹಚ್ಚಿದ್ರೆ

ಸಕ್ಕರೆಯನ್ನು ಬಳಸಿ ನಮ್ಮ ಮುಖದ ಕಾಂತಿಯನ್ನು ಹೆಚ್ಚಿಸುವುದು ಹೇಗೆ ಅನ್ನೋದು ನಿಮಗೆ ಗೊತ್ತಾ ಸಕ್ಕರೆ ಸ್ಕಬ್, ಸಕ್ಕರೆ ಫೇಸ್‌ಪ್ಯಾಕ್ ತಯಾರಿಸಿ ಮುಖಕ್ಕೆ ಹಚ್ಚಿದ್ರೆ ಮುಖದಲ್ಲಿ ಗ್ಲೋ ಬರುತ್ತೆ ನೀವೂ ಟ್ರೈ ಮಾಡಿ ನೋಡಿ. ಪ್ರತಿಯೊಬ್ಬರಿಗೂ ತಾವು ಸುಂದರವಾಗಿರಬೇಕು, ನಮ್ಮ ಮುಖದಲ್ಲಿ ಯಾವುದೇ ಕಲೆಗಳು ಇರಬಾರದು, ಸ್ಕಿನ್ ಆರೋಗ್ಯದಿಂದಿರಬೇಕೆಂಬ ಹಂಬಲವಿರುತ್ತದೆ. ಅದಕ್ಕಾಗಿ ಕೆಲವರು ಬ್ಯೂಟಿ ಪಾರ್ಲರ್‌ಗೆ ಹೋಗಿ ತಮ್ಮ ಸೌಂದರ್ಯವನ್ನು ವೃದ್ಧಿಸಲು ಪ್ರಯತ್ನಿಸಿದರೆ ಇನ್ನೂ ಕೆಲವರು ಮನೆಯಲ್ಲೇ ತಮಗೆ ತಿಳಿದಿರುವ ಮನೆಮದ್ದುಗಳನ್ನು ಮಾಡುತ್ತಾರೆ. ನಾನಾ ರೀತಿಯ ಫೇಸ್‌ಪ್ಯಾಕ್‌ಗಳನ್ನು ತಯಾರಿಸುತ್ತಾರೆ. ತಮ್ಮ ಅಡುಗೆ ಮನೆಯಲ್ಲಿರುವ ಸಾಮಾಗ್ರಿಗಳಿಂದ ಫೇಸ್ ಪ್ಯಾಕ್ ತಯಾರಿಸುತ್ತಾರೆ. ನೀವೂ ಕೂಡಾ ನಿಮ್ಮ ಅಡುಗೆ ಮನೆಯಲ್ಲಿರುವ ಸಾಮಾಗ್ರಿಗಳನ್ನು ಬಳಸಿ ಸುಲಭವಾಗಿ ಖರ್ಚಿಲ್ಲದೆ ನಿಮ್ಮ ಮುಖವನ್ನು ಸುಂದರವಾಗಿಸಬೇಕಾದರೆ ಇಲ್ಲಿದೆ ಒಂದು ಟಿಪ್ಸ್.

**ಮುಖಕ್ಕೆ ಸಕ್ಕರೆಯನ್ನು ಬಳಸುವ ಸರಿಯಾದ ವಿಧಾನ**

**ಮುಖಕ್ಕೆ ಸ್ಕಬ್ ಅಥವಾ ಫೇಸ್ ಪ್ಯಾಕ್ ಆಗಿ ಸಕ್ಕರೆಯನ್ನು ಹಚ್ಚುವುದು ತುಂಬಾ ಸುಲಭ. ಅದನ್ನು ನಿಮ್ಮ ಬೆರಳುಗಳ ಸಹಾಯದಿಂದ ನಿಮ್ಮ ಮುಖದ ಮೇಲೆ ಹಚ್ಚಿ ಮತ್ತು ನಂತರ ನಿಧಾನವಾಗಿ ಮಸಾಜ್ ಮಾಡಿ. ನೀವು ಅದನ್ನು ಫೇಸ್ ಪ್ಯಾಕ್ ಆಗಿ ಬಳಸುತ್ತಿದ್ದರೆ, ಹಚ್ಚಿದ 15 ನಿಮಿಷಗಳ ನಂತರ ನಿಮ್ಮ ಮುಖವನ್ನು ಶುದ್ಧ ನೀರಿನಿಂದ ತೊಳೆಯಿರಿ.**

**ಚರ್ಮಕ್ಕೆ ಸಕ್ಕರೆಯ ಬಳಕೆ:** ಸಮಾನ್ಯವಾಗಿ ಸಕ್ಕರೆ ಸೇವನೆ ಆರೋಗ್ಯಕ್ಕೆ ಒಳ್ಳೆಯದಲ್ಲ ಎನ್ನಲಾಗುತ್ತದೆ. ಆದರೆ ಸಕ್ಕರೆಯನ್ನು ನೀವು ನಿಮ್ಮ ಚರ್ಮಕ್ಕೆ ಬಳಸ ಬಹುದು. ಸಕ್ಕರೆಯನ್ನು ಸೇವಿಸುವುದ ರಿಂದ ಚರ್ಮಕ್ಕೆ ಹಾನಿಯಾಗುತ್ತದೆ ಆದರೆ ನೀವು ಅದೇ ಸಕ್ಕರೆಯನ್ನು ನಿಮ್ಮ ಚರ್ಮದ ಮೇಲೆ ಫೇಸ್ ಪ್ಯಾಕ್ ಅಥವಾ ಸ್ಕಬ್ ಆಗಿ ಹಚ್ಚಿದರೆ, ಅದರಿಂದ ಸಾಕಷ್ಟು ಪ್ರಯೋಜನಗಳಿವೆ. ಆದರೆ ಸಕ್ಕರೆಯನ್ನು ಬಳಸುವ ಸರಿಯಾದ ವಿಧಾನವನ್ನು ತಿಳಿಯುವುದು ಮುಖ್ಯ.

**ಸಕ್ಕರೆ ಹಚ್ಚುವುದರಿಂದಾಗುವ ಪ್ರಯೋಜನಗಳು:** ಸಕ್ಕರೆ ಮುಖದ ಮೇಲೆ ನೈಸರ್ಗಿಕ ಸ್ಕಬ್ ಆಗಿ ಕಾರ್ಯ ನಿರ್ವಹಿಸುತ್ತದೆ. ಇದು ಮುಖದ ಚರ್ಮದ ಡೆಡ್ ಸ್ಕಿನ್‌ಗಳನ್ನು ತೆಗೆದುಹಾಕಲು ಸಹಾಯ ಮಾಡುತ್ತದೆ. ವಯಸ್ಸಾದ ಚಿಹ್ನೆಗಳನ್ನು ನಿಯಂತ್ರಿಸುತ್ತದೆ. ಸಕ್ಕರೆ ದೀರ್ಘಕಾಲದವರೆಗೆ ಚರ್ಮವನ್ನು ತೇವಾಂಶದಿಂದ ಇಡುತ್ತದೆ ಮತ್ತು ಮುಖಕ್ಕೆ ಹೊಳಪನ್ನು ನೀಡುತ್ತದೆ.

**ಮುಖಕ್ಕೆ ಸಕ್ಕರೆಯ ಪ್ಯಾಕ್ ತಯಾರಿಸುವುದು ಹೇಗೆ:** ಮುಖಕ್ಕೆ ಸಕ್ಕರೆಯನ್ನು ಬಳಸುವುದು ತುಂಬಾ ಸುಲಭ. ಮಿಕ್ಸರ್ ಗ್ರೈಂಡರ್ ಸಹಾಯದಿಂದ ಸಕ್ಕರೆಯನ್ನು ಪುಡಿಮಾಡಿ ಮತ್ತು ಅದಕ್ಕೆ ಸ್ವಲ್ಪ ಜೇನುತುಪ್ಪವನ್ನು ಸೇರಿಸಿ. ನಂತರ ಅದನ್ನು ಚೆನ್ನಾಗಿ ಮಿಕ್ಸ್ ಮಾಡಿ ಮುಖದ ಮೇಲೆ ಹಚ್ಚಿರಿ.



# ಬೆಳಗಾವಿಯಲ್ಲಿ ಹದ್ದು ಮೀರಿದ ಅಕ್ರಮ ಮದ್ಯ

## • ಮಿಲಿಟರಿ ಕೋಟಾ ದುರ್ಬಳಕೆಯೇ ಹೆಚ್ಚು ಬ್ರ್ಯಾಂಡೆಡ್ ಬಾಟಲ್‌ಗಳಲ್ಲಿ ನಕಲಿ ಮದ್ಯ ಎಚ್ಚರ

• ಉದಯವಾಹಿನಿ ಬೆಳಗಾವಿ

ಜಿಲ್ಲೆಯಲ್ಲಿ ಅಕ್ರಮ ಮದ್ಯ ಮಾರಾಟ ಎಗ್ಗಿಲ್ಲದೆ ನಡೆಯುತ್ತಿದ್ದು, 10 ತಿಂಗಳಲ್ಲಿ ಅಬಕಾರಿ ಇಲಾಖೆ ವಿವಿಧೆಡೆ ನಡೆಸಿದ ಕಾರ್ಯಾಚರಣೆಯಲ್ಲಿ ಸಾವಿರಾರು ಲೀಟರ್ ಅಕ್ರಮ ಮದ್ಯ ಜಪ್ತಿಯಾಗಿದೆ. ಅದರಲ್ಲಿ 5 ಸಾವಿರಕ್ಕೂ ಅಧಿಕ ಲೀಟರ್ 'ಡಿಫೆನ್ಸ್ ಮದ್ಯ' ಪತ್ತೆಯಾಗಿರುವುದು ವ್ಯವಸ್ಥೆಯ ಲೋಪಕ್ಕೆ ಹಿಡಿದ ಕನ್ನಡಿಯಾಂತಿದೆ.

ಅಕ್ರಮ ಮದ್ಯ ಮಾರಾಟ ಹಾಗೂ ಬಾರ್‌ಗಳಲ್ಲಿ ನಿಗದಿತ ಸಮಯ ಮೀರಿ ತಡರಾತ್ರಿವರೆಗೂ ಮದ್ಯ ಮಾರಾಟ ಮಾಡುತ್ತಿರುವುದು ಮತ್ತು ಧಾರ್ಮಿಕ ತಾಣಗಳಲ್ಲಿ ಮದ್ಯ ಬಳಕೆ ಕುರಿತು ಸಾರ್ವಜನಿಕರು, ನಾನಾ ಸಂಘ ಸಂಸ್ಥೆಗಳಿಂದ ಅಧಿಕಾರಿಗಳಿಗೆ ವ್ಯಾಪಕ ದೂರು ಬಂದಿದ್ದವು. ಈ ಹಿನ್ನೆಲೆಯಲ್ಲಿ ನಿಗದಿತ ಸಮಯಕ್ಕಿಂತ ಮುಂಚೆಯೇ ಮದ್ಯ ಮಾರಾಟ ಮಳಿಗೆ ತೆರೆದು ಮದ್ಯ ಮಾರಾಟ ಮಾಡುತ್ತಿರುವವರಿಗೆ ಬಿಸಿ ಮುಟ್ಟಿಸಿದ್ದು, ಅಕ್ರಮವಾಗಿ ಮದ್ಯ ಸಾಗಾಟ, ಮಾರಾಟ ಮಾಡುತ್ತಿದ್ದವರ ಮೇಲೂ ದಾಳಿ ನಡೆಸಲಾಗಿದೆ. 2024ರ ಜು. 1ರಿಂದ 2025ರ ಮೇ 30 ವರೆಗೆ ನಡೆಸಿದ ಕಾರ್ಯಾಚರಣೆಯಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ಒಟ್ಟು 1,925 ಪ್ರಕರಣ ದಾಖಲಿಸಿಕೊಂಡು, 35,672.20 ಲೀಟರ್ ಮದ್ಯ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ.

**ಡಿಫೆನ್ಸ್ ಮದ್ಯ ಅಕ್ರಮ ಹೆಚ್ಚು:** ಬೆಳಗಾವಿ ಜಿಲ್ಲೆಯಲ್ಲಿ ಅಕ್ರಮವಾಗಿ ಮಾರಾಟ ಮಾಡುತ್ತಿದ್ದ 5,764 ಲೀಟರ್ ಡಿಫೆನ್ಸ್ ಮದ್ಯ ಜಪ್ತಿ ಮಾಡಲಾಗಿದೆ. ರಾಜ್ಯದಲ್ಲಿಯೇ ಮಿಲಿಟರಿ ಮದ್ಯ ಅಕ್ರಮ ಮಾರಾಟ ಅತಿ ದೊಡ್ಡ ಪ್ರಮಾಣದಲ್ಲಿ ಪತ್ತೆಯಾಗಿರುವುದು ಬೆಳಗಾವಿಯಲ್ಲೇ ಎನ್ನುವುದು ಆತಂಕಕಾರಿ ವಿಷಯ.

ಬೆಳಗಾವಿ ಜಿಲ್ಲೆಯಲ್ಲಿ ಮಿಲಿಟರಿ ಕ್ಯಾಂಪ್ ಪ್ರದೇಶ ಇರುವುದರಿಂದ ಇಲ್ಲಿ ಕ್ಯಾಂಟೀನ್ ಸ್ಟೋರ್ ಡಿಪಾರ್ಟ್‌ಮೆಂಟ್ (ಸಿಎಸ್‌ಡಿ) ಇದೆ. ನಿವೃತ್ತ ಹಾಗೂ ಸೇವಾನಿರತ ಮಿಲಿಟರಿ ಸೈನಿಕರಿಗೆ ಹಾಗೂ ಸೇನಾಧಿಕಾರಿಗಳಿಗೆ ಗುರುತಿನ ಚೀಟಿ ಪರಿಶೀಲಿಸಿ, ಮಿಲಿಟರಿ ಕ್ಯಾಂಟೀನ್‌ನಲ್ಲಿ ರಿಯಾಯಿತಿ ದರದಲ್ಲಿ ನಿಗದಿತ ಪ್ರಮಾಣದಲ್ಲಿ ಬ್ರ್ಯಾಂಡೆಡ್ ಮದ್ಯ ನೀಡಲಾಗುತ್ತದೆ. ಮದ್ಯ ಸೇವನೆ ಮಾಡದ ಕೆಲವರು ಖರೀದಿಸಿ ಬೇರೆಯವರಿಗೆ ನೀಡುತ್ತಾರೆ. ಇಂಥವರು ಡಿಫೆನ್ಸ್ ಕೋಟಾ ದುರ್ಬಳಕೆ ಮಾಡಿಕೊಂಡು ಹೊರಗಡೆ ಹೆಚ್ಚಿನ ದರಕ್ಕೆ ಮಾರಾಟ ಮಾಡುತ್ತಿದ್ದಾರೆ. ಇದನ್ನೇ ಬಂಡವಾಳ ಮಾಡಿಕೊಂಡ ಕೆಲವರು ಖಾಲಿಯಾದ ಬ್ರ್ಯಾಂಡೆಡ್ ಬಾಟಲ್‌ಗಳಿಗೆ ಕಡಿಮೆ ಬೆಲೆಯ ಮದ್ಯ ತುಂಬಿಸಿ ಮಿಲಿಟರಿ ಬ್ರ್ಯಾಂಡ್ ಎಂದು ಅಕ್ರಮವಾಗಿ ಹೆಚ್ಚಿನ ದರಕ್ಕೆ ಮಾರಾಟ ಮಾಡುತ್ತಿರುವುದು ಬೆಳಕಿಗೆ ಬಂದಿದೆ ಎನ್ನುತ್ತಾರೆ ಇಲಾಖೆ ಅಧಿಕಾರಿಗಳು.

ಜಿಲ್ಲೆಯಲ್ಲಿ ಅಕ್ರಮ ಮದ್ಯ ಮಾರಾಟ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಲಾಗಿದೆ. ದೂರುಗಳು ಬಂದ ಕಡೆ ತಕ್ಷಣ ದಾಳಿ ನಡೆಸಿ ಅಕ್ರಮ ಮದ್ಯ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. ನಿಯಮ ಉಲ್ಲಂಘಿಸುವ ಮದ್ಯ ಮಳಿಗೆಗಳ ವಿರುದ್ಧವೂ ಕಾನೂನು ಕ್ರಮ ಜರುಗಿಸಲಾಗಿದೆ ಎಂದಿದ್ದಾರೆ ವಿಜಯ ಹಿರೇಮಠ, ಎಸ್‌ಪಿ, ಅಬಕಾರಿ ಇಲಾಖೆ

• ಬೆಳಗಾವಿ ಜಿಲ್ಲೆಯಲ್ಲಿ 10 ತಿಂಗಳಲ್ಲಿ 1,925 ಅಕ್ರಮ ಮದ್ಯ ಮಾರಾಟ ಪ್ರಕರಣಗಳು ದಾಖಲಿಸಲಾಗಿದೆ, 35,672.20 ಲೀಟರ್ ಮದ್ಯ ಜಪ್ತಿಯಾಗಿದೆ.

• ಬೆಳಗಾವಿಯಲ್ಲಿಯೇ 5,764 ಲೀಟರ್ 'ಡಿಫೆನ್ಸ್ ಮದ್ಯ' ಅಕ್ರಮವಾಗಿ ಮಾರಾಟವಾಗುತ್ತಿದೆ, ಇದು ರಾಜ್ಯದಲ್ಲಿನ ಎಲ್ಲಾ ಮಿಲಿಟರಿ ಮದ್ಯ ಮಾರಾಟದ ಅತಿದೊಡ್ಡ ಪ್ರಮಾಣವಾಗಿದೆ.

• ಗ್ರಾಮೀಣ ಭಾಗದಲ್ಲಿ ಅಧಿಕೃತ ಬಾರ್ ಮತ್ತು ಮದ್ಯ ಮಾರಾಟ ಮಳಿಗೆಗಳ ಕೊರತೆಯಿಂದಾಗಿ, ಕೆಲ ಕಿರಾಣಿ ಅಂಗಡಿ ಮತ್ತು ಮನೆಯಲ್ಲಿಯೇ ಅಕ್ರಮ ಮದ್ಯ ಮಾರಾಟ ನಡೆಯುತ್ತಿದೆ.




### ಗೋವಾ ಮದ್ಯ ಹಾವಳಿ

ಬೆಳಗಾವಿ ವಲಯದ ದಕ್ಷಿಣ ಭಾಗದಲ್ಲಿ 917 ಮತ್ತು ಉತ್ತರದಲ್ಲಿ 1,008 ಅಕ್ರಮ ಮದ್ಯ ಮಾರಾಟ ಪ್ರಕರಣಗಳು ದಾಖಲಾಗಿವೆ. ಅಂತಾರಾಜ್ಯ ಜಾಲಗಳು ಕಳ್ಳ ಮಾರ್ಗದಲ್ಲಿ ಸಾಗಿಸಲಾಗುತ್ತಿದ್ದ 4,314.945 ಲೀಟರ್ ನಿಷೇಧಿತ ಮದ್ಯ, 109 ಲೀಟರ್ ಬಿಯರ್ ಸೇರಿದಂತೆ ವಿವಿಧ ಕಂಪನಿಗಳ ಅಕ್ರಮ ಮದ್ಯ ಜಪ್ತಿ ಮಾಡಲಾಗಿದೆ. ಇದರಲ್ಲಿ ಗೋವಾದಿಂದ ಅಕ್ರಮವಾಗಿ ಸಾಗಿಸುತ್ತಿದ್ದ ಮದ್ಯವೇ ಹೆಚ್ಚು ಪತ್ತೆಯಾಗಿದೆ ಎನ್ನುವುದು ಅಧಿಕಾರಿಗಳ ಅಭಿಪ್ರಾಯ.

### 70ಕ್ಕೂ ಹೆಚ್ಚು ವಾಹನ ವಶ

ಶ್ರೀ ಕ್ಷೇತ್ರ ಯಲ್ಲಮ್ಮನ ಗುಡ್ಡ ಸೇರಿ ಇತರ ಪ್ರಸಿದ್ಧ ಪ್ರವಾಸಿ ಸ್ಥಳಗಳಲ್ಲಿ ಹೆಚ್ಚಾಗಿ ಅಕ್ರಮ ಮದ್ಯ ಮಾರಾಟ ಮಾಡುವ ದೂರುಗಳು ಕೇಳಿಬಂದಿವೆ. ಹೀಗಾಗಿ ಅಬಕಾರಿ ಇಲಾಖೆಯ ಪೊಲೀಸರು ಜಿಲ್ಲೆಯ ಪ್ರವಾಸಿ ತಾಣ ಹಾಗೂ ಧಾರ್ಮಿಕ ಕೇಂದ್ರಗಳ ಮೇಲೂ ಹದ್ದಿನ ಕಣ್ಣಿಟ್ಟಿದ್ದು, ಜಿಲ್ಲೆಯಲ್ಲಿ ಅಕ್ರಮ ಮದ್ಯ ಮಾರಾಟ ಮಾಡುತ್ತಿದ್ದ 1,541 ಆರೋಪಿಗಳನ್ನು ಬಂಧಿಸಿ ಕಾನೂನು ಕ್ರಮ ಜರುಗಿಸಲಾಗಿದೆ. ಜತೆಗೆ ಅಕ್ರಮ ಮದ್ಯ ಸಾಗಾಟಕ್ಕೆ ಬಳಸಲಾಗಿದ್ದ 58 ದ್ವಿಚಕ್ರ ಹಾಗೂ ತ್ರಿಚಕ್ರ ವಾಹನ, ನಾಲ್ಕು ಚಕ್ರದ ವಾಹನ - 10, ಐದು ಭಾರೀ ವಾಹನ ವಶಪಡಿಸಿಕೊಳ್ಳಲಾಗಿದೆ.

# ಮಿನಿ ನ್ಯೂಸ್

## ತಂಬಾಕು ಮಾರಾಟಕ್ಕೆ ಪರವಾನಗಿ ಕಡ್ಡಾಯ

• ಉದಯವಾಹಿನಿ ಕಾಳಗಿ



ಪಟ್ಟಣದ ವ್ಯಾಪ್ತಿಯಲ್ಲಿ ಬರುವಂತಹ ತಂಬಾಕು ಉತ್ಪನ್ನಗಳ ಮಾರಾಟಗಾರರು ಕಡ್ಡಾಯವಾಗಿ ಪಟ್ಟಣ ಪಂಚಾಯತನಲ್ಲಿ ಪರವಾನಗಿ ಪಡೆದುಕೊಳ್ಳಬೇಕೆಂದು ಪಟ್ಟಣ ಪಟ್ಟಣ ಪಂಚಾಯತ ಮುಖ್ಯಾಧಿಕಾರಿ ಪಂಕಜಾ ಎ ತಿಳಿಸಿದ್ದಾರೆ. ಕರ್ನಾಟಕ ಸರ್ಕಾರದ ನಗರಾಭಿವೃದ್ಧಿ ಇಲಾಖೆ 2022 ಮೇ 19 ರಂದು ಹೊರಡಿಸಿದ ಕರ್ನಾಟಕ ರಾಜ್ಯ ಪತ್ರದ ಆದೇಶದಂತೆ ಪಟ್ಟಣ ಪಂಚಾಯತ ವ್ಯಾಪ್ತಿಯಲ್ಲಿ ತಂಬಾಕು ಉತ್ಪನ್ನಗಳನ್ನು ಮಾರಾಟ ಮಾಡಲು ಪ್ರತ್ಯೇಕ ಪರವಾನಗಿ ಪಡೆಯುವುದು ಕಡ್ಡಾಯವಾಗಿದೆ ಹೆಚ್ಚಿನ ಮಾಹಿತಿಗಾಗಿ ಪಟ್ಟಣ ಪಂಚಾಯತ ಆರೋಗ್ಯ ಶಾಖೆಯಲ್ಲಿ ಸಂಪರ್ಕಿಸಲು ತಿಳಿಸಿದಾರೆ.

## ಬಸ್-ಕ್ರೂಸರ್ ಡಿಕ್ಕಿ : ತಪ್ಪಿದ ಭಾರಿ ಅನಾಹುತ

• ಉದಯವಾಹಿನಿ ಔರಾದ್

ಪಟ್ಟಣದ ಹೊರವಲಯದ ಉದಗೀರ ರಸ್ತೆಯಲ್ಲಿ ರಸ್ತೆ ಬದಿ ಟಿಕೆಟ್ ಪಡೆಯಲು ನಿಂತಿದ್ದ ಬಸ್‌ಗೆ ಎದುರಿನಿಂದ ಬಂದ ಕ್ರೂಸರ್ ಡಿಕ್ಕಿ ಹೊಡೆದ ಪರಿಣಾಮ ಚಾಲಕ ಸೇರಿದಂತೆ ಐವರಿಗೆ ತೀವ್ರವಾಗಿ ಗಾಯವಾಗಿದೆ. ಚಾಲಕ ಅರುಣ, ಪ್ರಯಾಣಿಕರಾದ ಅಹ್ಮದ್, ಜನಾಬಾಯಿ, ವಿಜಯಲಕ್ಷ್ಮಿ ಸೇರಿ ನಾಲ್ವರಿಗೆ ತೀವ್ರವಾದ ಗಾಯಗಳಾಗಿವೆ. ಕಮಲನಗರದಿಂದ ಔರಾದ್‌ಗೆ ಬರುತ್ತಿದ್ದ ಕ್ರೂಸರ್ ಚಾಲಕನ ಅತಿವೇಗ ಹಾಗೂ ನಿರ್ಲಕ್ಷ್ಯದ ಪರಿಣಾಮ ಎದುರಿದ್ದ ಬಸ್‌ಗೆ ಡಿಕ್ಕಿ ಹೊಡೆದಿದೆ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

ಕ್ರೂಸರ್‌ನಲ್ಲಿ ಸುಮಾರು 15 ಜನ ಪ್ರಯಾಣಿಕರಿದ್ದು, ಉಳಿದವರಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಸುದ್ದಿ ತಿಳಿಯುತ್ತಿದ್ದಂತೆ ಸ್ಥಳಕ್ಕೆ ಧಾವಿಸಿದ ಪಿಎಸ್‌ಐ ವಾಸೀಮ್ ಪಟೇಲ್ ಗಾಯಾಳುಗಳಿಗೆ ಆಸ್ಪತ್ರೆಗೆ ರವಾನಿಸಿದರು.

ಬಸ್ ಔರಾದ್ ಪಟ್ಟಣದಿಂದ ಉದಗೀರಗೆ ಹೋಗುತ್ತಿತ್ತು ಬಸ್‌ನಲ್ಲಿನ ಓರ್ವ ಪ್ರಯಾಣಿಕನಿಗೆ ಸಣ್ಣ ಪುಟ್ಟ ಗಾಯವಾಗಿದೆ ಎಂದು ತಿಳಿದು ಬಂದಿದೆ. ಈ ಕುರಿತು ಔರಾದ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಪರಿಸರ ಸಮತೋಲನೆಗೆ ಸಾಗರ-ಸಮುದ್ರಗಳು ಅಗತ್ಯ

• ಉದಯವಾಹಿನಿ ಕಲಬುರಗಿ

ಮಾನವನಿಗೆ ಅವಶ್ಯಕವಾಗಿ ಬೇಕಾಗುವ ನೀರನ್ನು ಪೂರೈಸುವ ಸಾಗರಗಳು ಅಮೂಲ್ಯವಾದ ನೈಸರ್ಗಿಕ ಸಂಪತ್ತಾಗಿವೆ. ಭೂಮಿಯ ಮೇಲೆ ಒಟ್ಟು ಶೇ.97ರಷ್ಟು ನೀರನ್ನು ಹಿಡಿದಿಟ್ಟುಕೊಂಡು ಮಳೆಯ ರೂಪದಲ್ಲಿ ಭೂಮಿಯ ಮೇಲೆ ಸುರಿಯುವ ಮೂಲಕ ಸಸ್ಯ ಮತ್ತು ಪ್ರಾಣಿ ಸಂಪತ್ತನ್ನು ಉಳಿಸುತ್ತವೆ. ಪರಿಸರವನ್ನು ಸಮತೋಲ ಸ್ಥಿತಿಯಲ್ಲಿರಲು ಸಾಗರ ಹಾಗೂ ಸಮುದ್ರಗಳು ತುಂಬಾ ಅವಶ್ಯಕವಾಗಿವೆ ಎಂದು ಉಪನ್ಯಾಸಕ ಎಚ್.ಬಿ.ಪಾಟೀಲ ಅಭಿಪ್ರಾಯಪಟ್ಟರು.

ನಗರದ ಶಹಾಬಜಾರ ಮಹಾದೇವ ನಗರದಲ್ಲಿರುವ ಸ್ವಾತಿ ಪ್ರೌಢಶಾಲೆಯಲ್ಲಿ 'ಬಸವೇಶ್ವರ ಸಮಾಜ ಸೇವಾ ಬಳಗದಿಂದ ಭಾನುವಾರ ಜರುಗಿದ 'ವಿಶ್ವ ಸಾಗರಗಳು ಹಾಗೂ ಸಮುದ್ರ ಸಂಬಂಧಿ ದಿನಾಚರಣೆ'ಯಲ್ಲಿ ಅವರು ಮಾತನಾಡುತ್ತಿದ್ದರು.

ಸಸ್ಯ ಸಂಪತ್ತುಗಳಿಂದ ಆಕ್ಸಿಜನ್ ದೊರೆತು ಜೀವಿಗಳು ಉಸಿರಾಡಿಸಲು ಸಾಧ್ಯವಾಗುತ್ತದೆ. ವಾತಾವರಣದಲ್ಲಿ ಕಾರ್ಬನ್ ಡೈಆಕ್ಸೈಡ್ ಪ್ರಮಾಣ ಕಡಿಮೆ ಮಾಡಿ ಪರಿಸರವನ್ನು ಸ್ವಚ್ಛವಾಗಿಡಲು ಸಹಕಾರಿಯಾಗಿವೆ. ವಿಶ್ವದ ಅರ್ಧದಷ್ಟು ಜನರು ಕರಾವಳಿಯ ಪ್ರದೇಶದಲ್ಲಿ ವಾಸಿಸುತ್ತಿದ್ದಾರೆ. ಅವರಿಗೆ ಜೀವನಾಧಾರವೆಂದರೆ ಸಾಗರಗಳಾಗಿವೆ. ಇಲ್ಲಿನ ಪ್ರಮುಖ ಉದ್ಯೋಗವೆಂದರೆ ಮೀನುಗಾರಿಕೆಯಾಗಿದೆ. ಜೊತೆಗೆ ಉಪ್ಪು, ಚಿಪ್ಪು, ಮುತ್ತು, ವಜ್ರ, ವೈಢೂರ್ಯ, ಪೆಟ್ರೋಲಿಯಂಗಳಂತಹ ಅಮೂಲ್ಯವಾದ ಸಂಪತ್ತನ್ನು ಒದಗಿಸಿಕೊಡುವ ದೇಶದ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸುತ್ತವೆ ಎಂದರು.

ಕಾರ್ಯಕ್ರಮ ಉದ್ಘಾಟಿಸಿದ ಶಾಲೆಯ ಮುಖ್ಯ ಶಿಕ್ಷಕಿ ಸಂಗೀತಾ ಸಾಲಿ ಮಾತನಾಡಿ, ಸಾಗರ ಹಾಗೂ ಸಮುದ್ರಗಳನ್ನು ಮಲಿನಗೊಳಿಸದೆ ಸುರಕ್ಷಿತವಾಗಿ ಕಾಪಾಡುವುದು ಅಗತ್ಯವಾಗಿದೆ ಎಂದರು.


ಉದಯವಾಹಿನಿ ಚಿತ್ರ

## ದಿ. 21 ರಂದು 11ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆ

• ಉದಯವಾಹಿನಿ ಬಾಗಲಕೋಟೆ

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಹಾಗೂ ಆಯುಷ ಇಲಾಖೆ ಸಹಯೋಗದಲ್ಲಿ ಜೂನ್ 21 ಅಂತರರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ ಎಂದು ಜಿಲ್ಲಾಧಿಕಾರಿ ಜಾನಕಿ ಕೆ.ಎಂ ತಿಳಿಸಿದರು.

ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಕುರಿತು ಜರುಗಿದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಅಂದು ಬೆಳಿಗ್ಗೆ 6 ರಿಂದ 8.30 ಗಂಟೆವರೆಗೆಕಾರ್ಯಕ್ರಮ ಜರುಗಲಿದೆ. ಸೇವಾದಳದ ಮಹೇಶ ಪತ್ತಾರ ಯೋಗ ತರಬೇತಿ ನೀಡಲಿದ್ದಾರೆ.

ಸದರಿ ಕಾರ್ಯಕ್ರಮದಲ್ಲಿ ಯೋಗ ನಿರತ ಸಂಘ ಸಂಸ್ಥೆಗಳು, ಎನ್‌ಸಿಸಿ ಕೆಡೆಟ್, ಹೋಮ್‌ಗಾಡ್ರ್ಸ, ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ, ಎನ್ ವಾಯ್.ಕೆ, ಸೇವಾದಳದವರು ಪಾಲ್ಗೊಳ್ಳಲಿದ್ದಾರೆ. ಜಿಲ್ಲಾ ಮಟ್ಟದ ಎಲ್ಲಾ ಅಧಿಕಾರಿ, ಸಿಬ್ಬಂದಿಗಳು ಹಾಗೂ ಸಾರ್ವಜನಿಕರು ಪಾಲ್ಗೊಳ್ಳಬೇಕೆಂದು ಜಿಲ್ಲಾದಿಕಾರಿಗಳು ಮನವಿ ಮಾಡಿದರು.


ಉದಯವಾಹಿನಿ ಚಿತ್ರ

ಜಿಲ್ಲಾ ಕ್ರೀಡಾಂಗಣ ವ್ಯಾಪ್ತಿಯಲ್ಲಿ ಬರುವ ಶಾಲೆಯ ಮಕ್ಕಳನ್ನು ಈ ಯೋಗ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವಂತೆ ಮಾಡಲು ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರಿಗೆ ತಿಳಿಸಲಾಯಿತು. ನವನಗರದ ವ್ಯಾಪ್ತಿಯ ವಿವಿಧ ಇಲಾಖೆಯಡಿಯಲ್ಲಿರುವ ವಸತಿ ಶಾಲೆಗಳ ಮಕ್ಕಳೂ ಸಹ ಯೋಗ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವಂತೆ ಮಾಡಬೇಕೆಂದು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಲಾಯಿತು. ಆಶಾ, ಅಂಗನವಾಡಿ ಕಾರ್ಯಕರ್ತೆಯರು ಪಾಲ್ಗೊಳ್ಳುವಂತೆ ಮಾಡಲು ತಿಳಿಸಿದರು. ಯೋಗ ದಿನಾಚರಣೆ ಅಂಗವಾಗಿ ಯೋಗ ಸಂಗಮ, ಯೋಗ ಪಾರ್ಕ್, ಯೋಗ ಧನುಷ್, ಹರಿಸು ಯೋಗ ಹೆಸರಿನಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ತಿಳಿಸಿದರು. ಯುವ ಪೀಳಿಗೆಯಲ್ಲಿ ಯೋಗದ ಕುರಿತು ಉತ್ಸಾಹವನ್ನು ಹೆಚ್ಚಿಸಲು ಯೋಗ ರೀಲ್ಸ್, ಯೋಗ ಪೋಸ್ಟರ್, ಯೋಗ ಕ್ವಿಜ್, ಯೋಗ ಪ್ರಬಂಧ ಸ್ಪರ್ಧೆ, ಯೋಗ ಜಿಂಗಲ್ಸ್ ಹಾಗೂ ಇನ್ನಿತರ ಸ್ಪರ್ಧೆಗಳನ್ನು ಏರ್ಪಡಿಸಲಾಗುತ್ತಿದೆ ಎಂದು

> **ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಪ್ರೋಟೋಕಾಲ್ ಪ್ರಕಾರ ಆಮಂತ್ರಣ ಪತ್ರಿಕೆ ಮುದ್ರಣ ಮಾಡಲು ತಿಳಿಸಲಾಯಿತು. ಜಿಲ್ಲಾ ಕ್ರೀಡಾಂಗಣವನ್ನು ಸ್ವಚ್ಛವಾಗಿಡುವಂತೆ ನಗರಸಭೆ ಆಯುಕ್ತರಿಗೆ ತಿಳಿಸಿದರು. ಯೋಗ ಕಾರ್ಯಕ್ರಮದಲ್ಲಿ ಭಾಗವಹಿಸುವ ಎಲ್ಲರೂ ಯೋಗ ಮಾಡಲು ಸಡಿಲು ಬಿಳಿ ಬಣ್ಣದ ಬಟ್ಟೆ, ಟ್ರ್ಯಾಕಶೂಟ್ ಹಾಗೂ ಹಾಸಿಗೆ ತರುವಂತೆ ಸಭೆಯಲ್ಲಿ ತಿಳಿಸಲಾಯಿತು. ಕಾರ್ಯಕ್ರಮಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಮಾಡಿ ಕಾರ್ಯಕ್ರಮ ಯಶಸ್ವಿಗೊಳಿಸುವಂತೆ ಜಿಲ್ಲಾಧಿಕಾರಿಗಳು ಕರೆ ನೀಡಿದರು.**

## ಪರಿಸರ ಸಂರಕ್ಷಣೆ ಅಗತ್ಯ

• ಉದಯವಾಹಿನಿ ಗದಗ

ವಾಯು ಮಾಲಿನ್ಯ ಮುಕ್ತ ಪರಿಸರ ನಿರ್ಮಾಣವಾದಾಗ ಮಾತ್ರ ಈ ವಿಶ್ವ ಪರಿಸರ ದಿನಾಚರಣೆಗೆ ಒಂದು ಅರ್ಥ ಬರುತ್ತದೆ ಎಂದು ಗದಗ ವಿಭಾಗೀಯ ಅಂಚೆ ಅಧೀಕ್ಷಕ ರಮೇಶ ಮಡಿವಾಳರ ಹೇಳಿದರು.

ಸ್ಥಳೀಯ ಪ್ರಧಾನ ಅಂಚೆ ಕಚೇರಿ ಹಾಗೂ ವಿಭಾಗೀಯ ಕಚೇರಿ ಆಶ್ರಯದಲ್ಲಿ ಪ್ರಧಾನ ಅಂಚೆ ಕಚೇರಿ ಆವರಣದಲ್ಲಿ ಆಯೋಜಿಸಿದ ವಿಶ್ವ ಪರಿಸರ ದಿನಾಚರಣೆ ಸಸಿ ನೆಟ್ಟು ಉದ್ಘಾಟಿಸಿ ಮಾತನಾಡಿದರು.

ಪ್ರತಿಯೊಬ್ಬ ನಾಗರಿಕರು ಮನೆಗೊಂದು ಗಿಡ ನೆಟ್ಟು ಅದನ್ನು ಪೋಷಿಸಿ, ಅದನ್ನು ಬೆಳೆಸಿದಾಗ ಮಾತ್ರ ನಮ್ಮ ಪರಿಸರ ಸ್ವಚ್ಛವಾಗಿ ಮುಂದಿನ ಪೀಳಿಗೆಗೆ ಸ್ವಚ್ಛ ಪರಿಸರವನ್ನು ಕೊಡಲಿಕ್ಕೆ ಸಾಧ್ಯವಾಗಲಿದೆ ಎಂದು ಹೇಳಿದರು. ಪರಿಸರವನ್ನು ಹಸಿರು ಮತ್ತು ಉತ್ತಮಗೊಳಿಸಲು ತಳಮಟ್ಟದಲ್ಲಿ ಕೆಲಸ ಮಾಡುವ ದಿಸೆಯ ಪ್ರತಿಯೊಬ್ಬರು ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಅಷ್ಟೇ, ಅಲ್ಲದೆ, ಪ್ರತಿಯೊಬ್ಬ ನೌಕರರು ನಿಮ್ಮ ಕಚೇರಿ ಹಾಗೂ ಸುತ್ತ ಮುತ್ತ ಪರಿಸರವನ್ನು ಸ್ವಚ್ಛ ಮತ್ತು ಸುಂದರವಾಗಿ ಇರಿಸುವ ಸಲುವಾಗಿ ಪ್ರತಿ ವಾರಕ್ಕೆ ಎರಡು ದಿನ ಶ್ರಮದಾನ ಮಾಡಬೇಕು ಎಂದರು.

## ಅಕ್ರಮ ಸಂಪತ್ತಿನಿಂದ ಸಂತೋಷ ಸಿಗಲ್ಲ: ಸಂತೋಷ್ ಹೆಗ್ಡೆ

• ಉದಯವಾಹಿನಿ ಉಡುಪಿ

ಅಕ್ರಮವಾಗಿ ಸಂಪತ್ತುಗಳಿಸುವುದರಿಂದ ಸಂತೋಷ ಸಿಗಲ್ಲ. ನಿದ್ದೆಯೂ ಬರಲ್ಲ. ಕಾನೂನಿನ ಚೌಕಟ್ಟಿನಲ್ಲಿ ಸಾವಿರಾರು ಕೋಟಿ ಬೇಕಾದರೂ ಸಂಪಾದಿಸಿ ಎಂದು ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ಎನ್. ಸಂತೋಷ್ ಹೆಗ್ಡೆ ಹೇಳಿದರು. ನಗರದ ಕಲ್ಸಂಕದ ಟೈಮ್ಸ್ ಸ್ಟೋರ್ ಬಿಲ್ಡಿಂಗ್‌ನ ಹೊಟೇಲ್ ಓಶಿಯಲ್ ಪರ್ಲ್ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಜಾರ್ಜ್ ಫರ್ನಾಂಡಿಸ್ ಸ್ಮಾರಕ ರಾಷ್ಟ್ರೀಯ ಪ್ರಶಸ್ತಿಯನ್ನು ಸ್ವೀಕರಿಸಿ ಅವರು ಮಾತನಾಡಿದರು.

ಇಂದು ಶ್ರೀಮಂತಿಕೆ ಮತ್ತು ಅಧಿಕಾರಕ್ಕೆ ಮಣೆ ಹಾಕಲಾಗುತ್ತಿದೆ. ಜೈಲಿನಿಂದ ಬಂದವರಿಗೆ ಹೂವಿನ ಹಾರ ಹಾಕಿ ಸ್ವಾಗತಿಸುವ ಪ್ರವೃತ್ತಿಯನ್ನು ಕಾಣುತ್ತೇವೆ ಎಂದು ಹೇಳಿದರು. ಎಲ್ಲಾ ಅಕ್ರಮಗಳಿಗೂ ದುರಾಸೆಯೇ ಮೂಲ ಕಾರಣ. ಇರುವುದರಲ್ಲಿ ತೃಪ್ತಿ ಪಡೆದುಕೊಂಡರೆ ದುರಾಸೆ ಬರುವುದಿಲ್ಲ. ಹಿಂದಿನ ವರು ತಮ್ಮ ಮಕ್ಕಳಿಗೆ ನೀತಿ ಪಾಠ ಹೇಳುತ್ತಿದ್ದರು. ಮಾರ್ಗದರ್ಶನ ನೀಡುತ್ತಿದ್ದರು. ಇಂದು ಗಂಡ, ಹೆಂಡತಿ ಇಬ್ಬರೂ ಕೆಲಸಕ್ಕೆ ಹೋಗುತ್ತಾರೆ ಅವರಿಗೆ ಮಕ್ಕಳ ವಿಚಾರದಲ್ಲಿ ಹೆಚ್ಚು ಗಮನ ನೀಡಲು ಸಾಧ್ಯವಾಗುತ್ತಿಲ್ಲ ಎಂದರು.

ಮಾನವೀಯತೆ ಎಂಬುದು ಹಿರಿಯರು ಕಟ್ಟಿದ ಮೌಲ್ಯ. ಇಂದು ಅದು ಇಲ್ಲವಾಗುತ್ತಿದೆ. ಮಕ್ಕಳಿಗೆ ಮೊದಲು ಮಾನವೀಯತೆಯನ್ನು ಕಲಿಸುವ ಕೆಲಸವಾಗಬೇಕು. ಜೊತೆಗೆ ಸರಿ-ತಪ್ಪು ಹೇಳಿಕೊಡುವ ಪ್ರಯತ್ನವನ್ನು ಪೋಷಕರು ಮಾಡಬೇಕು ಎಂದರು. ವಿಧಾನಪರಿಷತ್ ಮಾಜಿ ಸದಸ್ಯ ಕ್ಯಾ. ಗಣೇಶ್ ಕಾರ್ಣಿಕ್ ಅವರು ಮಾಜಿ ರಕ್ಷಣಾ ಸಚಿವ ಜಾರ್ಜ್ ಫರ್ನಾಂಡಿಸ್ ಅವರ ಕುರಿತು ಸಂಸ್ಮರಣಾ ಭಾಷಣ ಮಾಡಿದರು.



ಉದಯವಾಹಿನಿ ಚಿತ್ರ

> **ಭಾಷೆ ಧರ್ಮದ ಆಧಾರದಲ್ಲಿ ನಮ್ಮ ದೇಶವನ್ನು ವಿಭಜಿಸುವ ಪ್ರಯತ್ನಗಳು ಇಂದು ನಡೆಯುತ್ತಿವೆ. ಅದಕ್ಕೆ ಆಸ್ಪದ ನೀಡಬಾರದು**
> -ಎನ್. ಸಂತೋಷ್ ಹೆಗ್ಡೆ, ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ

**ಎಲ್ಲಾ ಅಕ್ರಮಗಳಿಗೂ ದುರಾಸೆಯೇ ಮೂಲ ಕಾರಣ**

## ಸಮಕಾಲೀನ ಸಮಸ್ಯೆಗಳ ಸಾಹಿತ್ಯ ಹೊರಬರಲಿ



ಉದಯವಾಹಿನಿ ಚಿತ್ರ

• ಉದಯವಾಹಿನಿ ಕುಷ್ಟಗಿ

ಓದುಗನನ್ನು ತಲುಪಲು ದೊಡ್ಡ ಗಾತ್ರದ ಕಥೆ, ಕಾದಂಬರಿಗಳು ಪುಸ್ತಕಗಳ ಇರಬೇಕೆಂದೇನಿಲ್ಲ. ಅನುಗುಣವಾಗಿ ಚಿಕ್ಕ ಗಾತ್ರವಾಗಿದ್ದರೂ ಸರಿ ಸಮಕಾಲೀನ ವಿಷಯಗಳನ್ನು ಪರಿಣಾಮಕಾರಿಯಾಗಿ ಕಟ್ಟಿಕೊಡಲು ಸಾಧ್ಯವಿದೆ. ಈ ನಾಡಿನಲ್ಲಿ ಅನೇಕ ದಿಗ್ಗಜರ ಅದ್ಭುತ ಕಾದಂಬರಿಗಳು ಹೊರಬಂದಿವೆ. ಅಂತಹ ಪುಸ್ತಕಗಳು ಓದುಗರನ್ನು ಸೆಳೆಯುವಲ್ಲಿ ಯಶಸ್ವಿಯಾಗುತ್ತವೆ ಎಂದು ಸಿಂಧನೂರಿನ ಸರ್ಕಾರಿ ಪದವಿ ಕಾಲೇಜಿನ ಪ್ರಾಚಾರ್ಯ ಜಾಜಿ ದೇವೇಂದ್ರಪ್ಪ ಹೇಳಿದರು. ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಅಕ್ಷರ ಸಂಗಾತ ಪುಸ್ತಕ ಪ್ರಕಾಶನದ ಸಹಯೋಗದಲ್ಲಿ ಪಟ್ಟಣದಲ್ಲಿ ಹಮ್ಮಿಕೊಳ್ಳಲಾಗಿದ್ದ ತಾಲ್ಲೂಕಿನ ನವಲಹಳ್ಳಿ ಗ್ರಾಮದ ಸಾಹಿತಿ ಮೌನೇಶ ನವಲಹಳ್ಳಿ ಅವರ 'ನೀಲಿ ಹೊತ್ತಿಗೆ' ಕಾದಂಬರಿ ಕೃತಿಯ ಅವಲೋಕನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಬದಲಾದ ಆಂಡ್ರಾಯಿಡ್ ಯಾಂತ್ರಿಕ ಜಗತ್ತಿನಲ್ಲಿ ದೊಡ್ಡ ಗಾತ್ರದ ಪುಸ್ತಕಗಳನ್ನು ಓದುವಷ್ಟು ತಾಳ್ಮೆ ಓದುಗರಲ್ಲಿಲ್ಲ ಎಂದು ವಿಷಾದ ವ್ಯಕ್ತಪಡಿಸಿದರು.

ವೈವಿಧ್ಯಮಯ ವಿಷಯಗಳಿರುವ ಕೊಪ್ಪಳ ಜಿಲ್ಲೆ ಕಾದಂಬರಿಕಾರರಿಗೆ ಅತ್ಯಂತ ಪ್ರಶಸ್ತವಾಗಿದೆ. ದಶಕಗಳ ಹಿಂದೆಯೇ ಇಲ್ಲಿಯ ಅನೇಕ ಲೇಖಕರ ಕಾದಂಬರಿಗಳು ಹೆಸರುಗಳು ಉಲ್ಲೇಖಿತಗೊಂಡಿವೆ. ತಾಲ್ಲೂಕಿನಲ್ಲಿಯೂ ಹೊರ ಜಗತ್ತಿನ ಅರಿವಿಗೆ ಬಾರದ ಅನೇಕ ಭಿನ್ನಭಿನ್ನವಾದ ವಿಷಯಗಳಿವೆ. ಅಷ್ಟೇ ಸಶಕ್ತ ಬರಹಗಾರರೂ ಇಲ್ಲಿದ್ದಾರೆ' ಎಂದು ವಿವರಿಸಿದರು.

## ಪರಿಸರ ದಿನಾಚರಣೆ


ಉದಯವಾಹಿನಿ ಚಿತ್ರ

• ಉದಯವಾಹಿನಿ ಮುನವಳ್ಳಿ,

ಪಟ್ಟಣದ ಕನ್ನಡ ಗಂಡು ಮಕ್ಕಳ ಶಾಲೆಯಲ್ಲಿ ಪರಿಸರ ದಿನಾಚರಣೆಯನ್ನು ಶಾಲೆಯ ಆವರಣದಲ್ಲಿ ಸಸಿ ನಡುವ ಮೂಲಕ ಆಚರಿಸಿದರು.

ಶಿಕ್ಷಕ ಸುಧೀರ ವಾಘೇರಿ ಮಾತನಾಡಿ ಪರಿಸರವನ್ನು ನಾವು ರಕ್ಷಿಸಿದಾಗ ಮಾತ್ರ ಪರಿಸರ ನಮ್ಮನ್ನು ರಕ್ಷಿಸುತ್ತದೆ ಪರಿಸರದೊಂದಿಗೆ ಸಮತೋಲನ ಸಾಮರಸ್ಯ ಕಾಯ್ದುಕೊಳ್ಳುವುದು ಅತೀ ಮುಖ್ಯವೆಂದರು.

ಜಿ.ಎಸ್.ಚಿಪ್ಪಲಕಟ್ಟಿ, ಎಸ್.ಡಿ.ಎಮ್.ಸಿ ಅಧ್ಯಕ್ಷ ಶಾನೂರ ಜಮಾದಾರ, ಪ್ರಕಾಶ ಏಣಗಿ, ಶ್ರೀಮತಿ ಭಾಗ್ಯಾ ಹುರಳಿ, ಶಿಕ್ಷಕಿ ಪಿ.ಎಸ್.ಕಮತಗಿ, ಶಾಲಾ ಸಿಬ್ಬಂದಿವರ್ಗ ವಿದ್ಯಾರ್ಥಿಗಳು ಹಾಗೂ ಇತರರು ಉಪಸ್ಥಿತರಿದ್ದರು.

## ಕಲುಷಿತ ನೀರಿನಿಂದ ಅನಾರೋಗ್ಯ: ಡಾ.ಗೌರಿಶಂಕರ

• ಉದಯವಾಹಿನಿ ಗಂಗಾವತಿ

ಮಳೆಗಾಲ ಆರಂಭವಾಗಿದ್ದು, ಮನೆ ಸುತ್ತಮುತ್ತ ಹಾಗೂ ಸಾರ್ವಜನಿಕರ ಪ್ರದೇಶದಲ್ಲಿ ಕೊಳಚೆ ನೀರು ಬಹುದಿನಗಳವರೆಗೆ ಸಂಗ್ರಹಗೊಳ್ಳದಂತೆ ಎಚ್ಚರಿಕೆ ವಹಿಸಬೇಕು' ಎಂದು ತಾಲ್ಲೂಕು ಆರೋಗ್ಯ ಅಧಿಕಾರಿ ಡಾ.ಗೌರಿಶಂಕರ ಹೇಳಿದರು.

ನಗರದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಜಿಲ್ಲಾ ರೋಗ ವಾಹಕ ಆಶ್ರಿತ ರೋಗಗಳ ನಿಯಂತ್ರಣ ಕಾರ್ಯಕ್ರಮ ಅಡಿಯಲ್ಲಿ ಆರೋಗ್ಯ ಸ್ವಯಂ ಸೇವಕರಿಗೆ ರೋಗಗಳು ಹರಡದಂತೆ ಎಚ್ಚರ ವಹಿಸಲು ಶನಿವಾರ ಹಮ್ಮಿಕೊಂಡ ಜಾಗೃತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು. 'ಮಳೆಗಾಲದಲ್ಲಿ ಚರಂಡಿ, ರಸ್ತೆ ಗುಂಡಿಗಳು ನೀರಿನಲ್ಲಿ ತುಂಬಿಕೊಳ್ಳುತ್ತವೆ. ಬಹುದಿನಗಳವರೆಗೆ ನೀರು ನಿಂತುಕೊಳ್ಳುವುದರಿಂದ ಕೊಳಚೆಯಾಗಿ ಸೊಳ್ಳೆಗಳು ಉತ್ಪತ್ತಿಯಾಗುತ್ತವೆ. ಸೊಳ್ಳೆಗಳ ಕಡಿತದಿಂದ ಮನುಷ್ಯರಿಗೆ ಚಿಕನ್‌ಗೂನ್ಯ, ಡೆಂಗಿಗಳಂತಹ ಮಾರಕ ರೋಗಗಳು ಕಾಣಿಸಿಕೊಳ್ಳುತ್ತವೆ. ಅವುಗಳನ್ನು ತಡೆಗಟ್ಟುವ ಉದ್ದೇಶದಿಂದ ಆರೋಗ್ಯ ಸ್ವಯಂ ಸೇವಕರು ಜನರಲ್ಲಿ ಜಾಗೃತಿ ಮೂಡಿಸಬೇಕು. ಪ್ರತಿಯೊಬ್ಬರು ನಮ್ಮ ಸುತ್ತಲಿನ ಪ್ರದೇಶವನ್ನು ಸ್ವಚ್ಛವಾಗಿರಿಸಿಕೊಳ್ಳುವಂತೆ ಜನರಲ್ಲಿ ಅರಿವು ಮೂಡಿಸಬೇಕು. ಜತೆಗೆ ಸೊಳ್ಳೆ ಕಡಿತದಿಂದ ಬರುವ ರೋಗಗಳ ಬಗ್ಗೆ ಜನರಿಗೆ ಮಾಹಿತಿ ನೀಡಬೇಕು' ಎಂದು ಹೇಳಿದರು.


ಉದಯವಾಹಿನಿ ಚಿತ್ರ

## ಗೃಹರಕ್ಷಕ ದಳಕ್ಕೂ ಮೂಲ ಸೌಕರ್ಯ ನೀಡಿ

• ಉದಯವಾಹಿನಿ ಹರಿಹರ

ಪಟ್ಟಣದಲ್ಲಿ ಗೃಹರಕ್ಷಕ ದಳದ ಕಚೇರಿ ನಿರ್ಮಾಣಕ್ಕಾಗಿ ನಗರಸಭೆಯಿಂದ ನಿವೇಶನ ಕೊಡಿಸಲು ಪ್ರಮಾಣಿಕ ಪ್ರಯತ್ನ ಮಾಡುವುದಾಗಿ ಶಾಸಕ ಬಿ.ಪಿ.ಹರೀಶ್ ಭರವಸೆ ನೀಡಿದರು. ತಾಲ್ಲೂಕು ಪಂಚಾಯಿತಿ ಆವರಣದಲ್ಲಿ ಭಾನುವಾರ ಗೃಹರಕ್ಷಕ ದಳದ ತಾತ್ಕಾಲಿಕ ಕಚೇರಿ ಕೊಠಡಿ ಉದ್ಘಾಟಿಸಿ ಮಾತನಾಡಿದ ಅವರು, 'ಕೆಲವು ದಿನಗಳ ಹಿಂದೆ ಶಿಥಿಲಗೊಂಡ ಗೃಹರಕ್ಷಕ ದಳದ ಕಚೇರಿಯನ್ನು ಪರಿಶೀಲಿಸಿದ್ದೆ. ಕಾನೂನು ಸುವ್ಯವಸ್ಥೆ ಸೇರಿದಂತೆ ತುರ್ತು ಸಂದರ್ಭದಲ್ಲಿ ಜೀವದ ಹಂಗು ತೊರೆದು ಪೊಲೀಸರಂತೆ ಸೇವೆ ಸಲ್ಲಿಸುವ ಗೃಹರಕ್ಷಕ ದಳದವರಿಗೆ ಈ ತಾತ್ಕಾಲಿಕ ಕಟ್ಟಡ ವ್ಯವಸ್ಥೆ ಮಾಡಲಾಗಿದೆ' ಎಂದು ಹೇಳಿದರು.

ಈ ಕಟ್ಟಡದಲ್ಲಿ ಮಹಿಳೆಯರಿಗೆ ಪ್ರತ್ಯೇಕ ಕೊಠಡಿ ಹಾಗೂ ಶೌಚಾಲಯ ನಿರ್ಮಾಣವೂ ಸೇರಿದಂತೆ ಅಗತ್ಯ ಮೂಲ ಸೌಕರ್ಯಗಳನ್ನು ಒದಗಿಸಲು ತಾ.ಪಂ ಇ.ಒ ಅವರ ಜೊತೆಗೆ ಚರ್ಚಿಸುತ್ತೇನೆ' ಎಂದರು.


ಉದಯವಾಹಿನಿ ಚಿತ್ರ

ಕೇವಲ ಗೌರವಧನವನ್ನು ಪಡೆದು ಸಿಬ್ಬಂದಿ ಅನನ್ಯ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಇವರಿಗೆ ನ್ಯಾಯಬದ್ಧವಾಗಿ ಸಿಗಬೇಕಾದ ಸೌಲಭ್ಯಗಳನ್ನು ಕೊಡಿಸಲು ಶಾಸಕರು ಸರ್ಕಾರದ ಗಮನ ಸೆಳೆಯಬೇಕು' ಎಂದು ಗೃಹ ರಕ್ಷಕ ದಳದ ಅಧಿಕಾರಿ ನಾಗರಾಜ್ ಜಿಗಳಿ ಮನವಿ ಮಾಡಿದರು. 1972ರಿಂದಲೂ ನಗರದಲ್ಲಿ ಗೃಹ ರಕ್ಷಕ ದಳಕ್ಕೆ ನಿವೇಶನ ಮಂಜೂರು ಮಾಡಲು ಮನವಿಗಳನ್ನು ಸಲ್ಲಿಸುತ್ತಾ ಬರಲಾಗಿದೆ, ಆದರೆ ಕಾರಣಾಂತರದಿಂದ ಆ ಬೇಡಿಕೆ ಈಡೇರಿಲ್ಲ. ಕಾನೂನು ಸುವ್ಯವಸ್ಥೆ ಕಾಪಾಡುವ ಶಾಶ್ವತ ಅಂಗವೆನಿಸಿಕೊಂಡಿರುವ ಗೃಹ ರಕ್ಷಕ ದಳಕ್ಕೆ ಶಾಸಕರೂ ಹಾಗೂ ನಗರಸಭೆಯವರು ಉತ್ತಮವಾದ ನಿವೇಶನವನ್ನು ಮಂಜೂರು ಮಾಡಬೇಕು ಎಂದು ಸಾರ್ಜೆಂಟ್ ಎಸ್.ಕೇಶವ ಕೋರಿದರು.

> **ಗೃಹರಕ್ಷಕ ದಳದ ಸಿಬ್ಬಂದಿ ಸದ್ಯಕ್ಕೆ ಪೊಲೀಸ್, ಅಗ್ನಿಶಾಮಕ ದಳ, ರೈಲ್ವೆ ಸೇರಿದಂತೆ ವಿವಿಧ ಇಲಾಖೆಗಳಲ್ಲಿ ನಿರಂತರ ಸೇವೆ ಸಲ್ಲಿಸುತ್ತಾ ಮೆಚ್ಚುಗೆಯನ್ನು ಪಡೆದಿದ್ದಾರೆ. ತುರ್ತು ಸಂದರ್ಭಗಳಲ್ಲಿ ಪ್ರಾಣದ ಹಂಗು ತೊರೆದು ಇತರರ ಪ್ರಾಣ ರಕ್ಷಣೆ ಮಾಡುವ ಕಾರ್ಯದಲ್ಲಿ ಸಿಬ್ಬಂದಿ ಭಾಗವಹಿಸುತ್ತಿದ್ದಾರೆ**
> -ಡಾ.ಸುಚೇತ್ ಕುಮಾರ್, ಜಿಲ್ಲಾ ಸಮಾದೇಷ್ಟ

## ರಾಜ್ಯ ಹೆದ್ದಾರಿಯಲ್ಲಿ ಹೊಂಡ ಸಂಚಾರಕ್ಕೆ ತೊಂದರೆ

• ಉದಯವಾಹಿನಿ ಮೂಲ್ಕಿ

ಇಲ್ಲಿನ ಬಜಪೆ - ಕೈಕಂಬ ರಾಜ್ಯ ಹೆದ್ದಾರಿಯ ಬಜಪೆ ಹಳೇ ಪೊಲೀಸ್ ಠಾಣೆಯ ಸಮೀಪ ರಾಜ್ಯ ಹೆದ್ದಾರಿಯಲ್ಲಿ ಬೃಹತ್ ಗಾತ್ರದ ಹೊಂಡವೊಂದು ಉಂಟಾಗಿ ವಾಹನಗಳ ಸವಾರರಿಗೆ ಅಪಾಯಕಾರಿಯಾಗಿ ಪರಿಣಮಿಸಿದೆ. ಈಚೆಗೆ ಸುರಿದ ಭಾರೀ ಮಳೆಗೆ ಹೊಂಡದಲ್ಲಿ ನೀರು ತುಂಬಿ, ಹೊಂಡ ಗೋಚರಿಸದಂತಾಗಿದೆ. ಹೆದ್ದಾರಿಯ ಎರಡೂ ಕಡೆಗಳಲ್ಲಿ ಚರಂಡಿ ವ್ಯವಸ್ಥೆ ಇಲ್ಲದೇ ಮಳೆ ನೀರು ಹೆದ್ದಾರಿಯಲ್ಲಿಯೇ ಹರಿದ ಪರಿಣಾಮ ಹೆದ್ದಾರಿಯ ಡಾಂಬರು ಕಿತ್ತು ಹೋಗಿ ಬೃಹತ್ ಗಾತ್ರದ ಹೊಂಡಗಳು ಉಂಟಾಗಿದೆ ಎಂದು ಹೇಳುತ್ತಾರೆ ಇಲ್ಲಿನ ವಾಹನ ಸವಾರರು.

ಹೆದ್ದಾರಿಯ ಈ ಜಂಕ್ಷನ್ ಹಳೆಯ ವಿಮಾನನಿಲ್ದಾಣ, ಮುರಜಂಕ್ಷನ್, ಬಜಪೆ, ಅದ್ಯಪಾಡಿ ಮತ್ತಿತರ ಕಡೆಗಳಿಗೆ ಸಂಪರ್ಕವನ್ನು ಕಲ್ಪಿಸುತ್ತದೆ. ದಿನಂಪ್ರತಿ ನೂರಕ್ಕೂ ಹೆಚ್ಚು ವಾಹನಗಳ ಸಂಚಾರ ಇರುವಂತಹ ಹೆದ್ದಾರಿ ಜಂಕ್ಷನ್ ಈಗ ಬೃಹತ್ ಗಾತ್ರದ ಹೊಂಡ ಉಂಟಾಗಿ ವಾಹನಗಳ ಸವಾರರು ತೊಂದರೆ ಅನುಭವಿಸುವಂತಾಗಿದೆ.

ಈ ಬಗ್ಗೆ ಸಂಬಂಧಪಟ್ಟ ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ಇತ್ತ ಕಡೆ ಗಮನಹರಿಸಿ ಹೆದ್ದಾರಿ ದುರಸ್ತಿಗೆ ಕ್ರಮ ಕೈಗೊಳ್ಳಬೇಕು ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.


ಉದಯವಾಹಿನಿ ಚಿತ್ರ

## • ನಮ್ಮಲ್ಲಿ ಓದು ಹಣ ಗಳಿಸು ಎಂಬ ವಿಚಾರಕ್ಕೆ ಸೀಮಿತ ಗೊಂಡು ಜೀವನ ಜರ್ಝರಿತಗೊಂಡಿದೆ

# ಮನುಷ್ಯನನ್ನು ಮಹಾಮಾನವನ್ನಾಗಿ ಮಾಡುವುದೇ ಶಿಕ್ಷಣ: ಸಲೀಂ ಪಾಶಾ

• ಉದಯವಾಹಿನಿ ಬೀದರ

ಎಲ್ಲರು ಒಪ್ಪುವ ಶಿಕ್ಷಣವೇ ಗುಣಾತ್ಮಕ. ವ್ಯವಸ್ಥೆಗೆ ಹೊಂದಿಕೊಂಡು ನೈತಿಕ ಮೌಲ್ಯ ಕಾಪಾಡಿಕೊಂಡು, ಬದುಕಿನ ದಾರಿ ಕಂಡುಕೊಳ್ಳುವುದೇ ನಿಜವಾದ ಶಿಕ್ಷಣ ಎಂದು ಉಪನಿರ್ದೇಶಕರಾದ ಸಲೀಂ ಪಾಶಾ ನುಡಿದರು.

ಪೋಲಾ ಕನ್‌ವೆನ್ಷನ್ ಹಾಲನಲ್ಲಿ ವಚನ ಚಾರಿಟೇಬಲ್ ಸೊಸೈಟಿಯಿಂದ ಆಯೋಜಿಸಲಾದ ಪ್ರತಿಭಾ ಪುರಸ್ಕಾರ ಹಾಗೂ ಪರಿಸರ ದಿನಾಚರಣೆ ಪೂರ್ವಭಾವಿಯಾಗಿ ಸಸಿ ವಿತರಣಾ ಸಮಾರಂಭವನ್ನು ಗಿಡಕ್ಕೆ ನೀರೆರೆದು ಚಾಲನೆ ನೀಡಿ, ಮಾತಾಡಿದ ಉಪನಿರ್ದೇಶಕರಾದ ಸಲೀಂ ಪಾಶಾ ಮನುಷ್ಯರನ್ನು ಮುನುಷ್ಯರನ್ನಾಗಿ ಇಂದು ಮಾಡಬೇಕಾಗಿದೆ. ಇದು ನಿಮ್ಮಿಂದಲೇ ಪ್ರಾರಂಭಿಸಬೇಕು. ಶಿಕ್ಷಣ ಅಭಿವೃದ್ಧಿಗೊಂಡಿದೆ, ಆದರೆ ಸಂಸ್ಕಾರ ಇಲ್ಲದಂತಾಗಿದೆ ಸಂಬಂಧ ದೂರು ದೂರು ಸರಿಯುತ್ತಿದೆ.

ತಂದೆ ತಾಯಿ ನಮಗಾಗಿ ಇಡೀ ಜೀವನ ತ್ಯಾಗ ಮಾಡಿ ಮಕ್ಕಳ ಭವಿಷ್ಯ ರೂಪಿಸುತ್ತಾರೆ, ಆದರೆ ಅವರ ಕೊನೆ ಕಾಲದಲ್ಲಿ ಸಮಯ ಸಿಗದೇ ವೃದ್ಧಾಶ್ರಮಕ್ಕೆ ತಳ್ಳುವ ಪರಿಸ್ಥಿತಿ ಇಂದು ಬಂದೊದಗಿದೆ. ನಮ್ಮಲ್ಲಿ ಓದು ಹಣ ಗಳಿಸು ಎಂಬ ವಿಚಾರಕ್ಕೆ ಸೀಮಿತ ಗೊಂಡು ಜೀವನ ಜರ್ಝರಿತಗೊಂಡಿದೆ. ಇದು ಕಳವಳಕಾರಿ ಸಂಗತಿ. ಮಾನವೀಯ ಮೌಲ್ಯ ಪ್ರತಿಷ್ಠಾಪಿಸುವ ಪ್ರಯತ್ನವಾಗಬೇಕು. ಮೊಬೈಲ್ ಬಂದಾಗಿನಿಂದ ಎಲ್ಲರಿಗೆ ತಿಕ್ಕುವ ರೋಗ ಆವರಿಸಿ ಸಮಯ ಇಲ್ಲದಂತಾಗಿದೆ.

ಸಜ್ಜನಿಕೆ, ಸಂತೃಪ್ತಿ ಕುಟುಂಬ ಕಲ್ಪನೆ ಹಾಳಾಗಿದೆ. ಹಣ ಮುಖ್ಯವಾಗಿ ಮಾಡಿಕೊಳ್ಳದೇ ಗುಣವಂತರಾಗಿ ಬಾಳಲು ಪ್ರತಿಭಾವಂತ ಮಕ್ಕಳಿಗೆ ಉಪದೇಶ ನೀಡಿದರು. ಇದೇ ಸಂದರ್ಭದಲ್ಲಿ ಹಾವಶೆಟ್ಟಿ ಪಾಟೀಲ ಹಾಗೂ ನಿಷ್ಕಲ ಜಗನ್ನಾಥ ಶಿವಯೋಗಿ ಅವರಿಗೆ ವಿಶೇಷವಾಗಿ ಗೌರವಿಸಿದೆ. ಕಾರ್ಯಕ್ರಮದಲ್ಲಿ ದಿವ್ಯ ಸಾನಿಧ್ಯ ವಹಿಸಿ ಆರ್ಶೀವಚನ ನೀಡಿದ ಡಾ. ಶಿವಾನಂದ ಮಹಾಸ್ವಾಮಿ ಹುಲಸೂರ ಇಂದು ಶಿಕ್ಷಣ ಪರಿಸರ ಒಟ್ಟಿಗೆ ಅಭಿವೃದ್ಧಿ ಮಾಡಬೇಕಾಗಿದೆ.

ವ್ಯಕ್ತಿ ಮಹಾಮಾನವರಾದರೆ ಪರಿಸರ ಪ್ರಫಲ್ಲಗೊಳ್ಳುತ್ತದೆ. ಗಿಡ ಕಡಿಯುವುದು ಅಪರಾಧವೆಂಬ ಕಾನೂನು ನಮ್ಮಲ್ಲಿ ಅನುಷ್ಠಾನಗೊಳ್ಳಲೇಬೇಕು. ಮಕ್ಕಳು ಸಹಿತ ತಮ್ಮ ಓದು ಬರಹ ಜೊತೆಗೆ ಕನಿಷ್ಠ ಒಂದು ಸಸಿ ನೆಟ್ಟು ಕಾಪಾಡಲು ಕರೆ ನೀಡಿದರು. ಪೂಜ್ಯ ಗಾಯತ್ರಿ ತಾಯಿ, ಪೂಜ್ಯ ಗಂಗಾಧರ ಸ್ವಾಮಿ ನೇತೃತ್ವ ವಹಿಸಿದರೆ, ವಚನ ಸಮೂಹ ಸಂಸ್ಥೆ ಪ್ರಮುಖರಾದ ಅಲ್ಲಮ ಪ್ರಭು ನಾವದಗೇರೆ ಶಿವಕುಮಾರ ಸಾಲಿ ಉಪಸ್ಥಿತರಿದ್ದರು. ಹತ್ತನೇ ಪಾಸಾದ ಶೇ. 90% ಅಂಕ ಮೇಲ್ಪಟ್ಟ ವಿದ್ಯಾರ್ಥಿಗಳಿಗೆ ತಲಾ ರೂ. 10,000/- ನೀಡಿ ಗೌರವಿಸಿದೆ. ಹಣ ಸ್ವೀಕರಿಸಿದ ಮಕ್ಕಳು. 1) ಭುವನೇಶ್ವರಿ ತಂದೆ ಸುರೇಶ ಹೇಮಶೆಟ್ಟಿ 98.4% ಕಡು ಬಡವ ಮಗಳಿವರು. 2) ಅನುಜಾ ತಂದೆ ನಂದಕುಮಾರ ಜೋಶಿ 94.4% ತಂದೆ ಇಲ್ಲ ತಾಯಿ ಕೂಲಿ ಕೆಲಸ. 3) ನಿಕಿತಾ ತಂದೆ ಮಂಜುನಾಥ 95.84% ತಂದೆ ಇಲ್ಲ ತಾಯಿ ಮನೆ ಕೆಲಸ. 4)ಅಪೂರ್ವ ತಂದೆ ರಾಜಕುಮಾರ 92.32% ತಂದೆ-ತಾಯಿ ಇಲ್ಲ. 5) ಕವಿತಾ ತಂದೆ ವೀರಭದ್ರಪ್ಪ 98.08% ತಂದೆ ಇಲ್ಲ ತಾಯಿ ಕೃಷಿ ಕೂಲಿ. 6) ವಿವೇಕಾನಂದ ತಂದೆ ಉದಯಕುಮಾರ 98.16% ತಂದೆ ಇಲ್ಲ ತಾಯಿ ಕೂಲಿ ಕೆಲಸ.

ಪಿಯುಸಿ ಪಾಸಾದ ಶೇ. 90% ಅಂಕ ಮೇಲ್ಪಟ್ಟ ವಿದ್ಯಾರ್ಥಿಗಳಿಗೆ ತಲಾ ರೂ. 10,000% ನೀಡಿ ಗೌರವಿಸಿದೆ. ಹಣ ಸ್ವೀಕರಿಸಿದ ಮಕ್ಕಳು. 1) ಶಿವಕರಣ ತಂದೆ ಬಾಲರಾಜ 94.16% ಪಾಲಕರು ಕೂಲಿ ಕೆಲಸ. 2) ದಿಗಂಬರ ತಂದೆ ರಾಜಪ್ಪ 93% ತಂದೆ/ತಾಯಿ ಕೂಲಿ ಕೆಲಸ. 3) ಈಶ್ವರ ತಂದೆ ಬಸವರಾಜ 91% ತಂದೆ/ತಾಯಿ ಕೂಲಿ ಕೆಲಸ. 4) ಅಕ್ಷತಾ ತಂದೆ ಶಿವಾನಂದ 91% ಪಾಲಕರು ಕೂಲಿ ಕೆಲಸ. ಇದು ಅಲ್ಲದೇ ಪಿಯುಸಿಯಲ್ಲಿ ಶೇ. 90% ಅಂಕ ಮೇಲ್ಪಟ್ಟ 5 ಮಕ್ಕಳಿಗೆ ಹಾಗೂ ಹತ್ತನೇಯಲ್ಲಿ ಶೇ. 90% ಅಂಕ ಪಡೆದ 30 ಮಕ್ಕಳಿಗೆ ಒಂದು ಸಾವಿರ ಹಣ ನೆನಪಿನ ಕಾಣಿಕೆ, ಶಾಲು, ಹೂವಿನ ಹಾರ ಹಾಕಿ ಗೌರವಿಸಿದೆ.


ಉದಯವಾಹಿನಿ ಚಿತ್ರ

> **ನಮ್ಮ ಸಂಸ್ಥೆಯಿಂದ ಪ್ರತಿ ವರ್ಷ ಹತ್ತು ಮಕ್ಕಳಿಗೆ ತಲಾ ರೂ. 10,000/- ಶೈಕ್ಷಣಿಕ ಪ್ರೋತ್ಸಾಹಧನ ನೀಡಿ ಗೌರವಿಸಲಾಗುತ್ತಿದೆ. ಉಳಿದ ಶೇ. 90% ಅಂಕ ಪಡೆದು ಉತ್ತೀರ್ಣರಾದವರಿಗೂ ಗೌರವ ಸನ್ಮಾನ ಹಾಗೂ ಅವರೇಲ್ಲರಿಗೆ ಈ ಕಾರ್ಯಕ್ರಮಕ್ಕೆ ಹೋಗಿ ಬರಲು ರೂ. 1000/- ಹಣ ಒಂದು ಇಂಗ್ಲೀಷ ಕನ್ನಡ ನಿಘಂಟು ಕೊಟ್ಟು ಸನ್ಮಾನಿಸಲಾಗುತ್ತಿದೆ. ಈ ಸಾಲಿನಲ್ಲಿ ನಾವು ನೂರಾರು ಅರ್ಜಿಗಳು ಸ್ವೀಕರಿಸಿದ್ದೇವೆ. ಅವರ ಕಡು ಬಡತನ ಹಾಗೂ ಪಾಲಕರಿಲ್ಲದ ಮಕ್ಕಳಿಗೆ ಗುರುತಿಸಿ ಹತ್ತು ಮಕ್ಕಳನ್ನು ಗೌರವಿಸಿದೆ.**
> -ಡಾ. ಸುರೇಶ ಪಾಟೀಲ, ವಚನ ಚಾರಿಟೇಬಲ್ ಸೊಸೈಟಿ ಅಧ್ಯಕ್ಷ

> **ಜೀವನದಿಂದ ವಿಮುಖರಾಗದೇ ಪರಿಸರ ಕಾಪಾಡಿ, ಅದರ ಪ್ರಜ್ಞೆ ನಮ್ಮಲ್ಲಿ ಮೂಡಲೇ ಬೇಕು. ಇಂದು ಎಲ್ಲಾ ಕಡೆ ಗಾರ್ಡನ ಸಿಟಿ ಹೋಗಿ ಗಾರ್ಬೆಜ ಸಿಟಿ ಆಗುತ್ತಿರುವುದು ಆತಂಕಕಾರಿ ಬೆಳವಣಿಗೆ, ಪ್ರತಿಯೊಬ್ಬರು ಕನಿಷ್ಠ ಒಂದಾದರು ಗಿಡ ನೆಟ್ಟಿ ಬೆಳೆಸಿದರೆ ಪರಿಸರ ಉಳಿಯುತ್ತದೆ. ನಾವೇಲ್ಲರು ಇಂದು ಸಂಕಲ್ಪ ತೊಡಬೇಕಾಗಿದೆ**
> -ಉಪನಿರ್ದೇಶಕರು

**ಪ್ರತಿಭಾ ಪುರಸ್ಕಾರ ಹಾಗೂ ಪರಿಸರ ದಿನಾಚರಣೆ**

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಬೆಳಿಗ್ಗೆ | 07:30 ರಿಂದ 09:00 |
| ಗುಳಿಕ ಕಾಲ | ಮಧ್ಯಾಹ್ನ | 01:30 ರಿಂದ 03:00 |
| ಯಮಗಂಡ ಕಾಲ | ಬೆಳಿಗ್ಗೆ | 10:30 ರಿಂದ 12:00 |

**ಮೇಷ** – ನಿಮ್ಮ ನಾಲಗೆ ನಿಮ್ಮ ಅಜ್ಜ ಅಜ್ಜಿಯಂದಿರ ಭಾವನೆಗಳಿಗೆ ಘಾಸಿ ಮಾಡುವುದರಿಂದ ನಿಮ್ಮ ಭಾಷೆಯನ್ನು ನಿಯಂತ್ರಿಸಿ. ಹರಟೆ ನಿಮ್ಮ ಸಮಯ ವ್ಯರ್ಥ ಮಾಡುವುದಕ್ಕಿಂತ ಸುಮ್ಮನಿರುವುದು ಉತ್ತಮ.

**ವೃಷಭ** – ಲವು ಅನಿವಾರ್ಯ ಸಂದರ್ಭಗಳು ನಿಮಗೆ ಅಹಿತಕರವೆನಿಸಬಹುದು. ಆದರೆ ನೀವು ನಿಮ್ಮ ಸಮತೋಲನ ಕಾಯ್ದುಕೊಳ್ಳಬೇಕು ಮತ್ತು ಪರಿಸ್ಥಿತಿಯನ್ನು ನಿಭಾಯಿಸಲು ತಕ್ಷಣವೇ ಪ್ರತಿಕ್ರಿಯಿಸಬಾರದು.

**ಮಿಥುನ** – ನೀವು ಬಹುಕಾಲದಿಂದ ಎದುರು ನೋಡುತ್ತಿದ್ದ ಜೀವನದ ಒತ್ತಡಗಳಿಂದ ಇಂದು ಶಮನ ಪಡೆಯುತ್ತೀರಿ. ಅವುಗಳನ್ನು ಶಾಶ್ವತವಾಗಿ ದೂರವಿಸಿರಿಸಲು ನಿಮ್ಮ ಜೀವನಶೈಲಿಯನ್ನು ಬದಲಿಸಲು ಇದು ಸರಿಯಾದ ಸಮಯ.

**ಕರ್ಕಾಟಕ** – ನೀವು ಜೀವನವನ್ನು ಸಂತೋಷದಿಂದ ಅನುಭವಿಸಲು ಸಿದ್ಧವಾಗುತ್ತಿದ್ದ ಹಾಗೆ ನಿಮಗೆ ಸಂತೋಷ ಹಾಗೂ ಆನಂದ. ತಮ್ಮ ಹಣವನ್ನು ಬೆಟ್ಟಿಂಗ್‌ನಲ್ಲಿ ಖರ್ಚು ಮಾಡಿದವರು ಇಂದು ನಷ್ಟ ಅನುಭವಿಸುವ ಸಾಧ್ಯತೆಯಿದೆ.

**ಸಿಂಹ** – ಮನರಂಜನೆ ಮತ್ತು ಮೋಜಿನ ಒಂದು ದಿನ. ನೀವು ಉಳಿಸಿರುವ ಹಣ ಇಂದು ನಿಮ್ಮ ಕೆಲಸಕ್ಕೆ ಬರಬಹುದು. ಇದರೊಂದಿಗೆ ಇದರ ಹೋಗುವ ದುಃಖವು ನಿಮಗೆ ಆಗುತ್ತದೆ.

**ಕನ್ಯಾ** – ಖಂಡಿತವಾಗಿಯೂ ಆರೋಗ್ಯದ ಆರೈಕೆಯ ಅಗತ್ಯವಿದೆ. ಇಂದು ನೀವು ಯಾವುದೇ ಅಜ್ಞಾತ ಮೂಲಗಳಿಂದ ಹಣವನ್ನು ಪಡೆಯಬಹುದು, ಇದರಿಂದ ನಿಮ್ಮ ಅನೇಕ ಆರ್ಥಿಕ ಸಮಸ್ಯೆಗಳು ದೂರವಾಗುತ್ತವೆ.

**ತುಲಾ** – ನಿಮ್ಮ ಪ್ರಚಂಡ ಪ್ರಯತ್ನ ಹಾಗೂ ಕುಟುಂಬದ ಸದಸ್ಯರ ಸಕಾಲಿಕ ಬೆಂಬಲ ಬಯಸಿದ ಫಲಿತಾಂಶಗಳು ತರುತ್ತದೆ. ಆದರೆ ಪ್ರಸ್ತುತ ಚೇತನವನ್ನು ಕಾಯ್ದುಕೊಳ್ಳಲು ಶ್ರಮಿಸುತ್ತಿರಿ.

**ವೃಶ್ಚಿಕ** – ನಿಮ್ಮ ಹೆಂಡತಿಯ ಜೊತೆ ಕುಟುಂಬದ ಸಮಸ್ಯೆಗಳನ್ನು ಹಂಚಿಕೊಳ್ಳಿ. ನಮ್ಮನ್ನು ನೀವೇ ಒಂದು ಪ್ರೀತಿಯ ಪೋಷಿಸುವ ಜೋಡಿಯೆನ್ನುವುದನ್ನು ಪುನಃ ಕಂಡುಹಿಡಿಯಲು ಸ್ವಲ್ಪ ಸಮಯ ಖರ್ಚು ಮಾಡಿ.

**ಧನಸ್ಸು** – ಕೆಲಸ ಮತ್ತು ಮನೆಯಲ್ಲಿನ ಕೆಲವು ಒತ್ತಡ ನಿಮ್ಮ ಸಹನೆಯನ್ನು ಪರೀಕ್ಷಿಸುತ್ತದೆ. ವ್ಯಾಪರದಲ್ಲಿ ಪ್ರಯೋಜನ ಇಂದು ಅನೇಕ ವ್ಯಾಪಾರಿಗಳ ಮುಖದ ಮೇಲೆ ಸಂತೋಷವನ್ನು ತರಬಹುದು.

**ಮಕರ** – ಹಿರಿಯರು ಉತ್ತಮ ಲಾಭ ಪಡೆಯಲು ತಮ್ಮ ಹೆಚ್ಚುವರಿ ಶಕ್ತಿಯನ್ನು ಸಕಾರಾತ್ಮಕ ಬಳಕೆಗೆ ವಿನಿಯೋಗಿಸಬೇಕು. ಯಾವುದೇ ವ್ಯಕ್ತಿಯ ಸಹಾಯವಿಲ್ಲದೆ ನೀವು ಹಣವನ್ನು ಗಳಿಸಲು ಸಾಧ್ಯವಾಗುತ್ತದೆ.

**ಕುಂಭ** – ಸ್ನೇಹಿತರ ಮೂಲಕ ದೊರಕುವ ಜ್ಯೋತಿಶ್ಯಾಸ್ತ್ರದ ಮಾರ್ಗದರ್ಶನ ನಿಮ್ಮ ಆರೋಗ್ಯವನ್ನು ಸುಧಾರಿಸಲು ನಿಮ್ಮನ್ನು ಉತ್ತೇಜಿಸುತ್ತದೆ. ಉದ್ಯೋಗಕ್ಕೆ ಸಂಬಂಧಿಸಿರುವ ಜನರಿಗೆ ಇಂದು ಹಣದ ಬಹಳಷ್ಟು ಅಗತ್ಯವಿರುತ್ತದೆ.

**ಮೀನ** – ಅಭದ್ರತೆ / ದಿಗ್ಭ್ರಮೆಯ ಭಾವನೆ ತಲೆತಿರುಗುವಿಕೆಯನ್ನು ಉಂಟು ಮಾಡಬಹುದು. ನೀವು ಜನರು ನಿಮ್ಮಿಂದ ಏನು ಬಯಸುತ್ತಾರೆಂದು ನಿಖರವಾಗಿ ತಿಳಿದಿರುವಂತೆ ತೋರುತ್ತದೆ.

### 19ನೇ ಗೇಟ್ ನಿರ್ಮಾಣಕ್ಕೆ ಹಾರ್ಡವೇರ್ ಟೂಲ್ಸ್ ಆ್ಯಂಡ್ ಮಷಿನರಿ ಪ್ರಾಜೆಕ್ಟ್ ಕಂಪನಿಗೆ 1.98 ಕೋಟಿ ರೂ.ಗೆ ಟೆಂಡರ್

# 10 ತಿಂಗಳಾದರೂ ಬದಲಾಗದ ಟಿಬಿ ಡ್ಯಾಂ ಕ್ರಸ್ಟ್‌ಗೇಟ್

• ಉದಯವಾಹಿನಿ ವಿಜಯನಗರ

ರೈತರ ಜೀವನಾಡಿ ತುಂಗಭದ್ರಾ ಜಲಾಶಯದ 19ನೇ ಕ್ರಸ್ಟ್‌ಗೇಟ್ ಕಳಚಿಬಿದ್ದು ಬರೋಬ್ಬರಿ 10 ತಿಂಗಳು ಕಳೆಯುತ್ತಾ ಬಂದರೂ, ಇನ್ನೂ ನೂತನ ಗೇಟ್ ಅಳವಡಿಕೆ ಪ್ರಕ್ರಿಯೆ ವಿಳಂಬವಾಗಿದೆ. ಗೇಟ್‌ಗಳು ಅಶಕ್ತಗೊಂಡಿರುವ ಬಗ್ಗೆ ತಜ್ಞರು ವರದಿ ನೀಡಿದ ಹೊರತಾಗಿಯೂ ಈವರೆಗೆ ಸ್ಟಾಪ್ ಲಾಗ್ ಗೇಟ್ ತೆರವುಗೊಳಿಸಿ, ನೂತನ ಗೇಟ್

- ತುಂಗಭದ್ರಾ ಜಲಾಶಯದ 19ನೇ ಕ್ರಸ್ಟ್‌ಗೇಟ್ ಕಳಚಿ 10 ತಿಂಗಳು ಕಳೆದರೂ, ನೂತನ ಗೇಟ್ ಅಳವಡಿಕೆ ಪ್ರಕ್ರಿಯೆ ವಿಳಂಬ
- 19ನೇ ಗೇಟ್ ನಿರ್ಮಾಣಕ್ಕೆ ಗುಜರಾತ್ ಮೂಲದ ಹಾರ್ಡವೇರ್ ಟೂಲ್ಸ್ ಆ್ಯಂಡ್ ಮಷಿನರಿ ಪ್ರಾಜೆಕ್ಟ್ ಕಂಪನಿಗೆ 1.98 ಕೋಟಿ ರೂ.ಗೆ ಟೆಂಡರ್
- ಗದಗ ನಗರದಲ್ಲಿ ನಡೆಯುತ್ತಿದೆ ಗೇಟ್ ನಿರ್ಮಾಣ ಕಾಮಗಾರಿ

ಅಳವಡಿಕೆ ಮಾಡುವಲ್ಲಿ ಟಿಬಿ ಮಂಡಳಿ ವಿಳಂಬ ನೀತಿ ಅನುಸರಿಸುತ್ತಿದೆ. ವಿಜಯನಗರ, ಬಳ್ಳಾರಿ, ಕೊಪ್ಪಳ, ರಾಯಚೂರು ಜಿಲ್ಲೆ ಸೇರಿ ನೆರೆಯ


ಉದಯವಾಹಿನಿ ಚಿತ್ರ

ಆಂಧ್ರಪ್ರದೇಶ ಮತ್ತು ತೆಲಂಗಾಣ ರಾಜ್ಯಗಳ ಲಕ್ಷಾಂತರ ಹೆಕ್ಟೇರ್ ಕೃಷಿ ಭೂಮಿಗೆ ನೀರುಣಿಸುತ್ತಿರುವ ತುಂಗಭದ್ರೆ, ಕಳೆದ ವರ್ಷ ಆಗಸ್ಟ್ 10ರಂದು ಗರಿಷ್ಠ ಪ್ರಮಾಣದಲ್ಲಿ ಭರ್ತಿಯಾಗಿದ್ದ ದಿನವೇ 19ನೇ ಕ್ರಸ್ಟ್‌ಗೇಟ್ ಕೊಚ್ಚಿಕೊಂಡು ಹೋಗಿತ್ತು. ಅದಾದ ಬಳಿಕ 40 ಟಿಎಂಸಿ ನೀರು ವ್ಯರ್ಥವಾದರೂ, ಒಂದೇ ವಾರದಲ್ಲಿ ಗೇಟ್ ತಜ್ಞ ಕನ್ನಯ್ಯನಾಯ್ಡು ಅವರು ಸ್ಟಾಪ್ ಲಾಗ್ ಗೇಟ್ ಅಳವಡಿಸಿ, ನೀರು ಉಳಿಸುವಲ್ಲಿ ಯಶಸ್ಸು ಸಾಧಿಸಿ, ಅಚ್ಚುಕಟ್ಟು ಪ್ರದೇಶದ ರೈತರು ನಿಟ್ಟುಸಿರು ಬಿಡುವಂತೆ ಮಾಡಿದ್ದರು. ಆ ಬಳಿಕವೂ ಎರಡ್ಮೂರು ಬಾರಿ ಜಲಾಶಯ ಭರ್ತಿಯಾದ ಹಿನ್ನೆಲೆ ಎರಡು ಬೆಳೆಗಳಿಗೆ ಸೇರಿ ಕುಡಿಯಲೂ ನೀರಿನ ಸಮಸ್ಯೆ ಆಗಲಿಲ್ಲ. ಆದರೆ, ಈ ವರ್ಷವೂ ಪರಿಸ್ಥಿತಿ ಇಷ್ಟೇ ಸರಳವಾಗಿರಲಿದೆ ಎನ್ನುವುದು ಅನುಮಾನವಾಗಿದೆ.

**ಗೇಟ್ ಅನ್ನು ಆದಷ್ಟು ಬೇಗ ಅಳವಡಿಸಬೇಕು**

ತುಂಗಭದ್ರಾ ಮಂಡಳಿ ಕಾರ್ಯದರ್ಶಿ ಓಆರ್‌ಕೆ ರೆಡ್ಡಿ, ಸೂಪರಿಂಟೆಂಡೆಂಟ್ ಎಂಜಿನಿಯರ್ ನಾರಾಯಣ ನಾಯ್ಕ, ಅಧಿಕಾರಿಗಳಾದ ನಾಗರಾಜ, ಚಂದ್ರಶೇಖರ, ಜ್ಞಾನೇಶ್ವರ, ರಾಘವೇಂದ್ರ ಅವರು ಗದಗ ನಗರಕ್ಕೆ ಇತ್ತೀಚೆಗೆ ಭೇಟಿ ನೀಡಿ ಗೇಟ್‌ನ ನಿರ್ಮಾಣ ಕಾಮಗಾರಿ ಪರಿಶೀಲಿಸಿದ್ದಾರೆ. ಈ ವೇಳೆ ಗೇಟ್ ಅನ್ನು ಕಾಮಗಾರಿ ವಿನ್ಯಾಸದ ಮಾದರಿಯಲ್ಲೇ ನಿರ್ಮಾಣ ಮಾಡಬೇಕು. ಜತೆಗೆ ಟಿಬಿ ಡ್ಯಾಂನ ಗೇಟ್‌ಗಳ ಡಿಸೈನ್ ಮಾದರಿಯಲ್ಲಿ ತಯಾರಿಸಬೇಕು. ಈ ಗೇಟ್ ಅನ್ನು ಆದಷ್ಟು ಬೇಗ ಅಳವಡಿಸಬೇಕು ಎಂದು ತುಂಗಭದ್ರಾ ಮಂಡಳಿ ಅಧಿಕಾರಿಗಳು ಗುತ್ತಿಗೆ ಕಂಪನಿ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ತುಂಗಭದ್ರಾ ಜಲಾಶಯದ 19ನೇ ಗೇಟ್ ಹಿಂದಿನ ವರ್ಷ ಮುರಿದು ಬಿದ್ದಾಗ ಮುಂದಿನ ವರ್ಷಕ್ಕೆ ಜಲಾಶಯದ ಎಲ್ಲಾ 33 ಗೇಟ್‌ಗಳನ್ನು ನೂತನವಾಗಿ ತಯಾರಿಸಿ ಅಳವಡಿಸುತ್ತೇವೆಂದು ಭರವಸೆ ನೀಡಿದ್ದರು. ಆದರೆ, ಈವರೆಗೂ ಯಾವುದೇ ಪ್ರಗತಿಯಾಗಿಲ್ಲ. ಗೇಟ್ ಶೀಘ್ರ ಅಳವಡಿಕೆಗೆ ಕ್ರಮ ಕೈಗೊಂಡು, ಡ್ಯಾಂನಲ್ಲಿ 25 ಟಿಎಂಸಿ ನೀರಿನ ಸಂಗ್ರಹ ಆದ ಕೂಡಲೇ ಕಾಲುವೆಗಳಿಗೆ ನೀರು ಹರಿಸಬೇಕು ಎಂದಿದ್ದಾರೆ ಡಾ.ಪುರುಷೋತ್ತಮ ಗೌಡ ಅಧ್ಯಕ್ಷ, ತುಂಗಭದ್ರಾ ರೈತ ಸಂಘ.

#### ಶೀಘ್ರವೇ ಗೇಟ್ ಅಳವಡಿಕೆ

ಈ ಬಾರಿ ಜಲಾಶಯ ಪೂರ್ಣ ಪ್ರಮಾಣದಲ್ಲಿ ಭರ್ತಿ ಆಗುವುದೇ ಅನುಮಾನ ಎಂಬ ಚರ್ಚೆಗಳು ಮಂಡಳಿ ವಲಯದಲ್ಲಿ ನಡೆದಿವೆ. ಗೇಟ್‌ಗಳು ಅಶಕ್ತಗೊಂಡಿರುವ ಬಗ್ಗೆ ತಜ್ಞರು ವರದಿ ನೀಡಿದ ಹೊರತಾಗಿಯೂ ಈವರೆಗೆ ಗೇಟ್ ಅಳವಡಿಕೆ ಕಾಮಗಾರಿ ಆರಂಭವಾಗಿಲ್ಲ. ಇನ್ನೇನು ಜಲಾಶಯಕ್ಕೆ ಒಳಹರಿವು ಬರುತ್ತಿದೆ. ಗೇಟ್ ಅಳವಡಿಕೆಗೆ ಜೂನ್‌ನಲ್ಲಷ್ಟೇ ಕಾಲಾವಕಾಶವಿದೆ. ಈ ಕ್ರಸ್ಟ್‌ಗೇಟ್ ನಿರ್ಮಾಣಕ್ಕೆ ಗುಜರಾತ್ ಮೂಲದ ಹಾರ್ಡವೇರ್ ಟೂಲ್ಸ್ ಆ್ಯಂಡ್ ಮಷಿನರಿ ಪ್ರಾಜೆಕ್ಟ್ ಕಂಪನಿಗೆ 1.98 ಕೋಟಿ ರೂ.ಗೆ ಟೆಂಡರ್ ಆಗಿದೆ. ಶೀಘ್ರವೇ ಈ ಗೇಟ್ ಅಳವಡಿಕೆ ಕಾರ್ಯ ನಡೆಯಲಿದೆ ಎಂದೂ ಮೂಲಗಳು ತಿಳಿಸಿವೆ.

#### ಗದಗ ಬಳಿ ಗೇಟ್ ನಿರ್ಮಾಣ

ತುಂಗಭದ್ರಾ ಜಲಾಶಯದ 19ನೇ ಗೇಟ್‌ಗೆ ಅಳವಡಿಸಿರುವ ಸ್ಟಾಪ್ ಲಾಗ್ ತೆರವುಗೊಳಿಸಿ ಕ್ರಸ್ಟ್‌ಗೇಟ್ ನಿರ್ಮಾಣ ಮಾಡಲು ಸಿದ್ಧತೆ ನಡೆದಿದೆ. ಈಗಾಗಲೇ ಗದಗ ಬಳಿ ಟಿಬಿ ಡ್ಯಾಂನ 19ನೇ ಗೇಟ್‌ಗೆ ಕ್ರಸ್ಟ್‌ಗೇಟ್ ನಿರ್ಮಾಣ ಮಾಡಲು ಆರಂಭಿಕ ಪ್ರಕ್ರಿಯೆ ನಡೆದಿವೆ. ಹಾರ್ಡ್‌ವೇರ್ ಟೂಲ್ಸ್ ಆ್ಯಂಡ್ ಮಷಿನರಿ ಪ್ರಾಜೆಕ್ಟ್ ಕಂಪನಿ, ವೈಜಾಗ್ ಸ್ಟೀಲ್‌ನಿಂದ ಮೆಟೀರಿಯಲ್ ತರಿಸಿಕೊಂಡು, ಗೇಟ್ ನಿರ್ಮಾಣ ಕಾರ್ಯದಲ್ಲಿ ತೊಡಗಿದೆ. ಈ ಕಂಪನಿಗೆ ಉಳಿದ 32 ಗೇಟ್ ತಯಾರಿಸುವ ಟೆಂಡರ್ ಕೂಡ ಆಗಿದೆ. 19ನೇ ಗೇಟ್‌ನ ಕಾಮಗಾರಿ ಮಾತ್ರ ಗದಗದಲ್ಲಿ ನಡೆಯುತ್ತಿದೆ.

## 32 ಲಕ್ಷ ರೂ. ವೆಚ್ಚದ ಸುಸಜ್ಜಿತ ಕೊಠಡಿ ಉದ್ಘಾಟನೆ

• ಉದಯವಾಹಿನಿ ಬೀದರ್

ಪರಿಸರ ಸಂರಕ್ಷಣೆ ಮತ್ತು ನೈಸರ್ಗಿಕ ಸಮತೋಲನ ಕಾಯ್ದುಕೊಳ್ಳುವ ನಿಟ್ಟಿನಲ್ಲಿ ಪ್ರತಿಯೊಬ್ಬರೂ ಸಾಮೂಹಿಕ ಜವಾಬ್ದಾರಿ ಪ್ರದರ್ಶಿಸಬೇಕಿದೆ ಶಾಲೆಯಲ್ಲಿ ಸ್ವಚ್ಛತೆಗೆ ಆದ್ಯತೆ ನೀಡಬೇಕು ಎಂದು ಬೀದರ್ ದಕ್ಷಿಣ ಕ್ಷೇತ್ರದ ಶಾಸಕರಾದ ಡಾ. ಶೈಲೇಂದ್ರ ಬೆಲ್ದಾಳೆ ಅವರು ಹೇಳಿದರು.

ವಿಠ್ಠಲಪುರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಿರ್ಮಿಸಿರುವ 32 ಲಕ್ಷ ರೂ. ವೆಚ್ಚದ ಸುಸಜ್ಜಿತ ಕೊಠಡಿ ಉದ್ಘಾಟನೆ ಹಾಗೂ ಪರಿಸರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಹಿಂದಿನ ದಿನಗಳಲ್ಲಿದ್ದ ಪರಿಸರ ಕಾಳಜಿ ಇಂದಿನ ಯುವಕರಲ್ಲಿ ಉಳಿದಿಲ್ಲ. ವರ್ಷದಿಂದ ವರ್ಷಕ್ಕೆ ಮಳೆ ಕಡಿಮೆಯಾಗುತ್ತಿದ್ದು ಯುವಕರು ಪರಿಸರದ ಬಗ್ಗೆ ಹೆಚ್ಚು ಕಾಳಜಿ ವಹಿಸಬೇಕಿದೆ ಎಂದರು. ಇಂದಿನ ದಿನಗಳಲ್ಲಿ ಗಿಡಗಳನ್ನು ನೆಟ್ಟರೆ ಮುಗಿಯುವುದಿಲ್ಲ, ಪ್ರತಿ ದಿನ ಅವುಗಳನ್ನು ಮಕ್ಕಳಂತೆ ನೋಡಿಕೊಳ್ಳಬೇಕು. ಪ್ರತಿಯೊಬ್ಬ ವಿದ್ಯಾರ್ಥಿಯೂ ಸಹ ಗಿಡಗಳ ಬಗ್ಗೆ ಜಾಗೃತಿ ವಹಿಸಿ ಪೋಷಣೆ ಮಾಡಿದರೆ ಮಾತ್ರ ಪರಿಸರ ದಿನಾಚರಣೆ ಸಾರ್ಥಕ ಎಂದು ಸಲಹೆ ನೀಡಿದರು. ನಮ್ಮ ಬೀದರ್ ದಕ್ಷಿಣ ಕ್ಷೇತ್ರದಲ್ಲಿ ಶಿಕ್ಷಣಕ್ಕೆ ಮತ್ತು ಆರೋಗ್ಯಕ್ಕೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ. ಈ ನಿಟ್ಟಿನಲ್ಲಿ ಕ್ಷೇತ್ರದ ಎಲ್ಲಾ


ಉದಯವಾಹಿನಿ ಚಿತ್ರ

ಶಾಲೆಗಳಿಗೆ ಅಗತ್ಯ ಮೂಲ ಸೌಕರ್ಯ ಒದಗಿಸಲಾಗುತ್ತಿದೆ ವಿಠಲಪೂರ್ ಗ್ರಾಮಸ್ಥರ ಬೇಡಿಕೆಯಂತೆ ಇದೀಗ ರಸ್ತೆ, ಚರಂಡಿ, ಬಸ್ ನಿಲ್ದಾಣ ಹಾಗೂ ಶಾಲೆಯಲ್ಲಿ ಹೆಚ್ಚುವರಿ ಕೊಠಡಿಗಳನ್ನು ನಿರ್ಮಿಸಲಾಗಿದೆ ಮುಂದೆಯೂ ಇದೇ ರೀತಿ ಬೇಡಿಕೆಯಂತೆ ಗ್ರಾಮಕ್ಕೆ ಅನುದಾನ ಕಲ್ಪಿಸಲಾಗುವುದು. ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಹಲವಾರು ಸಮಸ್ಯೆಗಳ ಮಧ್ಯೆ ಜೀವನ ನಡೆಸುತ್ತಿದ್ದೇವೆ. ಶಿಕ್ಷಣಕ್ಕೆ ಹೆಚ್ಚಿನ ಮಹತ್ವವಿದ್ದು, ಕಲಿಕೆಯಿಂದ ನಾವು ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬಹುದು ಎಂದರು.

ಬಡತನ ಹಾಗೂ ಸಂಕಷ್ಟಗಳ ನಡುವೆಯೂ ಗ್ರಾಮೀಣ ಭಾಗದ ಪೋಷಕರು ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಲು ಪ್ರಯತ್ನಿಸುತ್ತಿದ್ದಾರೆ. ಇದು ಬದಲಾವಣೆಯ ಸಂಕೇತ. ಶಿಕ್ಷಣದಿಂದ ಸಮಾಜದ ಪ್ರತಿಯೊಬ್ಬರಿಗೂ ಅವಕಾಶಗಳು ಸಿಗಬೇಕು' ಎಂದು ಹೇಳಿದರು.

## ಜೀವ ಸಂಕುಲಕ್ಕೆ ಪ್ರಕೃತಿ ಆಸರೆ : ತಹಶೀಲ್ದಾರ್ ಮಹೇಶ ಪಾಟೀಲ್

• ಉದಯವಾಹಿನಿ, ಔರಾದ್

ಜಗತ್ತಿನಲ್ಲಿ ಜೀವಿಸುತ್ತಿರುವ ಪ್ರತಿಯೊಂದು ಜೀವ ಸಂಕುಲಕ್ಕೂ ಆಸರೆ ಪ್ರಕೃತಿ. ಅದನ್ನು ಉಳಿಸಿ ಬೆಳೆಸಿದರೆ ಮಾತ್ರ ಮುಂದಿನ ಪೀಳಿಗೆಯವರು ಜೀವಿಸಲು ಸಾಧ್ಯ. ಆ ನಿಟ್ಟಿನಲ್ಲಿ ಎಲ್ಲರೂ ಪರಿಸರವನ್ನು ರಕ್ಷಿಸುವತ್ತ ಗಮನ ಹರಿಸಬೇಕು ಎಂದು ತಹಶೀಲ್ದಾರ್ ಮಹೇಶ ಪಾಟೀಲ್ ಹೇಳಿದರು. ಪಟ್ಟಣದ ಬಸವ ಗುರುಕುಲ ಪ್ರೌಢಶಾಲೆಯಲ್ಲಿ ಕರ್ನಾಟಕ ರಕ್ಷಣಾ ವೇದಿಕೆ (ಪ್ರವೀಣ್ ಶೆಟ್ಟಿ ಬಣ) ಹಾಗೂ ಪ್ರಾದೇಶಿಕ ಅರಣ್ಯ ವಲಯ ಸಂತಪೂರ ಸಂಯುಕ್ತ ಆಶ್ರಯದಲ್ಲಿ ನಡೆದ ವಿಶ್ವ ಪರಿಸರ ದಿನಾಚರಣೆ


ಉದಯವಾಹಿನಿ ಚಿತ್ರ

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು ''ಮನೆಗೊಂದು ಮರ ಊರಿಗೊಂದು ವನ'' ನಿರ್ಮಾಣವಾಗಬೇಕು ವಿಶೇಷವಾಗಿ ಔರಾದ್ ತಾಲ್ಲೂಕಿನಲ್ಲಿ ಬಯಲು ಪ್ರದೇಶ ವಿದ್ದು ಹೆಚ್ಚು ಗಿಡ ಮರಗಳನ್ನು ಬೆಳೆಸುವ ಅವಶ್ಯಕತೆ ಇದೆ. ನಾವೆಲ್ಲರೂ ಮುಂದಿನ ಪೀಳಿಗೆಗೆ ಪರಿಸರ ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಕೆಲಸ ಮಾಡಬೇಕಾಗಿದೆ ಎಂದರು.

> ಸಮಾಜದಿಂದ ಎಲ್ಲವನ್ನು ಪಡೆಯುವ ಮನುಷ್ಯರು ಸಮಾಜಕ್ಕೆ ಕೊಡುಗೆ ನೀಡುವುದನ್ನು ಮರೆಯುತ್ತಾರೆ. ಪರಿಸರ ಸಂರಕ್ಷಣೆ ಸಮಾಜದ ಅಭಿವೃದ್ಧಿಗೆ ಮುಖ್ಯವಾಗಿದೆ. ಪರಿಸರವನ್ನು ಉಳಿಸುವ ನಿಟ್ಟಿನಲ್ಲಿ ಪ್ರತಿಯೊಬ್ಬರು ಸಂಕಲ್ಪ ಮಾಡಬೇಕು
> –ಓಂಪ್ರಕಾಶ್ ದಡ್ಡೆ

## ಉದ್ಯೋಗಕ್ಕಾಗಿ ಉತ್ಕೃಷ್ಟತೆ: ತರಬೇತಿ ಇಂದಿನಿಂದ

• ಉದಯವಾಹಿನಿ, ಉಜಿರೆ


ಇಲ್ಲಿನ ಎಸ್‌ಡಿಎಂ ಸ್ವಾಯತ್ತ ಕಾಲೇಜಿನ ಸ್ನಾತಕೋತ್ತರ ಅಧ್ಯಯನ ಕೇಂದ್ರದ ಸಮಾಜ ಕಾರ್ಯ ವಿಭಾಗದಲ್ಲಿ ಬೆಂಗಳೂರಿನ ಮ್ಯಾಜಿಕ್ ಬಸ್ ಇಂಡಿಯಾ ಪ್ರತಿಷ್ಠಾನ ಮತ್ತು ರಿಲಾಯನ್ಸ್ ಪ್ರತಿಷ್ಠಾನದ ಸಹಯೋಗದಲ್ಲಿ ಇಂದಿನಿಂದ 3 ದಿನಗಳ ಕಾಲ ಉದ್ಯೋಗಕ್ಕಾಗಿ ಉತ್ಕೃಷ್ಟತೆ ಕುರಿತು ತರಬೇತಿ ಆಯೋಜಿಸಲಾಗಿದೆ. ಅಂದು ಬೆಳಿಗ್ಗೆ 9.30ಕ್ಕೆ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಕಾರ್ಯನಿರ್ವಾಹಕ ನಿರ್ದೇಶಕ ಅನಿಲ್‌ಕುಮಾರ್ ಕಾರ್ಯಕ್ರಮ ಉದ್ಘಾಟಿಸುವರು. ಎಸ್‌ಡಿಎಂ ಕಾಲೇಜಿನ ಪ್ರಾಂಶುಪಾಲ ಪ್ರೊ.ವಿಶ್ವನಾಥ್ ಪಿ. ಅಧ್ಯಕ್ಷತೆ ವಹಿಸುವರು.ಬೆಂಗಳೂರಿನ ಸಿಎಸ್‌ಆರ್ ಯೋಜನಾ ನಿರ್ದೇಶಕ ಧವನ್ ಗೌಡ ಭಾಗವಹಿಸುವರು ಎಂದು ಸ್ನಾತಕೋತ್ತರ ಅಧ್ಯಯನ ಕೇಂದ್ರದ ಡೀನ್ ಸೌಮ್ಯ ಬಿ.ಪಿ. ತಿಳಿಸಿದ್ದಾರೆ.

## ಬಕ್ರೀದ್ ಹಬ್ಬ: ಸಂಭ್ರಮ ಸಡಗರದಿಂದ ಆಚರಣೆ

• ಉದಯವಾಹಿನಿ,ಚಿಂಚೋಳಿ

ತ್ಯಾಗ ಬಲಿದಾನದ ಪ್ರತೀಕ ಬಕ್ರೀದ್ ಹಬ್ಬವನ್ನು ತಾಲ್ಲೂಕಿನಾದ್ಯಂತ ಶಾಂತಿ ಸೌಹಾರ್ದತೆಯಿಂದ ಸಂಭ್ರಮ ಸಡಗರದಿಂದ ಶ್ರದ್ಧಾ ಭಕ್ತಿಯಿಂದ ಮುಸ್ಲಿಂ ಬಾಂಧವರು ಸಾಮೂಹಿಕ ನಮಾಜ್ ಮಾಡುವ ಮೂಲಕ ಆಚರಣೆ ಮಾಡಿದರು.

ಅವಳಿ ಪಟ್ಟಣ ಚಿಂಚೋಳಿ – ಚಂದಾಪೂರ ಸೇರಿದಂತೆ ತಾಲ್ಲೂಕಿನ ಐನೋಳ್ಳಿ, ನೀಮಾಹೋಸಳ್ಳಿ,ಅಣವಾರ, ದಸ್ತಾ ಪೂರ,ಸುಲೇಪೇಟ, ಚಿಮ್ಮಾನಚೋಡ, ಚಿಮ್ಮಾಯಿದ್ಲಾಯಿ, ನಾಗಾಯಿದ್ಲಾಯಿ, ಪೋಲಕಪಳ್ಳಿ,ಐನಾಪೂರ,ಗಡಿಕೇಶ್ವಾರ, ನಿಡಗುಂದಾ, ಕರ್ಚಖೇಡ,ಹೊಡೆಬೀರನಳ್ಳಿ, ಸಾಲೆಬೀರನಳ್ಳಿ, ದೇಗಲಮಡಿ, ಕೊಳ್ಳೂರ, ಮಿರಿಜಾಣ, ಕಲ್ಲೂರರೋಡ್, ಕುಂಚಾವರಂ, ಸೇರಿದಂತೆ ತಾಲ್ಲೂಕಿನಾದ್ಯಂತ ಅತ್ಯಂತ ಸಡಗರ ಸಂಭ್ರಮದಿಂದ ಮುಸ್ಲಿಂ ಬಾಂಧವರು ಸಂಪ್ರದಾಯದಂತೆ ಹೊಸ ಉಡುಪುಗಳು ತೊಟ್ಟು ಈದ್ಗಾ ಮೈದಾನಕ್ಕೆ ಬೆಳಿಗ್ಗೆ ತೆರಳಿ ಧರ್ಮ ಗುರುಗಳು ಧಾನ


ಉದಯವಾಹಿನಿ ಚಿತ್ರ

ಧರ್ಮದ ಮಹತ್ವ ಕುರಿತು ಭೋಧನೆ ಮಾಡಿ ನಮಾಜ್ ಪ್ರಾರ್ಥನೆ ಮಾಡಿದರು. ನಮಾಜ್ ಪ್ರಾರ್ಥನೆ ಮುಗಿದ ನಂತರ ಮುಸ್ಲಿಂ ಬಾಂಧವರು ಪರಸ್ಪರ ಶುಭಾಷಯ ವಿನಿಮಯ ಮಾಡಿಕೊಂಡರು, ಮುಸ್ಲಿಂ ಬಾಂಧವರ ಹಿರಿಯ ಕಿರಿಯ ಆಗಲಿದ ಗೋರಿಗಳಿಗೆ ತೆರಳಿ ಪುಷ್ಪಾರ್ಚನೆ ಮಾಡಿ ಗೌರವ ನಮನ ಸಲ್ಲಿಸಿದರು.

ತಾಲ್ಲೂಕಿನಾದ್ಯಂತ ಎಲ್ಲಾ ಈದ್ಗಾ ಮೈದಾನಗಳಲ್ಲಿ, ಮಸೀದಿಗಳಲ್ಲಿ ಅನೇಕ ಹಿರಿಯರು ಕಿರಿಯರು ನಮಾಜ್ ಪ್ರಾರ್ಥನೆಯಲ್ಲಿ ಪಾಲ್ಗೊಂಡರು.

## ಮೊಳಕೆ ಒಡೆಯುತ್ತಿರುವ ಬೆಳೆ: ಕೈಕೊಟ್ಟ ಮಳೆ

• ಉದಯವಾಹಿನಿ, ಲಕ್ಷ್ಮೇಶ್ವರ

ತಾಲ್ಲೂಕಿನಲ್ಲಿ ಕೃತಿಕಾ ಮಳೆ ಸುರಿದು ಭೂಮಿ ತೇವಾಂಶಗೊಳುತ್ತಿದ್ದಂತೆ ಮುಂಗಾರಿನ ಪ್ರಮುಖ ಬೆಳೆಯಾದ ಹೆಸರು, ಗೋವಿನಜೋಳ,ಶೇಂಗಾ, ಬಿತ್ತನೆ ಮಾಡಿದ್ದಾರೆ. ಆದರೆ ಕೈಕೊಟ್ಟ ರೋಹಿಣಿ ಮಳೆ ಮೊಳಕೆ ಹಂತದಲ್ಲಿರುವ ಈಗ ಇವು ತೇವಾಂಶದ ಕೊರತೆಯಿಂದ ಒಣಗುವ ಬಿತ್ತಿ ಉಂಟಾಗಿದ್ದು ಮೊದಲ ತುತ್ತಿಗೆ ಹಳ್ಳು ಎಂಬಂತೆ ರೋಹಿಣಿ ಮಳೆ ಆಗದೆ ರೈತರು ಮುಗಿಲು ನೋಡುವಂತಾಗಿದೆ.

ನೀರಾವರಿ ಸೌಲಭ್ಯ ಹೊಂದಿರುವ ರೈತರು ಬೆಳೆಗಳನ್ನು ಉಳಿಸಿಕೊಳ್ಳಲು ಪ್ರಯತ್ನಿಸುತ್ತಿದ್ದರೆ ಮಳೆಯನ್ನೇ ನಂಬಿರುವ ರೈತರು ಮೋಡಗಳ ಕಣ್ಣಾಮುಚ್ಚಾಲೆ ಆಟವನ್ನು ನಿಟ್ಟುಸಿರು ಬಿಟ್ಟು ನೋಡುತ್ತಿದ್ದಾರೆ.

ತಾಲ್ಲೂಕಿನಲ್ಲಿ ಸುಮಾರು ಹತ್ತು ಸಾವಿರ ಹೆಕ್ಟೇರ್ ಜಮೀನಿನಲ್ಲಿ ಗೋವಿನ ಜೋಳದ ಬಿತ್ತನೆಯ ಗುರಿ ಹೊಂದಲಾಗಿದ್ದು ಒಂದು ಮೂಲದ


ಉದಯವಾಹಿನಿ ಚಿತ್ರ

ಪ್ರಕಾರ ಶೇಕಡಾ 50 ರಷ್ಟು ಬೀತ್ತನೆಯಾಗಿದೆ ಎನ್ನಲಾಗುತ್ತಿದೆ.ಬಿತ್ತನೆ ಮಾಡಿರುವ ರೈತರು ಅತ್ತ ಮಳೆಯ ಕಣ್ಣಾಮುಚ್ಚಾಲೆ ಇತ್ತ ಖರ್ಚುವೆಚ್ಚದ ಭಾರ ಅನಿವಾರ್ಯವಾಗಿ ಇನ್ನೊಂದು ವಾರದಲ್ಲಿ ಮಳೆಯಾಗದಿದ್ದರೆ ಕೆಂಪು ಮಣ್ಣಿನ ಭೂಮಿಯಲ್ಲಿ ಮತ್ತು ಎರೆ ಭೂಮಿಯಲ್ಲಿ ಬಿತ್ತನೆಯಾಗಿ ಮೊಳಕೆ ನಾಟಿರುವ ಬೀಜಗಳು ಹಳದಿಯಾಗಿ ಮತ್ತು ಬೀಜಗಳು ಹಾಳಾಗಿ ಇಲಿಗಳು ತಿಂದು ನಾಶವಾಗುವ ಸಂಕಷ್ಟವನ್ನು ರೈತರು ಎದುರಿಸಬೇಕಾಗಿದೆ ಸುಡು ಬಿಸಿಲಿನ ಮೇ ತಿಂಗಳಿನಲ್ಲಿ ಮಳೆಗಾಲದ ವಾತಾವರಣ ನಿರ್ಮಾಣವಾಗಿ ಈಗ ಮಳೆಗಾಲದಲ್ಲಿ ಬೇಸಿಗೆಯ ವಾತಾವರಣ ನಿರ್ಮಾಣವಾಗಿರುವುದು ರೈತರನ್ನು ಚಿಂತಾಕ್ರಾಂತಾರವಾಗಿ ಮಾಡಿದೆ ಇದಕ್ಕೆ ಮೃಗಶೀರಾ ಮಳೆಯನ್ನು ರೈತರು ನಂಬಿಕೊಂಡಿದ್ದು ಎಲ್ಲವೂ ಮೇಘರಾಜನ ಮೇಲೆ ಅವಲಂಭಿತವಾಗಿದೆ.

> ದಿನದಿಂದ ದಿನಕ್ಕೆ ಬಿರು ಬಿಸಿಲಿನಿಂದ ಭೂಮಿಯ ತೇವಾಂಶ ಕಡಿಮೆಯಾಗಿ ಮೊಳಕೆ ಹಂತದಲ್ಲಿಯೇ ಬೀಜಗಳು ಹಾಳಾಗುವ ಬಿತಿ ಇದೆ ಎಲ್ಲಿಯೂ ತಾಲ್ಲೂಕಿನಾದ್ಯಾಂತ ಮಳೆ ಆಗಿಲ್ಲ ಇದರಿಂದ ರೈತರು ಆತಂಕದಲ್ಲಿ ಇದ್ದಾರೆ –ಚಂದ್ರಶೇಖರ ನರಸಮ್ಮನವರ
> ಸಹಾಯಕ ಕೃಷಿ ಅಧಿಕಾರಿ ರೈತ ಸಂಪರ್ಕ ಕೇಂದ್ರ, ಲಕ್ಷ್ಮೇಶ್ವರ

## ಲಮಾಣಿ ವಿದ್ಯಾರ್ಥಿ ವಸತಿ ಗೃಹದಲ್ಲಿ ದಾಖಲಾತಿಗಳು ಪ್ರಾರಂಭ: ರಾಜು ಪವ್ಹಾರ

• ಉದಯವಾಹಿನಿ, ಚಿಂಚೋಳಿ



ಪಟ್ಟಣದ ಚಂದಾಪೂರದ ಗಂಗೂನಾಯಕ ತಾಂಡದ ಮುಖ್ಯ ರಸ್ತೆಯಲ್ಲಿರುವ ಲಮಾಣಿ ವಿದ್ಯಾರ್ಥಿ ವಸತಿ ಗೃಹದಲ್ಲಿ ವಿವಿಧ ಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ 5-ರಿಂದ 10ನೇ ತರಗತಿಯ ವಿದ್ಯಾರ್ಥಿಗಳು ವಸತಿ ಗೃಹದಲ್ಲಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳು ವಸತಿ ಗೃಹದಲ್ಲಿ ದಾಖಲಾತಿಗಳು ಪ್ರಾರಂಭವಾಗಿದ್ದು ಸದುಪಯೋಗ ಪಡೆದುಕೊಳ್ಳಬೇಕು ಎಂದು ಲಮಾಣಿ ವಿದ್ಯಾರ್ಥಿ ವಸತಿ ಗೃಹದ ಅಧ್ಯಕ್ಷ ರಾಜು ಪವ್ಹಾರ ತಿಳಿಸಿದ್ದಾರೆ. ಪರಿಶಿಷ್ಟ ಜಾತಿಯ ಪ್ರತಿಶತಃ 75ರಷ್ಟು ವಿದ್ಯಾರ್ಥಿಗಳು ಹಾಗೂ ಸಾಮಾನ್ಯ ವರ್ಗದವರ ವಿದ್ಯಾರ್ಥಿಗಳಿಗೆ ಪ್ರತಿಶತಃ 25ರಷ್ಟು ದಾಖಲಾತಿಗಳು ಪಡೆಯಬಹುದು,ವಿದ್ಯಾರ್ಥಿಗಳು ಲಮಾಣಿ ವಸತಿ ಗೃಹದಲ್ಲಿ ಆಸಕ್ತಿವುಳ್ಳವರು ಸದುಪಯೋಗ ಪಡೆದುಕೊಂಡು ಉತ್ತಮ ಗುಣಮಟ್ಟದ ಶಿಕ್ಷಣ ಪಡೆದುಕೊಂಡು ಜೀವನ ರೂಪಿಸಿಕೊಳ್ಳಬೇಕು,ವಸತಿಗ್ರಹಕ್ಕೆ ಬೇಕಾಗುವ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಹೊಂದಲಾಗಿದೆ ವಿದ್ಯಾರ್ಥಿಗಳು ಸದುಪಯೋಗ ಪಡೆದುಕೊಳ್ಳಬೇಕು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಬೇರೆ ಊರ ಹಾದಿ ಹಿಡಿದ ಬಸ್‌ಗಳು: ಪ್ರಯಾಣಿಕರ ಪರದಾಟ

• ಉದಯವಾಹಿನಿ, ಮಾಯಕೊಂಡ

ದಾವಣಗೆರೆಯಿಂದ ಆನಗೋಡು, ಕೊಡಗನೂರು ಕ್ರಾಸ್, ಮಾಯಕೊಂಡ, ಸಾಸಲು ಮಾರ್ಗವಾಗಿ ಹೊಳಲ್ಕೆರೆಗೆ ಹಾಗೂ ಇನ್ನೂ ಮುಂದಿನ ದೂರದ ಸ್ಥಳಗಳಿಗೆ ಪ್ರಯಾಣಿಸಲು ಇರುವ ಕೆಎಸ್‌ಆರ್‌ಟಿಸಿ ಬಸ್‌ಗಳು ಎರಡು ತಿಂಗಳಿಂದ ಆ ಮಾರ್ಗ ಬದಲಿಸಿ ಬಾಡ ಕ್ರಾಸ್ ಮೂಲಕ ಸಂಚರಿಸುತ್ತಿವೆ. ಇದರಿಂದ ಮೇಲ್ಕಾಣಿಸಿದ ಗ್ರಾಮಗಳ ಪ್ರಯಾಣಿಕರು ಸಂಕಷ್ಟ ಎದುರಿಸುವಂತಾಗಿದೆ.

ಎರಡು ತಿಂಗಳಿಂದ ಕೊಡಗನೂರು ಕೆರೆ ಏರಿ ದುರಸ್ತಿ ಕಾರ್ಯ ನಡೆಯುತ್ತಿದೆ. ದುರಸ್ತಿ ವೇಳೆ ಈ ಮಾರ್ಗದಲ್ಲಿ ಸಂಚರಿಸುವ ಬಸ್‌ಗಳು ಹಾಗೂ ಎಲ್ಲಾ ಲಘು ವಾಹನಗಳು ಕೊಡಗನೂರು ಮಾರ್ಗವಾಗಿ ಬೊಮ್ಮೇನಹಳ್ಳಿ, ಪರಶುರಾಂಪುರ ಮೂಲಕ ಹೊಳಲ್ಕೆರೆ ರಸ್ತೆ ಸೇರಿ ಸಂಚರಿಸುವಂತೆ ಅಧಿಕಾರಿಗಳು ಮಾಹಿತಿ ನೀಡಿದ್ದರು.

ಅಧಿಕಾರಿಗಳ ಆದೇಶದಂತೆ ಕೆಲ ದಿನಗಳವರೆಗೆ ಮಾತ್ರ ಸಂಚರಿಸಿದ್ದ ನಿಗಮದ ಬಸ್‌ಗಳು, ಹಳ್ಳಿದಾರಿಯಲ್ಲಿ ಸುತ್ತಿಕೊಂಡು ಹೋಗಬೇಕು ಎಂದು ಆನಗೋಡು ಮಾರ್ಗವನ್ನು ಬಿಟ್ಟು ಬಾಡ ಕ್ರಾಸ್ ಬಳಿಯೇ ಮಾರ್ಗ ಬದಲಿಸಿಕೊಂಡು ಹೋಗುತ್ತಿವೆ. ಈ ಬಗ್ಗೆ ದಾವಣಗೆರೆ ಬಸ್ ನಿಲ್ದಾಣದಲ್ಲಿ ಪ್ರಯಾಣಿಕರು ಪ್ರಶ್ನಿಸಿದರೆ, ನಮ್ಮದು ಎಕ್ಸ್‌ಪ್ರೆಸ್ ಬಸ್. ಸುತ್ತಿಕೊಂಡು ಹೋದರೆ ಸಮಯದ ಅಭಾವ ಆಗುತ್ತದೆ. ಮೇಲಧಿಕಾರಿಗಳೇ ಮಾರ್ಗ ಬದಲಿಸುವಂತೆ ಸೂಚಿಸಿದ್ದಾರೆ. ಕೊಡಗನೂರು ಮಾರ್ಗದಲ್ಲಿ ರಸ್ತೆ ಜಾಮ್ ಆಗಿದೆ' ಎಂಬ ಹತ್ತಾರು ಸಬೂಬು ಹೇಳಿಕೊಂಡು ಬಾಡಕ್ರಾಸ್, ಬಾಡ, ಸಂತೇಬೆನ್ನೂರು ಮೂಲಕ ಸಾಸಲು ಹಳ್ಳಕ್ಕೆ ಬಂದು ಹೊಳಲ್ಕೆರೆ ಹೋಗುತ್ತಿದ್ದಾರೆ.ಇದರಿಂದ ಆನಗೋಡು, ನೇರ್ಲಿಗೆ, ಕೊಡಗನೂರು, ಮಾಯಕೊಂಡ, ಬಾವಿಹಾಳು, ನರಗನಹಳ್ಳಿ, ಹುಚ್ಚವ್ವನಹಳ್ಳಿ, ಹಿಂಡಸಕಟ್ಟೆ, ಬಸವಾಪುರ, ಅಂದನೂರು, ಗ್ರಾಮಗಳಿಗೆ ಹೊಂದಿಕೊಂಡಿರುವ ಹತ್ತಾರು ಹಳ್ಳಿಗಳ ಸಾವಿರಾರು ಪ್ರಯಾಣಿಕರು ನಿತ್ಯವೂ ಸಂಕಷ್ಟ ಅನುಭವಿಸುತ್ತಿದ್ದಾರೆ. ನಿತ್ಯವೂ ಬೆಳಿಗ್ಗೆ ದಾವಣಗೆರೆಯಿಂದ ಈ ಮಾರ್ಗದಲ್ಲಿನ ಸರ್ಕಾರಿ ಕಚೇರಿಗಳ ಕೆಲಸ-ಕಾರ್ಯಗಳಿಗೆ, ಶಾಲೆ-ಕಾಲೇಜುಗಳಿಗೆ, ಕಚೇರಿ ಸಮಯಕ್ಕೆ ಬರಲು ಆಗದೆ ಹೈರಾಣಾಗಿದ್ದಾರೆ.

ಕೆಎಸ್‌ಆರ್‌ಟಿಸಿ ಬಸ್ ಡ್ರೈವರ್, ಕಂಡಕ್ಟರ್ ಹಾಗೂ ಅಧಿಕಾರಿಗಳಿಗೆ ಶಾಪ ಹಾಕುತ್ತಿದ್ದಾರೆ. ಅಧಿಕಾರಿಗಳು ಎಚ್ಚೆತ್ತು, ಪ್ರಯಾಣಿಕರಿಗೆ ಸಮಸ್ಯೆ ಉಂಟು ಮಾಡುವವರ ವಿರುದ್ಧ ಕ್ರಮ ಕೈಗೊಂಡು, ಈ ಭಾಗದಲ್ಲಿ ಬಸ್ ಸಂಚಾರಕ್ಕೆ ವ್ಯವಸ್ಥೆ ಕಲ್ಪಿಸಬೇಕು ಎಂಬುದು ಪ್ರಯಾಣಿಕರ ಆಶಯ.

> ನಮ್ಮೂರ ಮೂಲಕ ಹೋಗುವ ಬಸ್‌ಗಳೆಂದರೆ ಅವು ನಮ್ಮ ಬಸ್‌ಗಳು. ಅವೇ ನಮ್ಮ ಸಂಚಾರಕ್ಕೆ ಆಸರೆ. ಆದರೆ, ಆ ಬಸ್‌ಗಳು ನಮ್ಮೂರು ಬಿಟ್ಟು ಬೇರೆ ಊರ ಮೇಲೆ ಹಾದು ಹೋಗುತ್ತಿರುವುದರಿಂದ ನಮಗೆ ಬಹಳ ದುಃಖವಾಗುತ್ತಿದೆ ಎಂಬುದು ಈ ಗ್ರಾಮಗಳ ಜನರ ಅಳಲು.

## ಪರಿಹಾರ ಧನ ವಿತರಿಸಲು ಒತ್ತಾಯ

• ಉದಯವಾಹಿನಿ, ಚನ್ನಮ್ಮನ ಕಿತ್ತೂರು

ಮುಂಗಾರು ಮಳೆ ಈ ಸಲ ಉತ್ತಮವಾಗಿದೆ. ರಾಜ್ಯದ ಪ್ರಮುಖ ಎಣ್ಣೆಕಾಳು ಬೆಳೆಯಾದ ಸೋಯಾಬಿನ್ ಬೆಳೆಯ ಬಿತ್ತನೆ ಕಾರ್ಯ ಪ್ರಗತಿಯಲ್ಲಿದ್ದು ಸೋಯಾಬಿನ್ ರೈತರು ಅಲ್ಲಲ್ಲಿ ಬೀಜವು ನಾಟಿಲ್ಲವೆಂದು ರೈತ ಮುಖಂಡ ಹಾಗೂ ಗ್ರಾಪಂ ಸದಸ್ಯ, ಪಿಕೆಪಿಎಸ್ ಅಧ್ಯಕ್ಷ ರಾಜೇಂದ್ರ ಹೊಸೆಟ್ಟಿ ಹೇಳಿದರು.

ರೈತರೆಲ್ಲರೂ ಸೇರಿ ಪಿಕೆಪಿಎಸ್ ಕಛೇರಿ ಹತ್ತಿರ ಪ್ರತಿಭಟನೆ ನಡೆಸಿದಾಗ ಮಾತನಾಡಿ ಈಗಾಗಲೇ ನಮ್ಮೂರ ಗ್ರಾಮದಲ್ಲಿ ಬೇರೆ-ಬೇರೆ ಕಂಪನಿ ಬೀಜ ಒಟ್ಟು 250 ಕ್ವಿಟಲ್ ಸೋಯಾಬಿನ್ ಬೀಜ ಭಿತ್ತನೆ ಮಾಡಲಾಗಿದೆ ಅವು ನಾಟಿಲ್ಲ ಕಳಪೆಯಾಗಿವೆ. ಬೀಜ, ಗೊಬ್ಬರಕ್ಕೆ ಸಾಲ ಮಾಡಿ ರೈತರ ಹಣ ವ್ಯರ್ಥವಾಗಿದೆ. ಮತ್ತೆ ಬೀತ್ತನೆ ಮಾಡಲು ಹಣವಿಲ್ಲದಂತೆ ಪರದಾಡುತ್ತಿದ್ದಾರೆ. ಇದಕ್ಕೆ ಯಾರು ಹೊಣೆ ಸರ್ಕಾರ ಮುತವರ್ಜಿವಹಿಸಿ ಪರಿಹಾರ ರೂಪದಲ್ಲಿ ಹಣ ನೀಡಬೇಕೆಂದು ಒತ್ತಾಯಿಸಿದರು.

### • ವೈದ್ಯರು ಹಾಗೂ ಸಿಬ್ಬಂದಿ ಕೊರತೆ ನಡುವೆಯೇ ತರಾತುರಿಯಲ್ಲಿ ನಮ್ಮ ಕ್ಲಿನಿಕ್ ಉದ್ಘಾಟನೆ ಮಾಡಲಾಗಿದೆ

# 'ನಮ್ಮ ಕ್ಲಿನಿಕ್'ಗೆ ಕಾಯಂ ವೈದ್ಯರಿಲ್ಲ: ಸ್ಥಳೀಯ ಜನರು ಆಕ್ರೋಶ

• ಉದಯವಾಹಿನಿ, ಶಿಗ್ಗಾವಿ

ತಾಲ್ಲೂಕಿನ ಗಂಗೇಬಾವಿ ಬಳಿಯ ಕೆಎಸ್‌ಆರ್‌ಪಿ 10ನೇ ಪಡೆ ಕಚೇರಿ ಆವರಣದಲ್ಲಿ ಇತ್ತೀಚೆಗಷ್ಟೇ 'ನಮ್ಮ ಕ್ಲಿನಿಕ್' ಆರಂಭಿಸಲಾಗಿದ್ದು, ಸೇವೆಗೆ ಮುಕ್ತಗೊಳಿಸಿದ ದಿನದಿಂದಲೇ ಕಾಯಂ ವೈದ್ಯರ ಕೊರತೆ ಎದ್ದು ಕಾಣುತ್ತಿದೆ. ಮೊದಲ ದಿನದಿಂದಲೇ ಕ್ಲಿನಿಕ್‌ನಲ್ಲಿ ವೈದ್ಯರಿಲ್ಲದಿದ್ದರಿಂದ, ರೋಗಿಗಳು ಬರುತ್ತಿಲ್ಲ. ವೈದ್ಯರಿಲ್ಲದ ಕ್ಲಿನಿಕ್ ಆರಂಭಿಸಿದ್ದಕ್ಕೆ ಸ್ಥಳೀಯ ಜನರು ಆಕ್ರೋಶ ಹೊರಹಾಕುತ್ತಿದ್ದಾರೆ.

ಕೆಎಸ್‌ಆರ್‌ಪಿ 10ನೇ ಪಡೆ ಆರಂಭವಾಗಿ 27 ವರ್ಷಗಳಾದರೂ ಈ ಭಾಗದಲ್ಲಿ ಆಸ್ಪತ್ರೆ ವ್ಯವಸ್ಥೆ ಇರಲಿಲ್ಲ. ಈಗ ನಮ್ಮ ಕ್ಲಿನಿಕ್ ಆರಂಭವಾಗುವ ಮೂಲಕ ಗಂಗೇನೂರ, ಹೊಸೂರು, ಯತ್ನಹಳ್ಳಿ ತಾಂಡಾ ಸೇರಿದಂತೆ ಸುತ್ತಲಿನ ಹಲವು ಗ್ರಾಮಗಳ ಜನರಲ್ಲಿ ಖುಷಿ ಮೂಡಿದೆ. ಆದರೆ, ವೈದ್ಯರಿಲ್ಲದಿದ್ದರಿಂದ ಮೊದಲ ದಿನದಿಂದಲೇ ಖುಷಿಯೂ ಮಾಯವಾಗಿದೆ.

ಈ ಭಾಗದ ಜನರು ಸಣ್ಣ ಚಿಕಿತ್ಸೆಗಾಗಿ ಶಿಗ್ಗಾವಿ, ಹುಬ್ಬಳ್ಳಿ, ಹಾವೇರಿ ಸೇರಿದಂತೆ ಬೇರೆಡೆ ಹೋಗುತ್ತಿದ್ದಾರೆ.


ಉದಯವಾಹಿನಿ ಚಿತ್ರ

> ಗಂಗೇಬಾವಿ ಕೆ.ಎಸ್.ಆರ್.ಪಿ 10ನೇ ಪಡೆ ಕಚೇರಿ ಆವರಣದಲ್ಲಿ ಆರಂಭವಾದ ನಮ್ಮ ಕ್ಲಿನಿಕ್ ಆಸ್ಪತ್ರೆಗೆ ಇನ್ನೂ ಪೂರ್ಣಾವಧಿಗೆ ಯಾವ ವೈದ್ಯರು ನೇಮಕವಾಗಿಲ್ಲ. ಅಲ್ಲಿಯೂ ನಾವೇ ಹೋಗಬೇಕಾಗಿದೆ
> –ಡಾ.ಮಲ್ಲೇಶಪ್ಪ ಎಸ್.ಟಿ
> ನಮ್ಮಕ್ಲಿನಿಕ್ ಉಸ್ತುವಾರಿ ಶಿಗ್ಗಾವಿ

ಅಲೆದಾಟ ತಪ್ಪಿಸುವ ಉದ್ದೇಶದಿಂದ ವೈದ್ಯಕೀಯ ಅಧಿಕಾರಿ, ಪ್ರಯೋಗಾಲಯದ ಸಹಾಯಕ, ಶುಶೂಷಕಿ, ಸಹಾಯಕರನ್ನು ಒಳಗೊಂಡು ನಮ್ಮ ಕ್ಲಿನಿಕ್ ಆರಂಭಿಸುವುದಾಗಿ ಆರೋಗ್ಯ ಇಲಾಖೆ ಹೇಳಿತ್ತು.

ವೈದ್ಯರು ಹಾಗೂ ಸಿಬ್ಬಂದಿ ಕೊರತೆ ನಡುವೆಯೇ ತರಾತುರಿಯಲ್ಲಿ ನಮ್ಮ ಕ್ಲಿನಿಕ್ ಉದ್ಘಾಟನೆ ಮಾಡಲಾಗಿದೆ. ವೈದ್ಯರು, ಸಿಬ್ಬಂದಿ ಇಲ್ಲದ ಕಾರಣಕಕ್ಕೆ ರೋಗಿಗಳು ಪುನಃ ಪರದಾಡುವ ಸ್ಥಿತಿ ನಿರ್ಮಾಣವಾಗಿದೆ. ಕೆಲವರು ನಿತ್ಯವೂ ಕ್ಲಿನಿಕ್‌ಗೆ ಬಂದು, ವೈದ್ಯರಿಲ್ಲದಿದ್ದಕ್ಕೆ ವಾಪಸು ಹೋಗುತ್ತಿದ್ದಾರೆ. ಕ್ಲಿನಿಕ್‌ನಲ್ಲಿ ತಾತ್ಕಾಲಿಕವಾಗಿ ಕೆಲಸ ಮಾಡುತ್ತಿರುವ ಡಾ. ಮಲ್ಲೇಶ ಎಸ್.ಟಿ., ತಮ್ಮ ಬಿಡುವಿನ ವೇಳೆ ಕ್ಲಿನಿಕ್‌ಗೆ ಬಂದು ಹೋಗುತ್ತಿದ್ದಾರೆ. ಅದು ಸಹ ಯಾವಾಗ ಎಂಬುದು ಸ್ಥಳೀಯರಿಗೆ ಗೊತ್ತಾಗುವುದಿಲ್ಲ. ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿರುವ ಸಹಾಯಕರೇ, ಅಕ್ರಮವಾಗಿ ವೈದ್ಯರ ಕೆಲಸ ಮಾಡುತ್ತಿದ್ದಾರೆ. ಸಣ್ಣಪುಟ್ಟ ಸಮಸ್ಯೆಗಳಿಗೆ ಔಷಧ ಕೊಟ್ಟು ಕಳುಹಿಸುತ್ತಿರುವುದು ಆತಂಕದ ಸಂಗತಿಯಾಗಿದೆ. 'ಸಣ್ಣಪುಟ್ಟ ನೆಗಡಿ, ತಲೆ ನೋವು, ಗಾಯಗಳಿಗೆ ಡ್ರೆಸ್ಸಿಂಗ್ ಮಾಡುತ್ತೇನೆ. ಯಾವ ರೋಗಕ್ಕೆ ಯಾವ ಔಷಧಿ ನೀಡಬೇಕು ಎಂಬ ಸಾಮಾನ್ಯ ಮಾಹಿತಿಯನ್ನು ವೈದ್ಯರು ತಿಳಿಸಿದ್ದಾರೆ ಎಂದು ಸಹಾಯಕ ಹೇಳುತ್ತಾರೆ. ಕೆಎಸ್‌ಆರ್‌ಪಿ ಸಿಬ್ಬಂದಿಯೊಬ್ಬರು, ನಮ್ಮ ಕ್ಲಿನಿಕ್ ಆರಂಭದಿಂದ ಉತ್ತಮ ಚಿಕಿತ್ಸೆ ದೊರೆಯುವ ಆಸೆಯಿತ್ತು. ಆದರೆ, ವೈದ್ಯರೇ ಕ್ಲಿನಿಕ್‌ಗೆ ಬರುತ್ತಿಲ್ಲ. ಹೀಗಾಗಿ, ಆಸ್ಪತ್ರೆಗೆ ದಿಕ್ಕಿಲ್ಲದಂತಾಗಿದೆ. ಅನುಷ್ಠಾನದ ಹಂತದಲ್ಲಿಯೇ ಕ್ಲಿನಿಕ್ ನೆಲಕಚ್ಚುವಂತಾಗಿದೆ. ಇದಕ್ಕೆ ಹೊಣೆ ಯಾರು ಎಂಬ ಪ್ರಶ್ನೆ ಕಾಡುತ್ತಿದೆ' ಎಂದರು.

> ಸರ್ಕಾರ ನಮ್ಮ ಕ್ಲಿನಿಕ್ ಆಸ್ಪತ್ರೆ ಆರಂಭ ಮಾಡುವ ಜತೆಗೆ ಸಿಬ್ಬಂದಿ ನೇಮಕಾತಿ ಮಾಡಬೇಕು. ಇಲ್ಲವಾದಲ್ಲಿ ಆಸ್ಪತ್ರೆ ತೆರೆಯಲು ಅನುಮತಿ ನೀಡಬಾರದು
> –ಫಕೀರಜ್ಜ , ಗ್ರಾಮಸ್ಥ

#### ಪ್ರಚಾರಕ್ಕಾಗಿ ಶಾಸಕರಿಂದ ಉದ್ಘಾಟನೆ

ನಮ್ಮ ಕ್ಲಿನಿಕ್ ಮಾಡಬೇಕು ಎಂಬುದು ಸ್ಥಳೀಯರ ಹಲವು ವರ್ಷಗಳ ಬೇಡಿಕೆಯಾಗಿತ್ತು. ಕಟ್ಟಡ ನಿರ್ಮಿಸಿದ್ದ ಆರೋಗ್ಯ ಇಲಾಖೆ ಅಧಿಕಾರಿಗಳು, ಪ್ರಚಾರಕ್ಕಾಗಿ ಶಾಸಕ ಯಾಸೀರ್ ಅಹ್ಮದ್ ಖಾನ್ ಪಠಾಣ ಅವರಿಂದ ಕ್ಲಿನಿಕ್ ಉದ್ಘಾಟನೆ ಮಾಡಿಸಿ ಮೌನವಾಗಿದ್ದಾರೆ' ಎಂದು ಜನರು ದೂರುತ್ತಿದ್ದಾರೆ. ಕಾಯಂ ವೈದ್ಯರಿಲ್ಲವೆಂಬುದು ಗೊತ್ತಿದ್ದರೂ ಶಾಸಕ ಪಠಾಣ, ಕ್ಲಿನಿಕ್ ಉದ್ಘಾಟಿಸಿ ಭಾಷಣ ಮಾಡಿ ಹೋದರು. ಕ್ಲಿನಿಕ್ ಹೇಗೆ ನಡೆಯುತ್ತಿದೆ ? ಎಂಬುದನ್ನು ಪರಿಶೀಲಿಸಿಲ್ಲ. ಕೇವಲ ಪ್ರಚಾರಕ್ಕಾಗಿ ಈ ರೀತಿ ಮಾಡಿದರೆ ಏನು ಪ್ರಯೋಜನ. ಜನಪರ ಕಾಳಜಿ ಇದ್ದರೆ, ಕೂಡಲೇ ವೈದ್ಯರನ್ನು ನೇಮಿಸಬೇಕು' ಎಂದು ಒತ್ತಾಯಿಸಿದರು.

## ವಿದ್ಯುತ್ ಸಮಸ್ಯೆ ಬಗೆಹರಿಸಲು ಆಗ್ರಹ

• ಉದಯವಾಹಿನಿ, ಶಿರಸಿ


ಉದಯವಾಹಿನಿ ಚಿತ್ರ

ತಾಲ್ಲೂಕಿನ ಮತ್ತಿಘಟ್ಟ ಮುಂಡಗನಮನೆ ಸೇವಾ ಸಹಕಾರಿ ಸಂಘದಲ್ಲಿ ಆಯೋಜಿಸಿದ್ದ ಹೆಸ್ಕಾಂ ಸಿಬ್ಬಂದಿ ಹಾಗೂ ವಿದ್ಯುತ್ ಗ್ರಾಹಕರ ಸಮನ್ವಯ ಸಭೆಯಲ್ಲಿ ಹತ್ತಾರು ಸಮಸ್ಯೆಗಳ ಬಗ್ಗೆ ಗ್ರಾಹಕರು ಧ್ವನಿ ಎತ್ತಿ ಹೆಸ್ಕಾಂನ ಗಮನ ಸೆಳೆಯುವ ಕಾರ್ಯ ಮಾಡಿದರು.

ಹೆಚ್ಚಿನ ಸಂಖ್ಯೆಯಲ್ಲಿ ಸೇರಿದ್ದ ಗ್ರಾಹಕರು ಕಳೆದ ವರ್ಷ ಯಾವ ಯಾವ ರೀತಿಯಲ್ಲಿ ವಿದ್ಯುತ್ ಸಂಪರ್ಕ ನೀಡುವಲ್ಲಿ ಸಮಸ್ಯೆಗಳಿದ್ದವು, ಅವು ಈಗಲೂ ಮುಂದುವರಿದಿದೆ. ಈ ಸಮಸ್ಯೆಗಳನ್ನು ಹೆಸ್ಕಾಂನವರು ಬಗೆಹರಿಸುವ ಪ್ರಯತ್ನ ಮಾಡಲಿಲ್ಲವೆಂದು ದೂರಿದರು. ಹೆಸ್ಕಾಂನ ಸಂಪಖಂಡ ವಿಭಾಗದ ಸೆಕ್ಷನ್ ಅಧಿಕಾರಿ ಮಂಜುನಾಥ ಮಾತನಾಡಿ ಈ ಭಾಗದ ವಿದ್ಯುತ್ ನೀಡುವಲ್ಲಿ ಏನೇನು ಸಮಸ್ಯೆಗಳು ಉದ್ಭವವಾಗುತ್ತಿದೆ. ಅದನ್ನು ಹೇಗೆ ಬಗೆಹರಿಸುತ್ತೇವೆ ಎಂದು ವಿವರಿಸಿದರು.

## ಟೆಕ್ಸಾಸ್ ನಗರ ಪರಿಷತ್ ಚುನಾವಣೆಯಲ್ಲಿ ಗೆದ್ದ ಭಾರತೀಯ ಅಭ್ಯರ್ಥಿಗಳು

**ಹೂಸ್ಟನ್:** ಟೆಕ್ಸಾಸ್‌ನಲ್ಲಿ ನಡೆದ ನಗರ ಪರಿಷತ್ತಿನ ಎರಡನೇ ಚುನಾವಣೆಯಲ್ಲಿ ಇಬ್ಬರು ಭಾರತೀಯ-ಅಮೆರಿಕನ್ ಅಭ್ಯರ್ಥಿಗಳು ಜಯಗಳಿಸಿದ್ದಾರೆ. ನಿವೃತ್ತ ಇಂಧನ ಕಾರ್ಯನಿರ್ವಾಹಕ ಮತ್ತು ಐಐಟಿ ದೆಹಲಿ ಪದವೀಧರರಾದ ಸಂಜಯ್ ಸಿಂಘಾಲ್, ಶುಗರ್ ಲ್ಯಾಂಡ್ಸ್ ಜಿಲ್ಲೆ 2 ರಲ್ಲಿ ಸಹ ಭಾರತೀಯ-ಅಮೆರಿಕನ್ ನಾಸಿರ್ ಹುಸೇನ್ ವಿರುದ್ಧ ನಿರ್ಣಾಯಕ ಗೆಲುವು ಸಾಧಿಸಿದ್ದಾರೆ. ಫೋರ್ಟ್ ಬೆಂಡ್ ಕೌಂಟಿಯ ಅನಧಿಕೃತ ಫಲಿತಾಂಶಗಳ ಪ್ರಕಾರ, ಹುಸೇನ್ ಅವರ 777 ಮತಗಳ ವಿರುದ್ಧ ಸಿಂಘಾಲ್ 2,346 ಮತಗಳನ್ನು ಪಡೆದರು. ಸಿಖ್-ಅಮೆರಿಕನ್ ಮತ್ತು ಶಿಕ್ಷಣ ಸುಧಾರಕ ಸುಖ್ ಕೌರ್ ಅವರು ಸ್ಯಾನ್ ಆಂಟೋನಿಯೊದಲ್ಲಿ ತಮ್ಮ ಜಿಲ್ಲೆ 1 ಕೌನ್ಸಿಲ್ ಸ್ಥಾನವನ್ನು ಉಳಿಸಿಕೊಳ್ಳಲು ಭರ್ಜರಿ ಗೆಲುವು ಸಾಧಿಸಿದರು.

ತನ್ನ ಪತಿ, ಇಬ್ಬರು ಮಕ್ಕಳೊಂದಿಗೆ ಸ್ಯಾನ್ ಆಂಟೋನಿಯೊದಲ್ಲಿ ವಾಸಿಸುವ ಲಾಭರಹಿತ ನಾಯಕಿ ಕೌರ್ ಅವರು ಪ್ರತಿಸ್ಪರ್ಧಿ ಪ್ಯಾಟಿ ಗಿಬ್ಬನ್ಸ ಅವರನ್ನು ಶೇ. 65 ರಷ್ಟು ಮತಗಳಿಂದ ಸೋಲಿಸಿದರು. ಈ ಗೆಲುವು ಜಿಲ್ಲೆ 2 ರ ನಿವಾಸಿಗಳಿಗೆ ಸೇರಿದೆ ಎಂದು ಸಿಂಘಾಲ್ ಬೆಂಬಲಿಗರಿಗೆ ತಿಳಿಸಿದರು. ಸಮುದಾಯದ ಬೆಂಬಲಕ್ಕಾಗಿ ನಾನು ತುಂಬಾ ಕೃತಜ್ಞನಾಗಿದ್ದೇನೆ ಮತ್ತು ಪಾರದರ್ಶಕತೆ ಮತ್ತು ಸಮರ್ಪಣೆಯೊಂದಿಗೆ ಸೇವೆ ಸಲ್ಲಿಸಲು ಸಿದ್ಧನಾಗಿದ್ದೇನೆ ಎಂದು ಅವರು ಭರವಸೆ ನೀಡಿದರು.

## ಡೆಮಾಕ್ರಟ್‌ಗಳಿಗೆ ಹಣಕಾಸಿನ ನೆರವು ನೀಡಿದರೆ ಹುಷಾರ್: ಮಸ್ಕ್‌ಗೆ ಟ್ರಂಪ್ ಎಚ್ಚರಿಕೆ

**ವಾಷಿಂಗ್ಟನ್:** ಡೆಮಾಕ್ರಟ್ ಪಕ್ಷದ ಅಭ್ಯರ್ಥಿಗಳಿಗೆ ಹಣಕಾಸಿನ ನೆರವು ನೀಡಿದರೆ ಗಂಭೀರ ಪರಿಣಾಮ ಎದುರಿಸಬೇಕಾಗುತ್ತದೆ ಎಂದು ಉದ್ಯಮಿ ಎಲಾನ್ ಮಸ್ಕ್‌ಗೆ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಚ್ಚರಿಕೆ ನೀಡಿದ್ದಾರೆ. ಎನ್‌ಬಿಸಿ ನ್ಯೂಸ್‌ಗೆ ನೀಡಿದ ದೂರವಾಣಿ ಸಂದರ್ಶನದಲ್ಲಿ, ಎಲಾನ್ ಮಸ್ಕ್ ನಡೆ ಬಗ್ಗೆ ಟ್ರಂಪ್ ಟೀಕಿಸಿದ್ದಾರೆ. ಮಸ್ಕ್ ಜೊತೆಗಿನ ಸಂಬಂಧ ಮುಗಿದಿದೆ ಎಂದು ನೀವು ಭಾವಿಸುತ್ತೀರಾ ಎಂದು ಕೇಳಿದಾಗ, ಹೌದು... ಹಾಗೆ ಭಾವಿಸುತ್ತೇನೆ' ಎಂದು ಟ್ರಂಪ್ ಹೇಳಿದ್ದಾರೆ. ಸರಿಪಡಿಸಿಕೊಳ್ಳುವ ಬಯಕೆ ಇದೆಯೇ ಎಂಬ ಪ್ರಶ್ನೆಗೆ, ಇಲ್ಲ ಎಂದಷ್ಟೇ ಹೇಳಿದ್ದಾರೆ.

ಇದೇ ವೇಳೆ, ಸೆನೆಟ್‌ನಲ್ಲಿ ಸುಂಕ ಮತ್ತು ವೆಚ್ಚ ಮಸೂದೆ ಅಂಗೀಕಾರವಾಗುವ ವಿಶ್ವಾಸವಿದೆ ವ್ಯಕ್ತಪಡಿಸಿದ್ದಾರೆ. ಟ್ರಂಪ್ ಅವರ ಸುಂಕ ಮತ್ತು ವೆಚ್ಚ ಮಸೂದೆಗೆ ಬಹಿರಂಗವಾಗಿ ವಿರೋಧ ವ್ಯಕ್ತಪಡಿಸಿರುವ ಎಲಾನ್ ಮಸ್ಕ್, ಸುಂಕ ಮಸೂದೆಯೊಂದು ಆರ್ಥಿಕ ಅಜಾಗರೂಕತೆ ಮತ್ತು ಅತ್ಯಂತ ಅಸಹ್ಯಕರ ಸಂಗತಿ' ಎಂದು ಟೀಕಿಸಿದ್ದರು. ಇಂತಹ ಮಸೂದೆಯನ್ನು ಬೆಂಬಲಿಸುವ ರಿಪಬ್ಲಿಕನ್ ಪಕ್ಷದ ಪ್ರತಿಯೊಬ್ಬರನ್ನೂ ವಿರೋಧಿಸುವುದಾಗಿ ಹೇಳಿದ್ದರು.

## ದೇಶದಲ್ಲಿ 5750ಕ್ಕೆ ಏರಿದ ಕೊರೋನಾ ಸೋಂಕಿತರ ಸಂಖ್ಯೆ

**ನವದೆಹಲಿ:** ದೇಶದಲ್ಲಿ ಕೋವಿಡ್ ಸೋಂಕಿನ ಪ್ರಕರಣ ದಿನೇ ದಿನೇ ಏರಿಕೆಯಾಗುತ್ತಿದ್ದು, ಒಟ್ಟು ಸಕ್ರಿಯ ಪ್ರಕರಣಗಳ ಸಂಖ್ಯೆ 5,750ಕ್ಕೆ ಹೆಚ್ಚಾಗಿದ್ದು, 24 ಗಂಟೆಗಳಲ್ಲಿ ನಾಲ್ಕು ಸಾವುಗಳ ಮೂಲಕ ಆತಂಕ ಸೃಷ್ಟಿಯಾಗಿದೆ.

ದೈನಂದಿನ ಸೋಂಕಿನಲ್ಲಿ 391 ಮಂದಿ ಉಪತಳಿಯಿಂದ ಬಾಧಿತರಾಗಿದ್ದಾರೆ. ಆರೋಗ್ಯ ಇಲಾಖೆ ಬೆಳಗ್ಗೆ ಬಿಡುಗಡೆ ಮಾಡಿರುವ ದತ್ತಾಂಶದ ಪ್ರಕಾರ ಕಳೆದ ಜನವರಿಯಿಂದ ಈವರೆಗೂ ಕೋವಿಡ್ ನಿಂದಾಗಿ ಒಟ್ಟು 59 ಜೀವಹಾನಿಯಾಗಿದೆ. ದಿನದ 24 ಗಂಟೆಯಲ್ಲಿ ನಾಲ್ಕು ಮಂದಿಯ ಸಾವು ಎಚ್ಚರಿಕೆಯ ಘಂಟೆಯಾಗಿದೆ.

ಕೇರಳವು ಅತಿ ಹೆಚ್ಚು ಸೋಂಕಿತ ರಾಜ್ಯವಾಗಿದ್ದು, 127 ಹೊಸ ಪ್ರಕರಣಗಳೊಂದಿಗೆ ಅಗ್ರಸ್ಥಾನದಲ್ಲಿದೆ, ಗುಜರಾತ್ 102, ದೆಹಲಿ 73 ಮತ್ತು ಪಶ್ಚಿಮ ಬಂಗಾಳ 26 ಪ್ರಕರಣಗಳೊಂದಿಗೆ ನಂತರದ ಸ್ಥಾನದಲ್ಲಿವೆ. ಈ ಹೆಚ್ಚಳವು ದೇಶಾದ್ಯಂತ ಆಸ್ಪತ್ರೆಗಳ ಸನ್ನದ್ಧತೆಯನ್ನು ನಿರ್ಣಯಿಸಲು ಕೇಂದ್ರ ಸರ್ಕಾರವು ಅಣಕು ಪ್ರದರ್ಶನಗಳನ್ನು ಪ್ರಾರಂಭಿಸಿವೆ.

**4 ಸಾವುಗಳ ಮೂಲಕ ಆತಂಕ**

ಕಳೆದ 24 ಗಂಟೆಗಳಲ್ಲಿ ಅರುಣಾಚಲ ಪ್ರದೇಶ, ಚಂಡೀಗಢ, ಮಿಜೋರಾಂ ಮತ್ತು ತ್ರಿಪುರ ಎಂಬ ನಾಲ್ಕು ರಾಜ್ಯಗಳಲ್ಲಿ ಮಾತ್ರ ಹೊಸ ಸೋಂಕು ಪತ್ತೆಯಾಗಿಲ್ಲ. ಮಧ್ಯಪ್ರದೇಶದಲ್ಲಿ, ಒಂಬತ್ತು ತಿಂಗಳ ಗರ್ಭಿಣಿಯಾಗಿದ್ದ 45 ವರ್ಷದ ಮಹಿಳೆಯೊಬ್ಬರು ಸಾವನ್ನಪ್ಪಿದ್ದಾರೆ. ನಂತರ ಅವರಿಗೆ ಕೋವಿಡ್ -19 ಸೋಂಕು ತಗುಲಿರುವುದು ದೃಢಪಟ್ಟಿತು. ಮಹಾರಾಷ್ಟ್ರದಲ್ಲಿ, ಹೈಪರ್ ಥೈರಾಯ್ಡಿಸಮ್ ಹೊಂದಿದ್ದ 63 ವರ್ಷದ ವ್ಯಕ್ತಿಯೊಬ್ಬರು ಈ ವೈರಸ್‌ಗೆ ಬಲಿಯಾಗಿದ್ದಾರೆ.ಕೇರಳದಲ್ಲಿ, 4 ನೇ ಹಂತದ ಶ್ವಾಸಕೋಶದ ಕ್ಯಾನ್ಸರ್‌ನಿಂದ ಬಳಲುತ್ತಿದ್ದ 59 ವರ್ಷದ ವ್ಯಕ್ತಿಯೊಬ್ಬರು ಕೋವಿಡ್ -19 ಸೋಂಕಿನಿಂದ ಸಾವನ್ನಪ್ಪಿದರು.

ತಮಿಳುನಾಡಿನಲ್ಲಿ, ಒಂದು ತಿಂಗಳ ಕಾಲ ಹಾಸಿಗೆ ಹಿಡಿದಿದ್ದ 79 ವರ್ಷದ ಮಧುಮೇಹ ವ್ಯಕ್ತಿಯೊಬ್ಬರು ಕೋವಿಡ್-ಪ್ರೇರಿತ ನ್ಯುಮೋನಿಯಾ ಮತ್ತು ತೀವ್ರ ಉಸಿರಾಟದ ತೊಂದರೆ ಸಿಂಡ್ರೋಮ್‌ನಿಂದ ಸಾವನ್ನಪ್ಪಿದ್ದಾರೆ. ಈ ವರ್ಷದ ಜನವರಿಯಿಂದ ಮಹಾರಾಷ್ಟ್ರವು ಅತಿ ಹೆಚ್ಚು ಕೋವಿಡ್ ಸಂಬಂಧಿತ ಸಾವುಗಳನ್ನು (18) ವರದಿ ಮಾಡಿದೆ, ನಂತರ ಕೇರಳ (12), ದೆಹಲಿ ಮತ್ತು ಕರ್ನಾಟಕ (ತಲಾ 7), ತಮಿಳುನಾಡು (5), ಮತ್ತು ಉತ್ತರ ಪ್ರದೇಶ, ಪಂಜಾಬ್, ಮಧ್ಯಪ್ರದೇಶ ಮತ್ತು ಗುಜರಾತ್ (ತಲಾ 2) ಸಾವಾಗಿವೆ. ಈ ಅವಧಿಯಲ್ಲಿ ರಾಜಸ್ಥಾನ ಮತ್ತು ಪಶ್ಚಿಮ ಬಂಗಾಳದಲ್ಲೂ ತಲಾ ಒಂದು ಸಾವು ಸಂಭವಿಸಿದೆ.

● ಪೊಲೀಸರ ಪ್ರಕಾರ, ಉರಿಬೆ ತಲೆಗೆ 2 ಗುಂಡು ತಗುಲಿದೆ, ಶಂಕಿತ ಶೂಟರ್ ಬಾಲಾಪರಾಧಿಯನ್ನು ವಶಕ್ಕೆ ತೆಗೆದುಕೊಳ್ಳಲಾಗಿದೆ

# ಕೊಲಂಬಿಯಾ ಅಧ್ಯಕ್ಷೀಯ ಅಭ್ಯರ್ಥಿಗೆ ರ್ಯಾಲಿ ವೇಳೆ ಗುಂಡೇಟು: ಆರೋಪಿ ಬಂಧನ

**ಕೊಲಂಬಿಯಾ:** ದ. ಅಮೇರಿಕಾದಲ್ಲಿರುವ ಕೊಲಂಬಿಯಾದ ಅಧ್ಯಕ್ಷೀಯ ಅಭ್ಯರ್ಥಿ ಮಿಗುಯೆಲ್ ಉರಿಬೆ ಅವರು ಬೊಗೋಟಾದ ಫಾಂಟಿಬನ್ ಜಿಲ್ಲೆಯಲ್ಲಿ ಪ್ರಚಾರ ಕಾರ್ಯಕ್ರಮದಲ್ಲಿ ಭಾಷಣ ಮಾಡುತ್ತಿದ್ದಾಗ, ಗುಂಡಿನ ದಾಳಿಯಾಗಿದೆ. ತೀವ್ರವಾಗಿ ಗಾಯಗೊಂಡ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

ಪೊಲೀಸರ ಪ್ರಕಾರ, ಉರಿಬೆ ತಲೆಗೆ ಎರಡು ಬಾರಿ ಗುಂಡು ತಗುಲಿದೆ. ಶಂಕಿತ ಶೂಟರ್ ಬಾಲಾಪರಾಧಿಯನ್ನು ವಶಕ್ಕೆ ತೆಗೆದುಕೊಳ್ಳಲಾಗಿದೆ. ಈ ಘಟನೆಯ ಬಗ್ಗೆ ಅಧ್ಯಕ್ಷ ಗುಸ್ತಾವೊ ಪೆಟ್ರೋ ಸಂತಾಪ ಸೂಚಿಸಿದ್ದಾರೆ. ಬೊಗೋಟಾ ಮೇಯರ್ ಕಾರ್ಲೋಸ್ ಗಾಲನ್ ಅವರು ಉರಿಬೆಗೆ ತುರ್ತು ವೈದ್ಯಕೀಯ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಖಚಿತಪಡಿಸಿದ್ದಾರೆ. ಅಗತ್ಯವಿದ್ದರೆ ಅವರನ್ನು ಬೇರೆ ಆಸ್ಪತ್ರೆಗೆ ಸಾಗಿಸಲು ನಗರದ ಸಂಪೂರ್ಣ ಆಸ್ಪತ್ರೆ ಜಾಲವನ್ನು ಸನ್ನದ್ಧ ಸ್ಥಿತಿಯಲ್ಲಿ ಇರಿಸಲಾಗಿದೆ.

ಬೊಗೋಟಾದ ಫಾಂಟಿಬನ್ ನೆರೆಹೊರೆಯಲ್ಲಿರುವ ಉದ್ಯಾನವನದಲ್ಲಿ ಈ ದಾಳಿ ಸಂಭವಿಸಿದೆ. ದುಷ್ಕರ್ಮಿಗಳು ಹಿಂಬದಿಯಿಂದ ಗುಂಡು ಹಾರಿಸಿದ್ದಾರೆ. ಸಾಮಾಜಿಕ ಮಾಧ್ಯಮದಲ್ಲಿ ಹಂಚಿಕೊಂಡ ಚಿತ್ರಗಳಲ್ಲಿ ಉರಿಬೆ ತಲೆಯಿಂದ ರಕ್ತಸ್ರಾವವಾಗುತ್ತಿರುವುದು ಕಂಡುಬಂದಿದೆ. ಗುಂಡು ದಾಳಿಯಾದ ತಕ್ಷಣ ಅಲ್ಲಿದ್ದ ಪ್ರತ್ಯಕ್ಷದರ್ಶಿಗಳು ಅವರಿಗೆ ಸಹಾಯ ಮಾಡಲು ಧಾವಿಸಿದ್ದಾರೆ.

ಬೊಗೋಟಾ ಮೇಯರ್ ಕಾರ್ಲೋಸ್ ಗಾಲನ್



- ಕೊಲಂಬಿಯಾದ ಅಧ್ಯಕ್ಷೀಯ ಅಭ್ಯರ್ಥಿ ಮಿಗುಯೆಲ್ ಉರಿಬೆ ಅವರು ಬೊಗೋಟಾದ ಫಾಂಟಿಬನ್ ಜಿಲ್ಲೆಯಲ್ಲಿ ಪ್ರಚಾರ ಕಾರ್ಯಕ್ರಮದಲ್ಲಿ ಗುಂಡಿನ ದಾಳಿಗೆ ತುತ್ತಾಗಿದ್ದಾರೆ.
- ಪೊಲೀಸರು ಶಂಕಿತ ಶೂಟರ್ ಬಾಲಾಪರಾಧಿಯನ್ನು ವಶಕ್ಕೆ ತೆಗೆದುಕೊಂಡಿದ್ದಾರೆ.
- ಕೊಲಂಬಿಯಾದ ಅಧ್ಯಕ್ಷ ಗುಸ್ತಾವೊ ಪೆಟ್ರೋ ಅವರು ಈ ಘಟನೆಗೆ ಸಂಬಂಧಿಸಿದಂತೆ ಉರಿಬೆ ಅವರ ಕುಟುಂಬಕ್ಕೆ ಬೆಂಬಲ ಸೂಚಿಸಿದ್ದು, ಈ ರೀತಿಯ ಹಿಂಸಾಚಾರವನ್ನು ಖಂಡಿಸಿದ್ದಾರೆ.

ಶಂಕಿತ ಶೂಟರ್ ಸಿಕ್ಕಿಬಿದ್ದಿದ್ದಾನೆ ಎಂದು ಹೇಳಿದ್ದು, ಕೊಲಂಬಿಯಾದ ಪೊಲೀಸ್ ಮುಖ್ಯಸ್ಥ ಜನರಲ್ ಕಾರ್ಲೋಸ್ ಟ್ರಯಾನಾ ಅವರು ದಾಳಿಯಲ್ಲಿ ಭಾಗಿಯಾದ ಬಾಲಾಪರಾಧಿಯನ್ನು ಸ್ಥಳದಲ್ಲಿಯೇ ಬಂಧಿಸಲಾಗಿದೆ ಎಂದು ಖಚಿತಪಡಿಸಿದ್ದಾರೆ. ಆತನಿಗೆ ಕಾಲಿಗೆ ಗಾಯವಾಗಿದ್ದು, ಚಿಕಿತ್ಸೆ ನೀಡಲಾಗುತ್ತಿದೆ, ಒಂದು ಬಂದೂಕನ್ನು ವಶಪಡಿಸಿಕೊಳ್ಳಲಾಗಿದೆ ಎಂದರು.

### ವಿಡಿಯೋದಲ್ಲಿ ಏನಿದೆ?

ಶನಿವಾರ ಮಧ್ಯಾಹ್ನ ರಾಜಧಾನಿ ಬೊಗೋಟಾದ ಫಾಂಟಿಬನ್ ಜಿಲ್ಲೆಯಲ್ಲಿ ಈ ಘಟನೆ ನಡೆದಿದೆ . ಪೊಲೀಸರು 15 ವರ್ಷದ ಬಾಲಕನನ್ನು ಬಂಧಿಸಿದ್ದಾರೆ. ಆತ ಗ್ಲಾಕ್ ಪಿಸ್ತೂಲ್ ಹಿಡಿದಿದ್ದ ಎಂದು ಹೇಳಿದ್ದಾರೆ. ವಿಡಿಯೋದಲ್ಲಿ ಸೆನೆಟರ್ ಸಭೆಯನ್ನುದ್ದೇಶಿಸಿ ಮಾತನಾಡುತ್ತಿದ್ದರು. ನಂತರ ಗುಂಡಿನ ಸದ್ದು ಕೇಳಿಸಿತು. ಜನರು ಓಡಿಹೋಗಿದ್ದು, ಪೊಲೀಸರು ಮತ್ತು ನಾಗರಿಕರು ತಕ್ಷಣ ಅವರನ್ನು ಆಂಬ್ಯುಲೆನ್ಸ್‌ನಲ್ಲಿ ಆಸ್ಪತ್ರೆಗೆ ಸಾಗಿಸಿದರು.

ಗುಂಡಿನ ದಾಳಿ ನಡೆದಾಗ, ಉರಿಬೆ ಅವರೊಂದಿಗೆ ಕೌನ್ಸಿಲ್ ಸದಸ್ಯ ಆಂಡ್ರೆಸ್ ಬ್ಯಾರಿಯೋಸ್ ಮತ್ತು ಸುಮಾರು 20 ಜನರು ಇದ್ದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಕೊಲಂಬಿಯಾದ ಅಧ್ಯಕ್ಷ ಗುಸ್ತಾವೊ ಪೆಟ್ರೋ ಸಾಮಾಜಿಕ ಮಾಧ್ಯಮದಲ್ಲಿ ಸಂತಾಪ ಸೂಚಿಸಿದ್ದಾರೆ. ಪೆಟ್ರೋ ಅವರು ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ ಸಂದೇಶದಲ್ಲಿ ಉರಿಬೆ ಅವರ ಕುಟುಂಬಕ್ಕೆ ಬೆಂಬಲ ಸೂಚಿಸಿದ್ದಾರೆ.

> ಉರಿಬೆ ಅವರ ಪತ್ನಿ ಮಾರಿಯಾ ಕ್ಲೌಡಿಯಾ ತರಾಜೋನಾ ಅವರು ಎಕ್ಸ್ ಖಾತೆಯಲ್ಲಿ ಪೋಸ್ಟ್ ಮಾಡಿದ್ದಾರೆ. ಮಿಗುಯೆಲ್ ಪ್ರಾಣಕ್ಕಾಗಿ ಹೋರಾಡುತ್ತಿದ್ದಾರೆ. ಅವರನ್ನು ನೋಡಿಕೊಳ್ಳುತ್ತಿರುವ ವೈದ್ಯರಿಗೆ ದೇವರು ಸಹಾಯ ಮಾಡಲಿ ಎಂದು ಪ್ರಾರ್ಥಿಸೋಣ, ಎಂದು ಬರೆದಿದ್ದಾರೆ. ಅಟಾರ್ನಿ ಜನರಲ್ ಲುಜ್ ಅಡ್ರಿಯಾನಾ ಕಾಮರ್ಗೋ ಅವರು ಉರಿಬೆ ಅವರ ಸ್ಥಿತಿ ಸ್ಥಿರವಾಗಿದೆ, ಆದರೆ ಇನ್ನೂ ಗಂಭೀರವಾಗಿದೆ ಎಂದು ಸ್ಥಳೀಯ ಟಿವಿ ವಾಹಿನಿ ಕ್ಯಾರಕೋಲ್ ಟಿವಿಗೆ ತಿಳಿಸಿದ್ದಾರೆ.

ನಿಮ್ಮ ನೋವನ್ನು ಹೇಗೆ ಕಡಿಮೆ ಮಾಡಬೇಕೆಂದು ನನಗೆ ತಿಳಿದಿಲ್ಲ. ಇದು ತಾಯಿಯನ್ನು ಕಳೆದುಕೊಂಡ ನೋವು ಮತ್ತು ಗಾಯಗೊಂಡ ತಾಯ್ನಾಡಿನ ನೋವು ಎಂದು ಅವರು ಹೇಳಿದ್ದಾರೆ. ಪೊಲೀಸರು ತನಿಖೆ ಮುಂದುವರೆಸಿದ್ದು, ಈ ಘಟನೆ ಕೊಲಂಬಿಯಾದಲ್ಲಿ ಆಘಾತ ಮೂಡಿಸಿದೆ. ಚುನಾವಣಾ ಪ್ರಚಾರದ ಸಂದರ್ಭದಲ್ಲಿ ಇಂತಹ ಹಿಂಸಾಚಾರ ನಡೆಯುವುದು ಖಂಡನೀಯ ಎಂದು ಹಲವರು ಅಭಿಪ್ರಾಯಪಟ್ಟಿದ್ದಾರೆ.

ಮಿಗುಯೆಲ್ ಉರಿಬೆ ಅವರು ಕೊಲಂಬಿಯಾದ ಪ್ರಮುಖ ರಾಜಕೀಯ ಕುಟುಂಬಕ್ಕೆ ಸೇರಿದವರು. ಅವರ ತಾತ ಜೂಲಿಯೊ ಸೀಸರ್ ಟರ್ಬೆ ಅಯಾಲಾ ಅವರು 1978 ರಿಂದ 1982 ರವರೆಗೆ ದೇಶವನ್ನು ಆಳಿದರು. ಉರಿಬೆ ಅವರ ತಾಯಿ ಡಯಾನಾ ಟರ್ಬೆ ಅವರು ಪತ್ರಕರ್ತರಾಗಿದ್ದರು. ಅವರನ್ನು 1991 ರಲ್ಲಿ ಡ್ರಗ್ ಕಳ್ಳಸಾಗಣೆದಾರರು ಅಪಹರಿಸಿ ಕೊಲೆ ಮಾಡಿದರು.

ಅಪರಾಧಿಗಳು ಅಪ್ರಾಪ್ತರನ್ನು ಬಳಸಿಕೊಳ್ಳುತ್ತಿದ್ದಾರೆ , ಈ ದಾಳಿಯ ಹಿಂದಿನ ಬೌದ್ಧಿಕ ಲೇಖಕರನ್ನು ಕಂಡುಹಿಡಿಯಲು ಸ್ವತಂತ್ರ ತನಿಖೆಗೆ ಆದೇಶಿಸಿದ್ದಾರೆ. ಈ ಹಿಂದೆ ನಡೆದ ರಾಜಕೀಯ ಹತ್ಯೆಗಳಿಗೆ ಕಾರಣರಾದ ಕ್ರೈಮ್ ಬಾಸ್‌ಗಳಿಗೂ ಇದಕ್ಕೂ ಸಂಬಂಧವಿರಬಹುದು ಎಂದು ಕೊಲಂಬಿಯಾದ ಅಧ್ಯಕ್ಷ ಗುಸ್ತಾವೊ ಪೆಟ್ರೋ ಅನುಮಾನ ವ್ಯಕ್ತಪಡಿಸಿದ್ದಾರೆ.

ರಾಜಕೀಯವು ಹಿಂಸೆಯಿಂದ ಮುಕ್ತವಾಗಿರಬೇಕು ಎಂದು ಅವರು ಹೇಳಿದ್ದಾರೆ. ಉರಿಬೆ ಅವರು ಹಾರ್ವರ್ಡ್ ಪದವೀಧರರು. 2022 ರಲ್ಲಿ ಸೆನೆಟ್‌ಗೆ ಪ್ರವೇಶಿಸಿದರು. ಅದಕ್ಕೂ ಮೊದಲು ಬೊಗೋಟಾ ರಾಜಕೀಯದಲ್ಲಿ ಸಕ್ರಿಯರಾಗಿದ್ದರು.

# ಎನ್‌ಡಿಎ ಸರ್ಕಾರದ ಅವಧಿಯಲ್ಲಿ ಮಹಿಳಾ ನೇತೃತ್ವದ ಅಭಿವೃದ್ಧಿ

**ನವದೆಹಲಿ:** ತಮ್ಮ ಸರ್ಕಾರದ ಮೂರನೇ ಅವಧಿಯ ಮೊದಲ ವಾರ್ಷಿಕೋತ್ಸವಕ್ಕೆ ಒಂದು ದಿನ ಮೊದಲು, ಪ್ರಧಾನಿ ನರೇಂದ್ರ ಮೋದಿ ಅವರು, ಆಡಳಿತಾರೂಢ ಬಿಜೆಪಿ ನೇತೃತ್ವದ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಒಕ್ಕೂಟವು ತನ್ನ 11 ವರ್ಷಗಳ ಅಧಿಕಾರದಲ್ಲಿ ಮಹಿಳಾ ನೇತೃತ್ವದ ಅಭಿವೃದ್ಧಿಯನ್ನು ಮರು ವ್ಯಾಖ್ಯಾನಿಸಿದೆ ಎಂದು ತಿಳಿಸಿದ್ದಾರೆ.

ಮಹಿಳೆಯರಿಗೆ ಅಪಾರ ಪ್ರಯೋಜನವನ್ನು ನೀಡಿರುವ ಹಲವಾರು ಕಲ್ಯಾಣ ಕಾರ್ಯಕ್ರಮಗಳನ್ನು ಅವರು ಉಲ್ಲೇಖಿಸಿದ್ದಾರೆ. ಸ್ವಚ್ಛ ಭಾರತ ಮೂಲಕ ಘನತೆಯನ್ನು ಖಚಿತಪಡಿಸುವುದರಿಂದ ಹಿಡಿದು ಜನ್ ಧನ್ ಖಾತೆಗಳ ಮೂಲಕ ಆರ್ಥಿಕ ಸೇರ್ಪಡೆಯವರೆಗೆ ವಿವಿಧ ಉಪಕ್ರಮಗಳು ಮಹಿಳೆಯರ ಸಬಲೀಕರಣದತ್ತ ಗಮನ ಹರಿಸಲಾಗಿದೆ ಎಂದು ಅವರು ಹೇಳಿದರು.

ಉಜ್ವಲ ಯೋಜನೆ ಬಡ ಮನೆಗಳಿಗೆ ಗ್ಯಾಸ್ ಸಿಲಿಂಡರ್‌ಗಳಲ್ಲಿ ನಡೆಯುವ ಹೊಗೆ ಮುಕ್ತ ಅಡುಗೆಮನೆಗಳನ್ನು ತಂದರೆ, ಮುದ್ರಾ ಸಾಲಗಳು ಲಕ್ಷಾಂತರ ಮಹಿಳಾ ಉದ್ಯಮಿಗಳು ತಮ್ಮದೇ ಆದ ಕನಸುಗಳನ್ನು ನನಸಾಗಿಸಲು ಅನುವು ಮಾಡಿಕೊಟ್ಟವು. ಪ್ರಧಾನ ಮಂತ್ರಿ ಆವಾಸ್ ಯೋಜನೆಯಲ್ಲಿ ಮಹಿಳೆಯರ ಹೆಸರಿನಲ್ಲಿರುವ ಮನೆಗಳು ಸಹ ಗಮನಾರ್ಹ ಪರಿಣಾಮ ಬೀರಿವೆ ಎಂದು ಅವರು ಹೇಳಿದರು.



> ವಿಜ್ಞಾನ, ಶಿಕ್ಷಣ, ಕ್ರೀಡೆ, ನವೋದ್ಯಮಗಳು ಮತ್ತು ಸಶಸ್ತ್ರ ಪಡೆಗಳು ಸೇರಿದಂತೆ ಎಲ್ಲಾ ಕ್ಷೇತ್ರ ಗಳಲ್ಲಿ, ಮಹಿಳೆಯರು ಶ್ರೇಷ್ಠತೆ ಸಾಧಿ ಸುತ್ತಿದ್ದಾರೆ ಮತ್ತು ಹಲವಾರು ಜನರಿಗೆ ಸ್ಫೂರ್ತಿ ನೀಡುತ್ತಿದ್ದಾರೆ **-ನರೇಂದ್ರ, ಮೋದಿ,** ಪ್ರಧಾನಿ

ಬೇಟಿ ಬಚಾವೋ ಬೇಟಿ ಪಡಾವೋ (ಮಗಳನ್ನು ಉಳಿಸಿ, ಮಗಳಿಗೆ ಶಿಕ್ಷಣ ನೀಡಿ) ಕಾರ್ಯಕ್ರಮವು ಹೆಣ್ಣು ಮಗುವನ್ನು ರಕ್ಷಿಸಲು ರಾಷ್ಟ್ರೀಯ ಆಂದೋಲನವನ್ನು ಹುಟ್ಟುಹಾಕಿತು ಎಂದು ಅವರು ಹೇಳಿದರು.ಸರ್ಕಾರ ನಡೆಸುವ ಪೌರತ್ವ ನಿಶ್ಚಿತಾರ್ಥ ವೇದಿಕೆಯ ಥ್ರೆಡ್ ಅನ್ನು ಪ್ರಧಾನಿ ಹಂಚಿಕೊಂಡರು, ಇದು ಹಲವಾರು ಸರ್ಕಾರಿ ಯೋಜನೆಗಳಿಂದ ಮಹಿಳೆಯರಿಗೆ ತಂದ ಪ್ರಯೋಜನಗಳನ್ನು ಪಟ್ಟಿ ಮಾಡಿದೆ.

ತಾಯಂದಿರ ಮರಣ ಅನುಪಾತವು 2011-13 ರಲ್ಲಿ 167 ರಿಂದ 2019-21ರಲ್ಲಿ ಪ್ರತಿ ಲಕ್ಷ ಜೀವಂತ ಜನನಗಳಿಗೆ 93 ಕ್ಕೆ ಇಳಿದಿದೆ ಮತ್ತು ನಲ್ಲಿ ನೀರಿನ ಸಂಪರ್ಕ ಹೊಂದಿರುವ ಕುಟುಂಬಗಳು 2019 ರ ಆಗಸ್ಟ್‌ನಲ್ಲಿ 3.23 ಕೋಟಿಯಿಂದ ಮೇ 2025 ರಲ್ಲಿ 15.64 ಕೋಟಿಗೆ ಏರಿಕೆಯಾಗಿದೆ ಎಂದು ಅದು ಹೇಳಿದೆ.

ಉಜ್ವಲ ಯೋಜನೆಯಡಿಯಲ್ಲಿ 10 ಕೋಟಿಗೂ ಹೆಚ್ಚು ಅಡುಗೆ ಅನಿಲ ಸಂಪರ್ಕಗಳನ್ನು ನೀಡಲಾಗಿದೆ ಎಂದು ಅದು ಹೇಳಿದೆ, ಮಹಿಳೆಯರನ್ನು ಗುರಿಯಾಗಿಸಿಕೊಂಡು ಹಲವಾರು ಇತರ ಕಲ್ಯಾಣ ಕ್ರಮಗಳನ್ನು ಎತ್ತಿ ತೋರಿಸಿದೆ. ವಾರ್ಷಿಕೋತ್ಸವದ ಮುನ್ನಾದಿನದಂದು, ಬಡವರು, ರೈತರು ಮತ್ತು ಯುವಕರು ಸೇರಿದಂತೆ ಸಮಾಜದ ವಿವಿಧ ವರ್ಗಗಳಿಗೆ ತಮ್ಮ ಸರ್ಕಾರದ ಕೆಲಸವನ್ನು ಮೋದಿ ಎತ್ತಿ ತೋರಿಸುತ್ತಿದ್ದಾರೆ.

## ಗಾಜಾದಲ್ಲಿ ಒಂದು ಪ್ಯಾಕ್ ಪಾರ್ಲೆ-ಜಿ ಬಿಸ್ಕತ್ ಬೆಲೆ 2 ಸಾವಿರ

**ಗಾಜಾ:** ಭಾರತದಲ್ಲಿ ಎಲ್ಲರ ಕೈಗೆಟಕುವಂತಿರುವ ಪಾರ್ಲೆ-ಜಿ ಬಿಸ್ಕತ್ ಸಂಘರ್ಷ ಪೀಡಿತ ಗಾಜಾದಲ್ಲಿ ಐಷಾರಾಮಿ ಆಹಾರವಾಗಿ ಮಾರ್ಪಟ್ಟಿದೆ. ತೀವ್ರ ಆಹಾರ ಕೊರತೆ ಎದುರಿಸುತ್ತಿರುವ ಗಾಜಾದಲ್ಲಿ ಒಂದು ಪ್ಯಾಕ್ ಬಿಸ್ಕತ್ 24 ಯುರೊಗೆ ಮಾರಾಟವಾಗುತ್ತಿದೆ. ಇದು ಭಾರತದಲ್ಲಿನ ಬೆಲೆಗಿಂತ 500 ಪಟ್ಟು ಹೆಚ್ಚು ಎಂದು ಟ್ರಿಬ್ಯೂನ್ ವೆಬ್‌ಸೈಟ್ ವರದಿ ತಿಳಿಸಿದೆ.

ಸಾಮಾಜಿಕ ಜಾಲತಾಣದಲ್ಲಿ ಮೊಹಮ್ಮದ್ ಜವಾದ್ ಎನ್ನುವ ವ್ಯಕ್ತಿ ಜೂ.1ರಂದು ವೀಡಿಯೋವೊಂದನ್ನು ಹಂಚಿಕೊಂಡು ಗಾಜಾದಲ್ಲಿ ಆಹಾರದ ಕೊರತೆ ಎಷ್ಟರಮಟ್ಟಿಗೆ ಇದೆ ಎನ್ನುವುದನ್ನು ಹೇಳಿದ್ದರು.

ಮೊಹಮ್ಮದ್ ಅವರು ಮಗಳು ಪಾರ್ಲೆ-ಜಿ ಬಿಸ್ಕತ್ತನ್ನು ಹಿಡಿದು ಖುಷಿಯಲ್ಲಿರುವ ವಿಡೀಯೋವನ್ನು ಹಂಚಿಕೊಂಡು 'ಹಲವು ದಿನಗಳ ಬಳಿಕ ನನ್ನ ಮಗಳು ರಫೀಫ್ ಅವಳ ಇಷ್ಟದ ಬಿಸ್ಕತ್ತನ್ನು ಪಡೆದಿದ್ದಾಳೆ. ಬಿಸ್ಕತ್ತಿನ ಬೆಲೆ 1.5 ಯುರೊದಿಂದ 24 ಯುರೊಗೆ ಏರಿಕೆಯಾದರೂ ಅವಳ ಬೇಡಿಕೆಯನ್ನು ನಿರಾಕರಿಸಲು ಮನಸ್ಸಾಗಲಿಲ್ಲ' ಎಂದು ಬರೆದುಕೊಂಡಿದ್ದಾರೆ.

## ಜನರಿಂದ ತಿರಸ್ಕರಿಸಲ್ಪಟ್ಟರು ಜನಾದೇಶ ತಿರಸ್ಕರಿಸುತ್ತಿದ್ದಾರೆ

**ಮುಂಬೈ:** ಮಹಾರಾಷ್ಟ್ರ ವಿಧಾನಸಭಾ ಚುನಾವಣೆಯಲ್ಲಿ ಮ್ಯಾಚ್ ಫಿಕ್ಸಿಂಗ್ ನಡೆದಿದೆ ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಮಾಡಿರುವ ಆರೋಪಕ್ಕೆ ಪ್ರತಿಕ್ರಿಯಿಸಿರುವ ಮಹಾರಾಷ್ಟ್ರದ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಅವರು, ಸಾರ್ವಜನಿಕರಿಂದ ತಿರಸ್ಕರಿಸಲ್ಪಟ್ಟವರು ಜನಾದೇಶ ವನ್ನು ಧಿಕ್ಕರಿಸುತ್ತಾರೆ ಎಂದು ತಿರುಗೇಟು ನೀಡಿದ್ದಾರೆ.

ಜನರ ಮನವೊಲಿಸಲು ಸಾಧ್ಯವಾಗದಿದ್ದರೆ, ಅವರನ್ನು ಗೊಂದಲಗೊಳಿಸುವುದು ರಾಹುಲ್ ಗಾಂಧಿ ಅಳವಡಿಸಿ ಕೊಂಡಿರುವ ನೀತಿಯಾಗಿದೆ ಎಂದು ಫಡ್ನವೀಸ್ ಮರಾಠಿ ದೈನಿಕವೊಂದರಲ್ಲಿ ಉಲ್ಲೇಖಿಸಿದ್ದಾರೆ. ಕಾಂಗ್ರೆಸ್ ಅನ್ನು ಜನರು ತಿರಸ್ಕರಿಸಿದ್ದಾರೆ, ಅದಕ್ಕಾಗಿಯೇ ಅವರು ಈಗ ಎಲೆಕ್ಟ್ರಾನಿಕ್ ವೋಟಿಂಗ್ ಮೆಷಿನ್ (ಇವಿಎಂ) ಅನ್ನು ದೂಷಿಸುವ ಮೂಲಕ ಪ್ರಜಾಪ್ರಭುತ್ವದ ಪ್ರತಿಷ್ಠೆಯನ್ನು ಹಾಳು ಮಾಡುತ್ತಿದ್ದಾರೆ ಎಂದು ದೂರಿದರು. ಮಹಾರಾಷ್ಟ್ರದಲ್ಲಿ ನಡೆಯುವ ಪ್ರತಿಯೊಂದು ಚುನಾವಣೆಯಲ್ಲೂ ವಿರೋಧ ಪಕ್ಷಗಳು ಇವಿಎಂ ಬಗ್ಗೆ ಪ್ರಶ್ನೆಗಳನ್ನು ಎತ್ತುವುದು ಈಗ ಅಭ್ಯಾಸವಾಗಿಬಿಟ್ಟಿದೆ. ಇವಿಎಂ ವಿರುದ್ಧದ ಎಲ್ಲಾ ಅರ್ಜಿಗಳನ್ನು ಸುಪ್ರೀಂಕೋರ್ಟ್ ವಜಾಗೊಳಿಸಿದೆ. ಕಾಂಗ್ರೆಸ್ ಸರ್ಕಾರ ಗೆಲ್ಲುವ ಚುನಾವಣೆಗಳಲ್ಲಿ ಇವಿಎಂಗಳು ಸರಿಯಾಗಿವೆಯೇ? ಎಂದು ಅವರು ಪ್ರಶ್ನೆ ಮಾಡಿದ್ದಾರೆ.

ಜನರೇ ಜನಾದೇಶವನ್ನು ಗೌರವಿಸಿ. ಸಾರ್ವಜನಿಕರು ಎಲ್ಲರನ್ನೂ ಗಮನಿಸುತ್ತಿದ್ದಾರೆ. ಈಗ ನೆಪಗಳು ಕೆಲಸ ಮಾಡುವುದಿಲ್ಲ ಎಂದು ಅವರು ಸಲಹೆ ಮಾಡಿದ್ದಾರೆ.

ಕಾಂಗ್ರೆಸ್, ಎನ್‌ಸಿಪಿಯ ಶರದ್ ಪವಾರ್ ಬಣ ಮತ್ತು ಮಹಾ ವಿಕಾಸ್ ಅಘಾಡಿ ಎಂದು ಕರೆಯಲ್ಪಡುವ ಉದ್ಧವ್ ಠಾಕ್ರೆ ಅವರ ಶಿವಸೇನೆ ನಡುವಿನ ಮೈತ್ರಿ, ನವೆಂಬರ್ 20ರ ಚುನಾವಣೆಯಲ್ಲಿ ರಾಜ್ಯದ 288 ವಿಧಾನಸಭಾ ಸ್ಥಾನಗಳಲ್ಲಿ ಕೇವಲ 46 ಸ್ಥಾನಗಳನ್ನು ಗೆಲ್ಲುವಲ್ಲಿ ಯಶಸ್ವಿಯಾಯಿತು.

**ರಾಹುಲಗೆ ಫಡ್ನವೀಸ್ ತಿರುಗೇಟು**



# ತಮಿಳುನಾಡಿನಲ್ಲಿ ಚುನಾವಣಾ ಚಾಣಾಕ್ಷ ಅಮಿತ್ ಶಾ

**ಮಧುರೈ:** ಮುಂಬರುವ ತಮಿಳುನಾಡು ಚುನಾವಣೆಯಲ್ಲಿ ಬಿಜೆಪಿ ಪಕ್ಷವನ್ನು ಬಲವರ್ಧನೆಗೊಳಿಸುವ ಉದ್ದೇಶದಿಂದ ಕೇಂದ್ರ ಗೃಹ ಸಚಿವ ಮತ್ತು ಬಿಜೆಪಿ ನಾಯಕ ಅಮಿತ್ ಶಾ ತಡರಾತ್ರಿ ಇಲ್ಲಿಗೆ ಆಗಮಿಸಿದರು. ಕಳೆದ 2 ತಿಂಗಳಲ್ಲಿ ತಮಿಳುನಾಡಿಗೆ ಅವರ ಎರಡನೇ ನಿರ್ಣಾಯಕ ಭೇಟಿ ಇದಾಗಿದೆ. 2026 ರ ವಿಧಾನಸಭಾ ಚುನಾವಣೆಗೆ ಮುಂಚಿತವಾಗಿ ಪಕ್ಷದ ಯಂತ್ರೋಪಕರಣಗಳನ್ನು ಪುನರುಜ್ಜೀವನಗೊಳಿಸಲು ಅವರು ಈ ಭೇಟಿ ನೀಡಿದ್ದಾರೆ. ಆಡಳಿತ ಡಿಎಂಕೆ ಇಲ್ಲಿ ತನ್ನ ನಿರ್ಣಾಯಕ ಸಾಮಾನ್ಯ ಮಂಡಳಿ ಸಭೆಯನ್ನು ನಡೆಸಿ ಕೇಂದ್ರವನ್ನು ಖಂಡಿಸುವ ನಿರ್ಣಯಗಳನ್ನು ಅಂಗೀಕರಿಸಿದ ನಿಖರವಾಗಿ ಒಂದು ವಾರದ ನಂತರ ಅವರ ಭೇಟಿ ಸಾಕಾರಗೊಂಡಿದೆ.

ಬಿಜೆಪಿಯ ಮಿತ್ರಪಕ್ಷವಾದ ಪಿಎಂಕೆಯಲ್ಲಿ ತಂದೆ-ಮಗ ಜೋಡಿಯ ನಡುವೆ ನಾಯಕತ್ವಕ್ಕಾಗಿ ಜಗಳ ನಡೆದ ಹಿನ್ನೆಲೆಯಲ್ಲಿ ಮತ್ತು ಏಪ್ರಿಲ್ 10 ರಂದು ಚೆನ್ನೈಗೆ ಭೇಟಿ ನೀಡಿದ ಸಂದರ್ಭದಲ್ಲಿ ಶಾ ಅವರೊಂದಿಗೆ ಮೈತ್ರಿ ಮಾಡಿಕೊಂಡ ವಿರೋಧ ಪಕ್ಷದ ಎಐಎಡಿಎಂಕೆಯ ಮಿತ್ರಪಕ್ಷವಾದ ಡಿಎಂಡಿಕೆ, 2024 ರಲ್ಲಿ



ಎಐಎಡಿಎಂಕೆ ಭರವಸೆ ನೀಡಿದಂತೆ ರಾಜ್ಯಸಭಾ ಸ್ಥಾನವನ್ನು (ಡಿಎಂಡಿಕೆ) ನೀಡದಿದ್ದಕ್ಕಾಗಿ ವ್ಯಕ್ತಪಡಿಸಿದ ಅಸಮಾಧಾನದ ನಡುವೆಯೂ ಇದು ಸಂಭವಿಸಿದೆ.

ಇದಲ್ಲದೆ, ಮಾಜಿ ಮುಖ್ಯಮಂತ್ರಿ ಮತ್ತು ಉಚ್ಚಾಟಿತ ಎಐಎಡಿಎಂಕೆ ನಾಯಕ ಓ ಪನೀರ್‌ಸೆಲ್ವಂ ಇತ್ತೀಚೆಗೆ ಚೆನ್ನೈ ಭೇಟಿಯ ಸಮಯದಲ್ಲಿ ಶಾ ಅವರನ್ನು ಭೇಟಿ ಮಾಡದಿದ್ದಕ್ಕಾಗಿ ವಿಷಾದ ವ್ಯಕ್ತಪಡಿಸಿದ್ದರು. ಟಿ ಟಿ ವಿ ದಿನಕರನ್ ಅವರಂತಹ ನಿಲುವು, ಅವರು ಅಂಚಿನ ಪಕ್ಷದ ನಾಯಕರಾಗಿದ್ದರೂ, ಬಿಜೆಪಿಯ ಎನ್‌ಡಿಎಗೆ ಅವರ ಬೆಂಬಲದ ಬಗ್ಗೆ ಇನ್ನೂ ಸ್ಪಷ್ಟವಾಗಿಲ್ಲ.

## ಅಮೆರಿಕ ಪ್ರಜೆಗಳಿಗೆ ಚಾಡ್ ದೇಶದ ವೀಸಾ ಇಲ್ಲ

**ಚಾಡ್:** ತಮ್ಮ ದೇಶವು ಅಮೆರಿಕದ ಪ್ರಜೆಗಳಿಗೆ ವೀಸಾ ನೀಡುವುದನ್ನು ನಿಲ್ಲಿಸಿದೆ ಎಂದು ಚಾಡ್ ಅಧ್ಯಕ್ಷ ಮಹಮದ್ ಇದ್ರಿಸ್ ಡೆಬಿ ಅವರು ಘೋಷಿಸಿದ್ದಾರೆ. ಚಾಡ್‌ನ ನಾಗರಿಕರು ಅಮೆರಿಕಕ್ಕೆ ಭೇಟಿ ನೀಡುವುದನ್ನು ನಿಷೇಧಿಸುವ ಡೊನಾಲ್ಡ್ ಟ್ರಂಪ್ ಆಡಳಿತದ ನಿರ್ಧಾರಕ್ಕೆ ಪ್ರತಿಕ್ರಿಯೆಯಾಗಿ, ಅವರು ಈ ನಿರ್ಧಾರ ತೆಗೆದುಕೊಂಡಿದ್ದಾರೆ. ಕ್ರಿಯೆಗೆ ತಕ್ಕ ಪ್ರತಿಕ್ರಿಯೆಯಾಗಿ ಅಮೆರಿಕದ ನಾಗರಿಕರಿಗೆ ವೀಸಾ ನೀಡುವುದನ್ನು ಸ್ಥಗಿತಗೊಳಿಸುವಂತೆ ನಮ್ಮ ಸರ್ಕಾರಕ್ಕೆ ನಿರ್ದೇಶನ ನೀಡಿದ್ದೇನೆ ಎಂದು ಚಾಡ್ ಅಧ್ಯಕ್ಷರು ತಮ್ಮ ಫೇಸ್‌ಬುಕ್ ಖಾತೆಯಲ್ಲಿ ಬರೆದುಕೊಂಡಿದ್ದಾರೆ.

ಅಮೆರಿಕಕ್ಕೆ ನೀಡಲು ಚಾಡ್ ಬಳಿ ವಿಮಾನ ಅಥವಾ ಶತಕೋಟಿ ಡಾಲರ್‌ಗಳಿಲ್ಲ. ಆದರೆ, ಚಾಡ್‌ಗೆ ತನ್ನದೇ ಆದ ಘನತೆ ಇದೆ' ಎಂದು ಡೆಬಿ ಹೇಳಿದ್ದಾರೆ. ಟ್ರಂಪ್ ಅವರಿಗೆ ಕತಾರ್ ಐಷಾರಾಮಿ ವಿಮಾನವನ್ನು ಉಡುಗೊರೆಯಾಗಿ ನೀಡಿರುವುದನ್ನು ಉಲ್ಲೇಖಿಸಿ ಅವರು ಹೀಗೆ ಹೇಳಿದ್ದಾರೆ.

## ನಾಯಿ ಬಾಯಲ್ಲಿತ್ತು ನವಜಾತ ಶಿಶುವಿನ ಶವ

**ಮಹೌ:** ನಾಯಿಯೊಂದು ನವಜಾತ ಶಿಶುವಿನ ಶವವನ್ನು ಬಾಯಲ್ಲಿಟ್ಟುಕೊಂಡು ಓಡಾಡಿರುವ ಘಟನೆ ಮಧ್ಯಪ್ರದೇಶದ ಇಂದೋರ್ ಜಿಲ್ಲೆಯ ಸರ್ಕಾರಿ ಆಸ್ಪತ್ರೆಯಲ್ಲಿ ನಡೆದಿದೆ.ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಿರುವ ಪೊಲೀಸರು ತನಿಖೆ ಆರಂಭಿಸಿದ್ದಾರೆ.

ಆಸ್ಪತ್ರೆ ಶೌಚಾಲಯದ ಬಳಿ ಬೀದಿ ನಾಯಿಯೊಂದು ಸತ್ತ ನವಜಾತ ಶಿಶುವನ್ನು ದವಡೆಯಲ್ಲಿ ಹಿಡಿದುಕೊಂಡಿರುವುದು ಕಂಡುಬಂದಿದ್ದು, ಪೊಲೀಸರು ಈ ಬಗ್ಗೆ ತನಿಖೆ ಆರಂಭಿಸಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಜಿಲ್ಲಾ ಕೇಂದ್ರ ಕಚೇರಿಯಿಂದ 25 ಕಿ.ಮೀ ದೂರದಲ್ಲಿರುವ ಮಹೌದಲ್ಲಿನ ನಾಗರಿಕ ಆಸ್ಪತ್ರೆಯಲ್ಲಿ ಈ ಘಟನೆ ನಡೆದಿದ್ದು, ಭದ್ರತಾ ಸಿಬ್ಬಂದಿಯೊಬ್ಬರು ನಾಯಿಯನ್ನು ಓಡಿಸಿ ಶವವನ್ನು ಹೊರತೆಗೆಯುವಲ್ಲಿ ಯಶಸ್ವಿಯಾಗಿದ್ದಾರೆ. ಮೂಲಗಳ ಪ್ರಕಾರ, ಮಗುವಿನ ದೇಹವನ್ನು ನಾಯಿಗಳು ಭಾಗಶಃ ತಿಂದು ಹಾಕಿವೆ.ನವಜಾತ ಶಿಶುವಿನ ಪೂರ್ವಾಪರಗಳು ಮತ್ತು ನಂತರದ ಘಟನೆಗಳ ಸರಮಾಲೆಯ ಬಗ್ಗೆ ಆಸ್ಪತ್ರೆ ಅಧಿಕಾರಿಗಳು ಮತ್ತು ಪೊಲೀಸರು ತನಿಖೆ ಆರಂಭಿಸಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಸಿಸಿಟಿವಿ ದೃಶ್ಯಗಳ ಪ್ರಕಾರ, ಈ ಘಟನೆ ಬೆಳಗಿನ ಜಾವ 1.30 ರಿಂದ 2 ಗಂಟೆಯ ನಡುವೆ ನಡೆದಿದೆ. ಈ ಅವಧಿಯಲ್ಲಿ ಒಬ್ಬ ಯುವತಿಯು ಶೌಚಾಲಯಕ್ಕೆ ಹೋಗುತ್ತಿರುವುದು ಕಂಡುಬಂದಿದೆ.



ನಾವು ಸಿಬ್ಬಂದಿಯನ್ನು ಪರಿಶೀಲಿಸಿದಾಗ, 17 ವರ್ಷದ ಬಾಲಕಿ ಹೊಟ್ಟೆ ಉದರುವಿಕೆಯಿಂದ ಬಳಲುತ್ತಿರುವುದಾಗಿ ದೂರು ನೀಡಿ ಇಲ್ಲಿಗೆ ಬಂದಿದ್ದು, ರಾತ್ರಿ 9 ಗಂಟೆಗೆ ದಾಖಲಾಗಿದ್ದಳು. ಬಾಲಕಿ ಶೌಚಾಲಯದಲ್ಲಿ ಮಗುವಿಗೆ ಜನ್ಮ ನೀಡಿದ್ದಾಳೆ ಎಂದು ನಾವು ಅನುಮಾನಿಸುತ್ತೇವೆ ಎಂದು ಮಾವ್ ಸಿವಿಲ್ ಆಸ್ಪತ್ರೆಯ ಉಸ್ತುವಾರಿ ಡಾ.ಎಚ್.ಆರ್. ವರ್ಮಾ ಪಿಟಿಐಗೆ ತಿಳಿಸಿದ್ದಾರೆ.

ಬಾಲಕಿ ಸ್ವಲ್ಪ ಸಮಯದ ನಂತರ ಆಸ್ಪತ್ರೆಯಿಂದ ಅಪರಿಚಿತ ವ್ಯಕ್ತಿಯೊಂದಿಗೆ ಕಣ್ಮರೆಯಾದಳು ಎಂದು ಅವರು ಹೇಳಿದರು.

ಭದ್ರತಾ ಸಿಬ್ಬಂದಿ ಶವವನ್ನು ಹೊರತೆಗೆಯುವ ಮೊದಲು, ಮಗುವನ್ನು ಶೌಚಾಲಯ ಪ್ರದೇಶದಿಂದ ನಾಯಿಯೊಂದು ತೆಗೆದುಕೊಂಡು ಹೋಗಿದೆ ಎಂದು ಕೆಲವು ಅಧಿಕಾರಿಗಳು ತಿಳಿಸಿದ್ದಾರೆ.

● ಪೆಟ್ರೋಲ್ ಸುರಿದುಕೊಂಡು ಯುವಕರ ಪ್ರತಿಭಟನೆ, ಕರ್ಫ್ಯೂ ಜಾರಿ, ಇಂಟರ್ನೆಟ್ ಸೇವೆ ಸ್ಥಗಿತ


# ಮಣಿಪುರದಲ್ಲಿ ಮತ್ತೆ ಭುಗಿಲೆದ್ದ ಜನಾಂಗೀಯ ಹಿಂಸಾಚಾರ, ಪ್ರತಿಭಟನೆ

**ಇಂಫಾಲ್:** ಮಣಿಪುರದಲ್ಲಿ ಮತ್ತೆ ಹಿಂಸಾಚಾರ ಭುಗಿಲೆದ್ದಿದೆ. ಮೈಥೇಯಿ ಮತ್ತು ಕುಕಿ ಸಮುದಾಯಗಳ ನಡುವೆ ಉಂಟಾಗಿರುವ ಉದ್ವಿಗ್ನ ಪರಿಸ್ಥಿತಿ ನಿಭಾಯಿಸಲು ಸರ್ಕಾರ ಕರ್ಫ್ಯೂ ಜಾರಿ ಮಾಡಿ, ಇಂಟರ್ನೆಟ್ ಸೇವೆಗಳನ್ನು ಸ್ಥಗಿತಗೊಳಿಸಿರುವುದು ಜನರಿಗೆ ತೊಂದರೆಯನ್ನುಂಟು ಮಾಡಿದೆ. ಕೆಲವರು ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆಗೆ ಯತ್ನಿಸಿದ್ದಾರೆ.

ಹಿಂಸಾಚಾರದಲ್ಲಿ ಭಾಗಿಯಾಗಿದ್ದಾರೆ ಎಂಬ ಆರೋಪದ ಮೇಲೆ ಅರಾಂಬೈ ಟೆಂಗೋಲ್ (ಎಟಿ) ಸಂಘಟನೆಯ ನಾಯಕ ಕಾನನ್ ಸಿಂಗ್‌ನನ್ನು ಪೊಲೀಸರು ಬಂಧಿಸಿದರು. ಇದರಿಂದ ರೊಚ್ಚಿಗೆದ್ದ ಯುವಜನತೆ ಪ್ರತಿಭಟನೆ ನಡೆಸಿದ್ದಾರೆ.

ಪ್ರತಿಭಟನಾಕಾರರು ತಮ್ಮ ಮೇಲೆ ಪೆಟ್ರೋಲ್ ಸುರಿದುಕೊಂಡು ಬೆಂಕಿ ಹಚ್ಚಿಕೊಳ್ಳಲು ಯತ್ನಿಸಿದ್ದಾರೆ. ಈ ಘಟನೆಗೆ ಸಂಬಂಧಿಸಿದ ವೀಡಿಯೋಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿವೆ. ತಲೆ ಮೇಲೆ ಪೆಟ್ರೋಲ್ ಸುರಿದುಕೊಂಡು ಬೆಂಕಿ ಹಚ್ಚಿಕೊಳ್ಳುವುದಾಗಿ ಬೆದರಿಕೆ ಹಾಕಿದ್ದಾರೆ. ಪ್ರತಿಭಟನೆಯಲ್ಲಿ ಟೈರ್‌ಗಳನ್ನು ಸುಟ್ಟು ಹಾಕಿದ್ದಾರೆ. ಗಾಳಿಯಲ್ಲಿ ಗುಂಡು ಹಾರಿಸಿದ್ದಾರೆ ಎಂದು ಆರೋಪಿಸಲಾಗಿದೆ.

ಆರಂಬೈ ತೆಂಗೋಲ್ ಸಂಘಟನೆಯ ನಾಯಕ ಕಾನನ್ ಸಿಂಗ್ ಈ ಹಿಂದೆ ಪೊಲೀಸ್ ಕಾನ್ಸ್‌ಟೇಬಲ್ ಆಗಿದ್ದನು. 2024ರಲ್ಲಿ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಮೊಯಿರಾಂಗ್ದೆಮ್ ಅಮಿತ್ ಅವರ ಮನೆ ಮೇಲೆ ದಾಳಿ ನಡೆದಾಗ ಕಾನನ್ ಸಿಂಗ್ ಭಾಗಿಯಾಗಿದ್ದನು. ಹಿರಿಯ ಪೊಲೀಸ್ ಅಧಿಕಾರಿಯ ಅಪಹರಣ ಪ್ರಕರಣದಲ್ಲೂ ಆತನ ಕೈವಾಡವಿತ್ತು ಎಂದು ಹೇಳಲಾಗಿದೆ. ಈ ಕಾರಣಕ್ಕೆ ಅವನನ್ನು ಕೆಲಸದಿಂದ ತೆಗೆದು ಹಾಕಲಾಗಿತ್ತು. ನಂತರ ಅವನು 'ಅರಾಂಬೈ ಟೆಂಗೋಲ್' ಸಂಘಟನೆಗೆ ಸೇರಿದನು.



- ಮಣಿಪುರದಲ್ಲಿ ಮತ್ತೆ ಭುಗಿಲೆದ್ದ ಜನಾಂಗೀಯ ಹಿಂಸಾಚಾರ, ಪ್ರತಿಭಟನೆ
- ರಾಷ್ಟ್ರಪತಿ ಆಳ್ವಿಕೆಯ ಸರ್ಕಾರದಿಂದ ಕರ್ಫ್ಯೂ ಜಾರಿ, ಇಂಟರ್ನೆಟ್ ಸೇವೆ ಸ್ಥಗಿತ
- ಪೆಟ್ರೋಲ್ ತಂದು ತಮ್ಮ ಮೇಲೆ ಸುರಿದುಕೊಂಡು ಯುವಕರ ಪ್ರತಿಭಟನೆ
- ಆರಂಬೈ ತೆಂಗೋಲ್ ಸಂಘಟನೆಯ ನಾಯಕ ರಿಲೀಸ್‌ಗೆ ಒತ್ತಾಯ

ಇಂಟರ್ನೆಟ್ ಸ್ಥಗಿತಗೊಳಿಸಿರುವುದರಿಂದ ಜನರಿಗೆ ಮಾಹಿತಿ ಪಡೆಯಲು ಕಷ್ಟವಾಗುತ್ತಿದೆ. ಆನ್‌ಲೈನ್ ವಹಿವಾಟುಗಳು ಸ್ಥಗಿತಗೊಂಡಿವೆ. ವಿದ್ಯಾರ್ಥಿಗಳು ಮತ್ತು ಉದ್ಯೋಗಿಗಳು ತೊಂದರೆ ಅನುಭವಿಸುತ್ತಿದ್ದಾರೆ. ನಿಷೇಧಾಜ್ಞೆ ಜಾರಿಯಲ್ಲಿರುವುದರಿಂದ ಜನರು ಮನೆಯಿಂದ ಹೊರಬರಲು ಸಾಧ್ಯವಾಗುತ್ತಿಲ್ಲ. ದಿನಗೂಲಿ ನೌಕರರು ಕೆಲಸವಿಲ್ಲದೆ ಪರದಾಡುವಂತಾಗಿದೆ.

ಬಿಜೆಪಿ ರಾಜ್ಯಸಭಾ ಸಂಸದ ಲೀಶೆಂಬಾ ಸನಜೋಬಾ ಅವರು ಭದ್ರತಾ ಸಿಬ್ಬಂದಿಯೊಂದಿಗೆ ಮಾತನಾಡುತ್ತಿರುವ ವಿಡಿಯೊ ವೈರಲ್ ಆಗಿದೆ. ನಾವು ಶಾಂತಿ ತರಲು ತುಂಬಾ ಪ್ರಯತ್ನಿಸಿದೆವು. ನೀವು ಇಂತಹ ಕೆಲಸಗಳನ್ನು ಮಾಡಿದರೆ, ಶಾಂತಿ ಹೇಗೆ ನೆಲೆಸುತ್ತದೆ ನನ್ನೊಂದಿಗೆ ಇರುವ ಶಾಸಕರೊಂದಿಗೆ ನನ್ನನ್ನೂ ಬಂಧಿಸಿ ಎಂದು ಹೇಳುತ್ತಿರುವುದು ವಿಡಿಯೊದಲ್ಲಿ ಕೇಳಿಸುತ್ತದೆ.

**ಹಿಂಸಾಚಾರದಲ್ಲಿ ಇಲ್ಲಿಯವರೆಗೆ 260ಕ್ಕೂ ಹೆಚ್ಚು ಸಾವು:** ಕಳೆದ ಮೂರು ವರ್ಷಗಳಿಂದಲೂ ಮೈತೇಯಿ ಮತ್ತು ಕುಕಿ-ಜೋ ಸಮುದಾಯಗಳ ನಡುವಿನ ಜನಾಂಗೀಯ ಸಂಘರ್ಷ ಭುಗಿ ಲೆದ್ದಿದೆ. ಹಿಂಸಾಚಾರದಲ್ಲಿ ಇಲ್ಲಿಯ ವರೆಗೆ 260ಕ್ಕೂ ಹೆಚ್ಚು ಜನರು ಉಸಿರು ಚೆಲ್ಲಿದ್ದಾರೆ. 5,600 ಕ್ಕೂ ಹೆಚ್ಚು ಸರ್ಕಾರಿ ಶಸ್ತ್ರಾಸ್ತ್ರಗಳು ಮತ್ತು 6.5 ಲಕ್ಷ ಸುತ್ತು ಮದ್ದುಗುಂಡುಗಳನ್ನು ಲೂಟಿ ಮಾಡಲಾಗಿದೆ. 60,000 ಕ್ಕೂ ಹೆಚ್ಚು ಜನರು ಸ್ಥಳಾಂತರಗೊಂಡಿದ್ದಾರೆ ಮತ್ತು ಸಾವಿರಾರು ಜನರು ಇನ್ನೂ ಪರಿಹಾರ ಶಿಬಿರಗಳಲ್ಲಿ ವಾಸಿಸುತ್ತಿದ್ದಾರೆ.

### ಇಂಟರ್ನೆಟ್ ಸ್ಥಗಿತ

ಬಿಷ್ಣುಪುರ ಜಿಲ್ಲೆಯ ಇಂಫಾಲ್ ಪೂರ್ವ, ಇಂಫಾಲ್ ಪಶ್ಚಿಮ, ಥೌಬಲ್ ಮತ್ತು ಕಾಕ್ಚಿಂಗ್ ಜಿಲ್ಲೆಗಳಲ್ಲಿ ನಿಷೇಧಾಜ್ಞೆ ಜಾರಿ ಮಾಡಲಾಗಿದೆ. ಇಂಫಾಲ್ ಪೂರ್ವ, ಇಂಫಾಲ್ ಪಶ್ಚಿಮ, ಥೌಬಲ್, ಕಾಕ್ಚಿಂಗ್ ಮತ್ತು ಬಿಷ್ಣುಪುರ ಜಿಲ್ಲೆಗಳಲ್ಲಿ ಐದು ದಿನಗಳ ಕಾಲ ಇಂಟರ್ನೆಟ್ ಸೇವೆಗಳನ್ನು ಸ್ಥಗಿತಗೊಳಿಸಲಾಗಿದೆ.

### ನಿಷೇಧಾಜ್ಞೆ ಜಾರಿ

ಪ್ರತಿಭಟನಾಕಾರರು ಟೈರ್‌ಗಳಿಗೆ ಬೆಂಕಿ ಹಚ್ಚಿ, ರಸ್ತೆ ತಡೆದು, ವಿಮಾನ ನಿಲ್ದಾಣಕ್ಕೆ ಮುತ್ತಿಗೆ ಹಾಕಿದರು. ಬಂಧಿತ ನಾಯಕನನ್ನು ರಾಜ್ಯದಿಂದ ಹೊರಗೆ ಸಾಗಿಸಲಾಗುವುದು ಎಂಬ ವದಂತಿ ಹಬ್ಬಿದ ಹಿನ್ನೆಲೆ, ಪ್ರತಿಭಟನಾಕಾರರು ಇಂಫಾಲ್ ವಿಮಾನ ನಿಲ್ದಾಣದ ಬಳಿ ಜಮಾಯಿಸಿದ್ದರು. ವಿಮಾನ ನಿಲ್ದಾಣದ ರಸ್ತೆಯನ್ನು ತಡೆದು ರಾತ್ರಿಯಿಡೀ ಅಲ್ಲೇ ಮಲಗಿದ್ದರು.

### ಪೆಟ್ರೋಲ್ ಸುರಿದುಕೊಂಡು ಬೆದರಿಕೆ


ಸದ್ಯ ವೈರಲ್ ಆಗಿರುವ ವಿಡಿಯೋದಲ್ಲಿ ಕಪ್ಪು ಬಟ್ಟೆ ಧರಿಸಿದ ಯುವಕರ ಗುಂಪು ಪೆಟ್ರೋಲ್ ತಂದು ತಮ್ಮ ಮೇಲೆ ಸುರಿದುಕೊಳ್ಳುತ್ತಿರುವುದು ಕಾಣಿಸುತ್ತದೆ. ಈ ವೇಳೆ ಓರ್ವ ಯುವಕ ಹೀಗೆ ಹೇಳುತ್ತಾನೆ, ನಾವು ಶಸ್ತ್ರಾಸ್ತ್ರಗಳನ್ನು ತ್ಯಜಿಸಿದ್ದೇವೆ. ಪ್ರವಾಹದ ಸಮಯದಲ್ಲಿ ಆಡಳಿತ ಮಾಡಬೇಕಿದ್ದ ಕೆಲಸಗಳನ್ನು ನಾವು ಮಾಡಿದ್ದೇವೆ.

## ಶುಭಾಂಶು ಶುಕ್ಲಾ ಬಾಹ್ಯಾಕಾಶ ಪ್ರಯಾಣಕ್ಕೆ ಕ್ಷಣಗಣನೆ

**ನವದೆಹಲಿ:** ಭಾರತೀಯ ವಾಯುಪಡೆಯ ಮತ್ತೊಬ್ಬ ಪೈಲಟ್ ಗಗನಯಾತ್ರೆ ಪ್ರಯಾಣಕ್ಕೆ ಕ್ಷಣಗಣನೆ ಆರಂಭವಾಗಿದೆ. ಜೂ.10 ರಂದು ಜಿಪಿ ಕ್ಯಾಪ್ಟನ್ ಶುಭಾಂಶು ಶುಕ್ಲಾ ಬಾಹ್ಯಾಕಾಶಕ್ಕೆ ತಮ್ಮ ಪ್ರಯಾಣ ಬೆಳೆಸಲಿದ್ದಾರೆ. ಅಂದು ಡ್ಯಾಗನ್ ಬಾಹ್ಯಾಕಾಶ ನೌಕೆಯನ್ನು ಪೈಲಟ್ ಮಾಡುವ ಮೂಲಕ ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ಉಡಾವಣೆ ಮಾಡಲಿದ್ದಾರೆ.

ಆದರೆ ಗಗನಯಾತ್ರಿಯಾಗುವ ಮೊದಲು, ಅವರು ಅತ್ಯುತ್ತಮ ಯುದ್ಧ ವಿಮಾನ ಪೈಲಟ್ ಮತ್ತು ಪರೀಕ್ಷಾ ಪೈಲಟ್ ಆಗಿದ್ದು, ಇದುವರೆಗೆ ಹಾರಿಸದ ವಿಮಾನಗಳನ್ನು ಅವುಗಳ ಮಿತಿಗಳಿಗೆ ಬದ್ಧರಾಗಿದ್ದಾರೆ. ಶುಭಾಂಶು ಶುಕ್ಲಾ ಅವರಿಗೆ ಪ್ರಧಾನಿ ನರೇಂದ್ರ, ಮೋದಿ ಅವರು ಗಗನಯಾತ್ರಿ ರೆಕ್ಕೆಗಳನ್ನು ನೀಡಿದರು.

ಯುದ್ಧ ಪರೀಕ್ಷಾ ಪೈಲಟ್ ಆಗಿ ಅವರ ಹಿಂದಿನ ಜೀವನವು ಅವರನ್ನು ಬಾಹ್ಯಾಕಾಶ ನಿಲ್ದಾಣಕ್ಕೆ ಭಾರತದ ಮೊದಲ ಗಗನಯಾತ್ರಿಯಾಗಲು ಹೇಗೆ ಸಿದ್ಧಪಡಿಸಿತು ಎಂಬುದನ್ನು ನಾವು ನೋಡುತ್ತೇವೆ. ಭಾರತೀಯ ವಾಯುಪಡೆಯಲ್ಲಿ ಪರೀಕ್ಷಾ ಪೈಲಟ್ ಆಗುವುದು ಮಿಲಿಟರಿ ವಿಮಾನ ಚಾಲಕರಿಗೆ ಲಭ್ಯವಿರುವ ಅತ್ಯಂತ ಗಣ್ಯ ಮತ್ತು ಬೇಡಿಕೆಯ ಪಾತ್ರಗಳ ಒಂದಾಗಿದೆ. ಆಯ್ಕೆ ಪ್ರಕ್ರಿಯೆಯು ಕಠಿಣವಾಗಿದೆ ಮತ್ತು ಫ್ಲೈಯಿಂಗ್ ಬ್ರಾಂಚ್‌ನಿಂದ ಸೇವೆ ಸಲ್ಲಿಸುತ್ತಿರುವ ಅಧಿಕಾರಿಗಳ ಆಂತರಿಕ ಸ್ಕ್ರೀನಿಂಗ್‌ನೊಂದಿಗೆ ಪ್ರಾರಂಭವಾಗುತ್ತದೆ, ಸಾಮಾನ್ಯವಾಗಿ ಸ್ಕ್ವಾಡ್ರನ್ ಲೀಡರ್ ಶ್ರೇಣಿ ಅಥವಾ ಅದಕ್ಕಿಂತ ಹೆಚ್ಚಿನದು, ಬಲವಾದ ಕಾರ್ಯಾಚರಣೆಯ ಟ್ರ್ಯಾಕ್ ರೆಕಾರ್ಡ್ ಮತ್ತು ಕನಿಷ್ಠ 1.500 ಹಾರುವ ಗಂಟೆಗಳಿರುತ್ತದೆ. ಆದಾಗ್ಯೂ, ಪರೀಕ್ಷಾ ಪೈಲಟ್ ಆಗಲು, ಅಧಿಕಾರಿ ಮೊದಲು ಸ್ವತಃ





# ದೀಪಿಕಾ ಬಗ್ಗೆ ಹೆಚ್ಚಾಯ್ತು ಅಪಪ್ರಚಾರ

ದೀಪಿಕಾ ಪಡುಕೋಣೆ ಅವರಿಗೆ ಹೊಸ ಅವಕಾಶಗಳು ಸಿಗುವುದನ್ನು ತಪ್ಪಿಸಲು ಕೆಲವರು ಹುನ್ನಾರ ನಡೆಸಿದ್ದಾರೆ. ಆ ಕಾರಣದಿಂದಲೇ ಅವರ ಬಗ್ಗೆ ಅಪಪ್ರಚಾರ ಮಾಡಲಾಗುತ್ತಿದೆ. ಆದರೆ ಅಭಿಮಾನಿಗಳಿಗೆ ಸತ್ಯ ಏನೆಂಬುದು ತಿಳಿದಿದೆ. 'ಸ್ಪಿರಿಟ್ ಸಿನಿಮಾ ತಂಡದ ಜೊತೆ ವೈಮನಸ್ಸು ಉಂಟಾದ ಬಳಿಕ ಈ ರೀತಿಯ ಗಾಸಿಪ್‌ಗಳು ಹೆಚ್ಚಾಗಿದೆ. ಆ ಬಗ್ಗೆ ಇಲ್ಲಿದೆ ಮಾಹಿತಿ.

ನಟಿ ದೀಪಿಕಾ ಪಡುಕೋಣೆ ಮತ್ತು ನಿರ್ದೇಶಕ ಸಂದೀಪ್ ರೆಡ್ಡಿ ವಂಗ ನಡುವೆ ಕಿರಿಕ್ ಆಗಿದೆ. ಎಲ್ಲಾವೂ ಅಂದುಕೊಂಡಂತೆ ನಡೆದಿದ್ದರೆ ದೀಪಿಕಾ ಪಡುಕೋಣೆ ಅವರು ಪ್ರಭಾಸ್ ನಟನೆಯ 'ಸ್ಪಿರಿಟ್ ಸಿನಿಮಾಗೆ ನಾಯಕಿಯಾಗಿ ಆಯ್ಕೆ ಆಗಬೇಕಿತ್ತು. ಈ ಸಿನಿಮಾಗೆ ಸಂದೀಪ್ ರೆಡ್ಡಿ ವಂಗ ಅವರು ನಿರ್ದೇಶನ ಮಾಡುತ್ತಿದ್ದಾರೆ. ಇನ್ನೂ ಈ ಚಿತ್ರದ ಶೂಟಿಂಗ್ ಆರಂಭ ಆಗಿಲ್ಲ. ಅಷ್ಟರಲ್ಲಾಗಲೇ ನೆಗೆಟಿವ್ ಸುದ್ದಿಗಳು ಕೇಳಿಬರಲು ಆರಂಭಿಸಿವೆ. ಈ ಸಿನಿಮಾದಿಂದ ದೀಪಿಕಾ ಪಡುಕೋಣೆ ಹೊರನಡೆದಿದ್ದಾರೆ. ಅದರಿಂದಾಗಿ 'ಕಲ್ಕಿ 2898 ಎಡಿ ಸಿನಿಮಾದ ಸೀಕ್ವೆಲ್ ಕೂಡ ಅವರ ಕೈ ತಪ್ಪಿದೆ ಎಂದು ಕೆಲವರು ಸುಳ್ಳು ಸುದ್ದಿ ಹಬ್ಬಿಸಿದ್ದಾರೆ. ಪ್ರಭಾಸ್ ಅಭಿನಯದ 'ಕಲ್ಕಿ 2898 ಎಡಿ ಸಿನಿಮಾದಲ್ಲಿ ದೀಪಿಕಾ ಪಡುಕೋಣೆ ಅವರು ಪ್ರಮುಖ ಪಾತ್ರ ನಿಭಾಯಿಸಿದ್ದಾರೆ. ಅದರ ಸೀಕ್ವೆಲ್ ಸೆಟ್ಟೇರಲು ಇನ್ನೂ ಸಮಯ ಹಿಡಿಯಲಿದೆ. ಈಗಾಗಲೇ ದೀಪಿಕಾ ಅವರು 'ಸ್ಪಿರಿಟ್ ಸಿನಿಮಾ ತಂಡದ ಜೊತೆ ಕಿರಿಕ್ ಮಾಡಿಕೊಂಡಿದ್ದರಿಂದ ಪ್ರಭಾಸ್ ನಟನೆಯ 'ಕಲ್ಕಿ 2 ಸಿನಿಮಾ ಕೂಡ ದೀಪಿಕಾ ಕೈ ತಪ್ಪಬಹುದು ಎಂಬುದು ಗಾಸಿಮ್ ಮಂದಿಯ ಲೆಕ್ಕಾಚಾರ.



# ಶಿಲ್ಪಾ ಶೆಟ್ಟಿ ಕನ್ನಡ ಸಿನಿಮಾ ಮಾಡಿದ್ದು ಏಕೆ

ಹಿಂದಿ ನಟಿ ಶಿಲ್ಪಾ ಶೆಟ್ಟಿ ಅವರಿಗೆ ಕನ್ನಡ ಚಿತ್ರರಂಗದ ಮೇಲೆ ಅಪಾರ ಪ್ರೀತಿ ಇದೆ. ಅವರು ಕನ್ನಡ ಚಿತ್ರಗಳಲ್ಲಿ ನಟಿಸುವ ಅವಕಾಶ ಪಡೆದರು. ರವಿಚಂದ್ರನ್ ಅವರ ನಿರ್ದೇಶನದ 'ಪ್ರೀತ್ಸೋದ್ ತಪ್ಪಾ ಮತ್ತು ಇತರ ಚಿತ್ರಗಳಲ್ಲಿ ಅವರು ನಟಿಸಿದ್ದಾರೆ. ಕನ್ನಡದ ಜೊತೆಗಿನ ಅವರ ಬಾಂಧವ್ಯದ ಬಗ್ಗೆ ಇಲ್ಲಿ ಹೇಳಲಾಗಿದೆ.

**ದಕ್ಷಿಣ ಕನ್ನಡದ ದೇವಾಲಯಗಳಿಗೆ ಭೇಟಿ**

ನಟಿ ಶಿಲ್ಪಾ ಶೆಟ್ಟಿ ಬಹುಭಾಷಾ ನಟಿ. ಅವರಿಗೆ ಕನ್ನಡ ಚಿತ್ರರಂಗದ ಬಗ್ಗೆ ವಿಶೇಷ ಪ್ರೀತಿ ಇದೆ. ಅವರು ಹಿಂದಿ ನಟಿ ಆದರೂ ಕರ್ನಾಟಕಕ್ಕೆ ಆಗಾಗ ಬರುತ್ತಾರೆ. ದಕ್ಷಿಣ ಕನ್ನಡದ ದೇವಾಲಯಗಳಿಗೆ ಭೇಟಿ ನೀಡುತ್ತಾರೆ. ಅವರು ಕನ್ನಡ ಸಿನಿಮಾ ಮಾಡಲು ಕಾರಣ ಏನು ಎಂಬುದನ್ನು ಅವರು ಈ ಮೊದಲು ವಿವರಿಸಿದ್ದರು. ಆ ಬಗ್ಗೆ ಇಲ್ಲಿದೆ ಮಾಹಿತಿ.

ರವಿಚಂದ್ರನ್ ಅವರು ಶಿಲ್ಪಾನ ಕನ್ನಡಕ್ಕೆ ಕರೆತಂದಿದ್ದರು. ಆ ಬಳಿಕ ಕನ್ನಡದಲ್ಲಿ ಕೆಲವು ಸಿನಿಮಾ ಮಾಡಿದರು. ಶಿಲ್ಪಾ ಶೆಟ್ಟಿ ಅವರಿಗೆ ಜೂನ್ 8 ಜನ್ಮದಿನ. ಅವರಿಗೆ ಮಂಗಳೂರು ಹಿನ್ನೆಲೆ ಇದೆ. ಅವರ ಕುಟುಂಬ ತುಳು ಕುಟುಂಬ. ಈ ಕಾರಣಕ್ಕೆ ಅವರು ತುಳುವನ್ನು ಮಾತನಾಡ ಬಲ್ಲರು. ಅವರಿಗೆ ಕನ್ನಡ ಸಿನಿಮಾ ಮಾಡಬೇಕು ಎನ್ನುವ ಆಸೆ ಇತ್ತು. ಇದಕ್ಕೆ ರವಿಚಂದ್ರನ್ ಅವಕಾಶ ಮಾಡಿಕೊಟ್ಟರು. ರವಿಚಂದ್ರನ್ ನಿರ್ದೇಶನ ಮಾಡಿದ 'ಪ್ರೀತ್ಸೋದ್ ತಪ್ಪಾ ಸಿನಿಮಾದಲ್ಲಿ ಕ್ರೇಜಿ ಸ್ಟಾರ್ ಜೊತೆಯೇ ನಟಿಸಿದರು. ಈ ಮೊದಲು ಕನ್ನಡ ಸಿನಿಮಾ ಬಗ್ಗೆ ಶಿಲ್ಪಾ ಮಾತನಾಡಿದ್ದರು.

'ನಾನು ಕರ್ನಾಟಕ ಹುಡುಗಿ ಎಂದು ಹೇಳಲು ಹೆಮ್ಮೆ ಇದೆ. ನಾನು ಹುಟ್ಟಿ-ಬೆಳೆದಿದ್ದು ಮುಂಬೈನಲ್ಲಿ. ನನಗೆ ಬೆಂಗಳೂರ ಜೊತೆ ಒಳ್ಳೆಯ ಕನೆಕ್ಷನ್ ಇದೆ. ನಾನು ಕನ್ನಡ ಸಿನಿಮಾ ಮಾಡಿದೆ. ಇದಕ್ಕೆ ಕಾರಣ ನಾನು ಆ ಕನೆಕ್ಷನ್ ಇಟ್ಟುಕೊಳ್ಳಬೇಕಿತ್ತು. ಕನ್ನಡದವರು ತಮ್ಮ ಬಗ್ಗೆ ಹೆಮ್ಮೆ ಪಟ್ಟುಕೊಳ್ಳಬೇಕು ಎಂದು ಶಿಲ್ಪಾ ಶೆಟ್ಟಿ ಅವರು ಹೇಳಿದ್ದರು.

# ಮಹೇಶ್ ಬಾಬುಗೆ ತಂದೆಯಾದ ಸ್ಟಾರ್ ನಟ

ಎಸ್‌ಎಸ್ ರಾಜಮೌಳಿ ಸಿನಿಮಾನಲ್ಲಿ ನಟಿಸಲು ಹಲವು ನಟ-ನಟಿಯರು ತುದಿಗಾಲಲ್ಲಿ ಕಾಯುತ್ತಿರುತ್ತಾರೆ. ಆದರೆ ರಾಜಮೌಳಿಯ ಸಿನಿಮಾದಲ್ಲಿ ನಟಿಸಲು ಬಾಲಿವುಡ್ ನಟ ನಾನಾ ಪಾಟೇಕರ್ ನೋ ಎಂದಿದ್ದಾರೆ. ಆದರೆ ಅದೇ ಪಾತ್ರದಲ್ಲಿ ನಟಿಸಲು ದಕ್ಷಿಣ ಭಾರತದ ಸ್ಟಾರ್ ನಟರೊಬ್ಬರು ಎಸ್ ಹೇಳಿದ್ದಾರೆ. ಎಸ್‌ಎಸ್ ರಾಜಮೌಳಿ ಸಿನಿಮಾನಲ್ಲಿ ನಟಿಸಲು ನಟರು ಸಾಲುಗಟ್ಟಿ ನಿಂತಿದ್ದಾರೆ. ಅವರ ಸಿನಿಮಾನಲ್ಲಿ ಅವಕಾಶ ಸಿಕ್ಕರೆ ಸಾಕು, ಸಂಭಾವನೆಯೂ ಸಹ ಬೇಡ ಎಂದುಕೊಳ್ಳುತ್ತಿರುವ ನಟ-ನಟಿಯರು ಅದೆಷ್ಟೋ ಮಂದಿ ಇದ್ದಾರೆ. ರಾಜಮೌಳಿ ಸಿನಿಮಾನಲ್ಲಿ ಸಣ್ಣ ಪಾತ್ರದಲ್ಲಿ ಕಾಣಿಸಿಕೊಂಡರೂ ಸಹ ವಿಶ್ವಮಟ್ಟದಲ್ಲಿ ಗುರುತು ಸಿಗುತ್ತದೆ ಹಾಗಾಗಿಯೇ ನಟ-ನಟಿಯರು ಅವರ ಸಿನಿಮಾನಲ್ಲಿ ನಟಿಸಲು ತುದಿಗಾಲಲ್ಲಿರುತ್ತಾರೆ. ಆದರೆ ಬಾಲಿವುಡ್‌ನ ಹಿರಿಯ ನಟರೊಬ್ಬರು ರಾಜಮೌಳಿ ಸಿನಿಮಾನಲ್ಲಿ ನಟಿಸಲು ನೋ ಎಂದಿದ್ದಾರೆ. ಆದರೆ ದಕ್ಷಿಣ ಭಾರತದ ಸ್ಟಾರ್ ನಟ ಎಸ್ ಹೇಳಿದ್ದಾರೆ.



**ವಿಲನ್ ಪಾತ್ರಗಳಲ್ಲಿ ನಟಿಸುತ್ತಿರುವ ಮಾಧವನ್**

ಮಹೇಶ್ ಬಾಬು ನಾಯಕ ನಟನ ಪಾತ್ರದಲ್ಲಿ ನಟಿಸುತ್ತಿರುವ ಸಿನಿಮಾವನ್ನು ರಾಜಮೌಳಿ ನಿರ್ದೇಶನ ಮಾಡುತ್ತಿದ್ದು, ಸಿನಿಮಾನಲ್ಲಿ ಮಹೇಶ್ ಬಾಬು ತಂದೆಯ ಪಾತ್ರದಲ್ಲಿ ನಟಿಸುವಂತೆ ಬಾಲಿವುಡ್ ನಟ ನಾನಾ ಪಟೇಕರ್ ಅವರನ್ನು ಕೇಳಿದ್ದರಂತೆ. ಖುದ್ದಾಗಿ ಪುಣೆಗೆ ಹೋಗಿ ಅಲ್ಲಿ ನಾನಾ ಪಾಟೇಕರ್‌ಗೆ ಕತೆ ಹೇಳಿದ್ದಾರೆ. 20 ಕೋಟಿ ರೂಪಾಯಿ ಸಂಭಾವನೆ ಕೊಡುವುದಾಗಿಯೂ ಹೇಳಿದ್ದಾರೆ. ಆದರೆ ನಾನಾ ಪಾಟೇಕರ್ ನೋ ಎಂದಿದ್ದಾರೆ.

ಆದರೆ ಇದೀಗ ಅದೇ ಪಾತ್ರ ದಕ್ಷಿಣ ಭಾರತದ ಸ್ಟಾರ್ ನಟನ ಪಾಲಾಗಿದೆ ಎನ್ನಲಾಗುತ್ತಿದೆ. ತಮಿಳು ಚಿತ್ರರಂಗದ ಸ್ಟಾರ್ ನಟ, ಇತ್ತೀಚೆಗೆ ಬಾಲಿವುಡ್‌ನಲ್ಲೂ ಒಂದರ ಹಿಂದೊಂದರಂತೆ ವಿಲನ್ ಪಾತ್ರಗಳಲ್ಲಿ ನಟಿಸುತ್ತಿರುವ ಮಾಧವನ್ ಅವರು ಇದೀಗ ರಾಜಮೌಳಿ-ಮಹೇಶ್ ಬಾಬು ಸಿನಿಮಾನಲ್ಲಿ ನಟಿಸಲಿದ್ದಾರೆ ಎನ್ನಲಾಗುತ್ತಿದೆ. ನಾನಾ ಪಾಟೇಕರ್ ಅವರು ನೋ ಹೇಳಿದ ಪಾತ್ರದಲ್ಲಿಯೇ ಮಾಧವನ್ ಅವರು ನಟಿಸಲಿದ್ದಾರೆ ಎನ್ನಲಾಗುತ್ತಿದೆ. ಆರ್ ಮಾಧವನ್ ಈಗ ತಾವು ಮಾಡುತ್ತಿರುವುದಕ್ಕಿಂತಲೂ ಹಿರಿಯ ವ್ಯಕ್ತಿಯ ಪಾತ್ರವನ್ನು ರಾಜಮೌಳಿ ಸಿನಿಮಾನಲ್ಲಿ ನಿರ್ವಹಿಸಿದೆ.

# ಮುಸುಕು ಧರಿಸಿ ವಿಮರ್ಶೆ ಕೇಳಿದ ಸ್ಟಾರ್ ನಟ



**ಫರ್ಸ್ ಡೇ ಫಸ್ಟ್ ಡೇ ರಿವ್ಯೂ**

ಸಿನಿಮಾ ನಟರಿಗೆ ತಮ್ಮ ಸಿನಿಮಾದ ಬಗ್ಗೆ ಜನ ಏನೆಂದುಕೊಳ್ಳುತ್ತಿದ್ದಾರೆ ಎಂಬುದು ಬಹುತೇಕ ಸಂದರ್ಭದಲ್ಲಿ ಗೊತ್ತಾಗುವುದೇ ಇಲ್ಲ.

ಆನ್‌ಲೈನ್ ಸಿನಿಮಾ ವಿಮರ್ಶೆ, ನಿರ್ದೇಶಕ, ನಿರ್ಮಾಪಕರು ಹೇಳುವುದನ್ನೇ ಅಂತಿಮ ಎಂದುಕೊಂಡಿರುತ್ತಾರೆ. ಇದೀಗ ಸ್ಟಾರ್ ನಟನೊಬ್ಬ ಮುಸುಕು ಹಾಕಿಕೊಂಡು ಚಿತ್ರಮಂದಿರಗಳ ಬಳಿ ಹೋಗಿ ತಮ್ಮ ಸಿನಿಮಾ ವಿಮರ್ಶೆಯನ್ನು ಜನರಿಂದ ತಾವೇ ಪಡೆದಿದ್ದಾರೆ. ಸಿನಿಮಾ ನಟರಿಗೆ ತಮ್ಮ ಸಿನಿಮಾ ಬಿಡುಗಡೆ ಆದ ಮೇಲೆ ಜನರಿಗೆ ಇಷ್ಟವಾಗಿದೆಯೇ ಇಲ್ಲವೇ, ಇಷ್ಟವಾದರೆ ಯಾವ ಅಂಶಗಳು ಇಷ್ಟವಾಗಿವೆ, ಯಾವುದು ಇಷ್ಟವಾಗಿಲ್ಲ ಎಂಬುದೇ ತಿಳಿಯುವುದಿಲ್ಲ. ನಿರ್ದೇಶಕರು, ನಿರ್ಮಾಪಕರು ಹೇಳಿದ್ದನ್ನು ಕೇಳುವುದು ಬಿಟ್ಟರೆ ಜನರ ನಿಜವಾದ ಅಭಿಪ್ರಾಯ ತಿಳಿಯುವುದೇ ಇಲ್ಲ. ಎಷ್ಟೋ ಬಾರಿ ನಟರು, ತಮ್ಮ ಸಿನಿಮಾ ಸೂಪರ್ ಹಿಟ್ ಎಂದುಕೊಂಡಿರುತ್ತಾರೆ ಆದರೆ ಜನರಿಗೆ ಸಿನಿಮಾ ಇಷ್ಟ ಆಗಿರುವುದೇ ಇಲ್ಲ. ಇದೀಗ ಸೂಪರ್ ಸ್ಟಾರ್ ನಟರೊಬ್ಬರು ಮುಸುಕು ಧರಿಸಿಕೊಂಡು ತಮ್ಮ ಸಿನಿಮಾ ಪ್ರದರ್ಶನವಾಗುತ್ತಿರುವ ಚಿತ್ರಮಂದಿರಕ್ಕೆ ಹೋಗಿ ಪ್ರೇಕ್ಷಕರಿಂದ ನೇರವಾಗಿ ಅಭಿಪ್ರಾಯ ತಿಳಿದುಕೊಂಡಿದ್ದಾರೆ. ಸಿನಿಮಾ ಬಿಡುಗಡೆ ಆದ ಮೊದಲ ದಿನ ಪ್ರೇಕ್ಷಕರು ಚಿತ್ರಮಂದಿರದಿಂದ ಹೊರಗೆ ಬಂದಾಗ ಅವರ ಮುಖಕ್ಕೆ ಕ್ಯಾಮೆರಾ ಹಿಡಿದು ಸಿನಿಮಾ ವಿಮರ್ಶೆ ಪಡೆಯುವುದು ಇತ್ತೀಚೆಗೆ ಸಾಮಾನ್ಯ. ಯೂಟ್ಯೂಬ್ ಚಾನೆಲ್‌ಗಳು ಹೆಚ್ಚಾದ ಬಳಿಕ ಈ ಫರ್ಸ್ ಡೇ ಫಸ್ಟ್ ಡೇ ರಿವ್ಯೂಗಳು ಹೆಚ್ಚಾಗಿವೆ. ಮೊದಲ ಶೋ ನೋಡಿದ ಜನರು ನೀಡುವ ವಿಮರ್ಶೆಯನ್ನು ಆಧರಿಸಿ ಸಿನಿಮಾ ಹಿಟ್ ಆಗಲಿದೆಯೇ ಅಥವಾ ಫ್ಲಾಪ್ ಆಗಲಿದೆಯೇ ಎಂದು ಲೆಕ್ಕ ಹಾಕಬಹುದು.

# ಗಮನ ಸೆಳೆಯುತ್ತಿದೆ ಕರಿಕಾಡ

ಐಟಿ ಕ್ಷೇತ್ರದಲ್ಲಿ ಕೆಲಸ ಮಾಡುತ್ತಾ, ಒಳ್ಳೆಯ ಸಿನಿಮಾ ನೀಡಬೇಕು, ತನ್ನ ಅಭಿನಯ ಕಲೆಯನ್ನು ತೆರೆಯ ಮೇಲೆ ತೋರಿಸಬೇಕು ಎಂದು ಕನಸು ಹೊತ್ತು ನಟರಾಜ್ ಅವರು 'ಕರಿಕಾಡ ಸಿನಿಮಾ ಮೂಲಕ ನಾಯಕನಾಗಿ, ಕತೆಗಾರನಾಗಿ ಕನ್ನಡ ಚಿತ್ರರಂಗಕ್ಕೆ ಎಂಟ್ರಿ ನೀಡುತ್ತಿದ್ದಾರೆ. ಈಗಾಗಲೇ ಟೈಟಲ್ ಟೀಸರ್ ಬಿಡುಗಡೆ ಮಾಡಲಾಗಿದ್ದು, ಟೀಸರ್ ಗಮನ ಸೆಳೆಯುವಂತಿದೆ. ಐಟಿ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ನಟರಾಜ್, ರಜೆ ಸಿಕ್ಕಾಗೆಲ್ಲ ನಟನೆ ಮಾಡಿ, ಬರೋಬ್ಬರಿ ಒಂದು ವರ್ಷ ತೆಗೆದುಕೊಂಡು ಸಿನಿಮಾ ಪೂರ್ಣಗೊಳಿಸಿದ್ದಾರೆ. ನಟರಾಜ್ ಅವರ ಸಿನಿಮಾ ಪ್ರಯತ್ನಕ್ಕೆ ಅವರ ಪತ್ನಿ ದೀಪ್ತಿ ದಾಮೋದರ್ ಬೆಂಬಲವಾಗಿ ನಿಂತಿದ್ದು, ಸಿನಿಮಾ ಮೇಲೆ ಹಣ ಹೂಡಿಕೆ ಮಾಡಿದ್ದಾರೆ. ಅವರು ಮಾತ್ರವೇ ಅಲ್ಲದೆ ಸ್ನೇಹಿತರಾದ ರವಿ ಸಹ ನಿರ್ಮಾಣ ಮಾಡಿದ್ದಾರೆ. ಕಿರುತೆರೆಯ ಅನೇಕ ರಿಯಾಲಿಟಿ ಶೋಗಳಲ್ಲಿ ಕೆಲಸ ಮಾಡಿದ ಅನುಭವ ಹೊಂದಿರುವ ಗಿಲ್ಲಿ ವೆಂಕಟೇಶ್ ಅವರು ಈ ಸಿನಿಮಾ ನಿರ್ದೇಶನ ಮಾಡಿದ್ದಾರೆ.

ಈ ಹಿಂದೆ 'ಹುಲಿಬೇಟೆ ಅನ್ನೋ ಸಿನಿಮಾದಲ್ಲಿ ಸಹ ನಿರ್ದೇಶನದ ಜೊತೆಗೆ ನೆಗೆಟಿವ್ ರೋಲ್ ಸಹ ಮಾಡಿದ್ದಾರೆ. 'ತಾಳಟ್ಟಿ ಅನ್ನೋ ಸಿನಿಮಾವನ್ನ ನಿರ್ದೇಶನ ಮಾಡಿರುವ ಗಿಲ್ಲಿ ವೆಂಕಟೇಶ್ 'ಕರಿಕಾಡ ಸಿನಿಮಾದ ಬಗ್ಗೆ ಭಾರಿ ನಿರೀಕ್ಷೆ ಇಟ್ಟಿದ್ದಾರೆ. ನಿರೀಕ್ಷಾ ಶೆಟ್ಟಿ ಅವರು ನಾಯಕಿಯಾಗಿ ನಟಿಸಿದ್ದಾರೆ. ಅತೀಶಯ್ ಜೈನ್ ಹಾಗೂ ಶಶಾಂಕ್ ಶೇಷಾಗಿರಿ ಅವರುಗಳು ಈ ಸಿನಿಮಾಕ್ಕೆ ಸಂಗೀತ ನೀಡಿದ್ದಾರೆ. ಕ್ಯಾಮರಾ ಕೆಲಸ ಮಾಡಿರುವುದು ಜೀವನ್ ಗೌಡ. ಎಡಿಟಿಂಗ್ ಜವಾಬ್ದಾರಿ ದೀಪಕ್ ಸಿ.ಎಸ್ ಅವರದ್ದು.



**ಸಿನಿಮಾದ ಬಗ್ಗೆ ಭಾರಿ ನಿರೀಕ್ಷೆ**

# ಈ ಬಾರಿಯ ಐಪಿಎಲ್‌ನಲ್ಲಿ ಬಿಸಿಸಿಐ ಗಳಿಸಿದ ಆದಾಯ ಎಷ್ಟು ಸಾವಿರ ಕೋಟಿ

ಜೂನ್ 3 ರಂದು ನಡೆದ ಐಪಿಎಲ್ 2025ರ ಫೈನಲ್ ಪಂದ್ಯ ಅಹಮದಾಬಾದ್‌ನ ನರೇಂದ್ರ ಮೋದಿ ಮೈದಾನದಲ್ಲಿ ನಡೆಯಿತು. ಈ ಫೈನಲ್‌ನಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು, ಪಂಜಾಬ್ ಕಿಂಗ್ಸ್ ತಂಡವನ್ನು ಆರು ರನ್‌ಗಳಿಂದ ಸೋಲಿಸುವ ಮೂಲಕ ಮೊದಲ ಬಾರಿಗೆ ಟ್ರೋಫಿಯನ್ನು ಗೆದ್ದುಕೊಂಡಿತು. ಇದರೊಂದಿಗೆ ಎರಡು ತಿಂಗಳಿಗಿಂತ ಹೆಚ್ಚು ಕಾಲ ನಡೆದ ಈ ಲೀಗ್‌ಗೆ ಅದ್ದೂರಿ ತೆರೆಬಿದ್ದಿತು. ಪ್ರಶಸ್ತಿ ವಿಜೇತರಿಗೆ ಬಿಸಿಸಿಐ ವತಿಯಿಂದ ಭರ್ಜರಿ ಬಹುಮಾನ ಕೂಡ ಸಿಕ್ಕಿತು. ಇದು ಮಾತ್ರವಲ್ಲದೆ ಈ ಸೀಸನ್‌ನಲ್ಲಿ ಎಲ್ಲಾ ತಂಡಗಳಿಗೂ ನಿರೀಕ್ಷೆಗೂ ಮೀರಿದ ಆದಾಯ ಸಿಕ್ಕಿದೆ. ಫ್ರಾಂಚೈಸಿಗಳ ಆದಾಯ ಒಂದೆಡೆಯಾದರೆ, ಇತ್ತ ಐಪಿಎಲ್ ಆಯೋಜಕ ಬಿಸಿಸಿಐಗೂ 20 ಸಾವಿರ ಕೋಟಿಗೂ ಅಧಿಕ ಆದಾಯ ಹರಿದುಬಂದಿದೆ.



**ಬಿಸಿಸಿಐನ ದೊಡ್ಡ ಆದಾಯದ ಮೂಲ**

ಐಪಿಎಲ್ ಆಯೋಜಕತ್ವದಿಂದ ಬಿಸಿಸಿಐಗೆ ಅತಿದೊಡ್ಡ ಆದಾಯದ ಮೂಲವೆಂದರೆ ಪ್ರಸಾರ ಶುಲ್ಕ. ಆ ಪ್ರಕಾರ 2025 ರ ಐಪಿಎಲ್ ಪ್ರಸಾರದ ಹಕ್ಕನ್ನು ಬಿಸಿಸಿಐ 9678 ಕೋಟಿ ರೂ.ಗಳಿಗೆ ಮಾರಾಟ ಮಾಡಿತ್ತು. ಅಲ್ಲದೆ ಒಂದು ಪಂದ್ಯದಿಂದ ಸಿಗುವ ಆದಾಯ ಸುಮಾರು 130.7 ಕೋಟಿ ರೂ. ಎಂದು ಹೇಳಲಾಗುತ್ತಿದೆ.

ಈ ಲೀಗ್‌ನ ಪ್ರಸಾರದ ಹಕ್ಕುಗಳನ್ನು ಸ್ಟಾರ್ ಸ್ಪೋರ್ಟ್ಸ್ ಸ್ವಾಧೀನಪಡಿಸಿಕೊಂಡರೆ, ಡಿಜಿಟಲ್ ಹಕ್ಕುಗಳನ್ನು ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ ಒಡೆತನದ ವಯಾಕಾಮ್ ಸ್ವಾಧೀನಪಡಿಸಿಕೊಂಡಿತ್ತು.

'ಎಕನಾಮಿಕ್ ಟೈಮ್ಸ್ ವರದಿಯ ಪ್ರಕಾರ, ಐಪಿಎಲ್ 2025 ರಲ್ಲಿ ಜಾಹೀರಾತುದಾರರ ಸಂಖ್ಯೆ ಶೇ. 27 ರಷ್ಟು ಹೆಚ್ಚಾಗಿ 105 ಕ್ಕೆ ತಲುಪಿತು. ಕಳೆದ ವರ್ಷ, ಟಾಟಾ ಗ್ರೂಪ್ ಐಪಿಎಲ್‌ನ ಶೀರ್ಷಿಕೆ ಪ್ರಾಯೋಜಕತ್ವವನ್ನು ಮುಂದಿನ ಐದು ವರ್ಷಗಳವರೆಗೆ 2500 ಕೋಟಿ ರೂ.ಗಳಿಗೆ ಒಪ್ಪಂದ ಮಾಡಿಕೊಂಡಿತ್ತು. ಈ ಒಪ್ಪಂದದ ಪ್ರಕಾರ ಪ್ರತಿ ಆವೃತ್ತಿಗೆ ಟಾಟಾ ಗ್ರೂಪ್ ಐಪಿಎಲ್‌ನ ಶೀರ್ಷಿಕೆ ಪ್ರಾಯೋಜಕತ್ವಕ್ಕೆ 500 ಕೋಟಿ ರೂ. ನೀಡಲಿದೆ. ಇದರ ಹೊರತಾಗಿ, ಆದಾಯ ಹಂಚಿಕೆ ಮಾದರಿಯ ಆಧಾರದ ಮೇಲೆ ಬಿಸಿಸಿಐ ಅನೇಕ ಕಂಪನಿಗಳಿಂದ ಹಣವನ್ನು ಪಡೆಯುತ್ತದೆ. ಬಿಸಿಸಿಐ ಕೇಂದ್ರ, ಪ್ರಾಯೋಜಕತ್ವ ಮತ್ತು ಟಿಕೆಟ್ ಆದಾಯದ 20 ಪ್ರತಿಶತ ಮತ್ತು ಪರವಾನಗಿ ಆದಾಯದ 12.5 ಪ್ರತಿಶತವನ್ನು ಪ್ರತಿ ತಂಡದಿಂದ ಪಡೆಯುತ್ತದೆ. ಬಿಸಿಸಿಐ ಪ್ರತಿ ತಂಡಕ್ಕೂ ಸ್ಥಿರ ಕೇಂದ್ರ ಆದಾಯ ಮತ್ತು ಲೀಗ್‌ನ ಸ್ಥಾನದ ಆಧಾರದ ಮೇಲೆ ವೇರಿಯಬಲ್ ಆದಾಯವನ್ನು ಒದಗಿಸುತ್ತದೆ.

# ಆಂಗ್ಲರ ನಾಡಿನಲ್ಲಿ ಸಮರಾಭ್ಯಾಸ ಶುರು

ಜೂನ್ 20 ರಿಂದ ಇಂಗ್ಲೆಂಡ್ ವಿರುದ್ಧ ಆರಂಭವಾಗಲಿರುವ 5 ಟೆಸ್ಟ್ ಪಂದ್ಯಗಳ ಸರಣಿಯೊಂದಿಗೆ ಟೀಂ ಇಂಡಿಯಾದ ನಾಲ್ಕನೇ ಆವೃತ್ತಿಯ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಕೂಡ ಆರಂಭವಾಗಲಿದೆ. ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ಟೆಸ್ಟ್ ಕ್ರಿಕೆಟ್‌ನಿಂದ ನಿವೃತ್ತರಾದ ನಂತರ, ಶುಭ್‌ಮನ್ ಗಿಲ್ ಅವರ ನಾಯಕತ್ವದಲ್ಲಿ ಟೀಂ ಇಂಡಿಯಾ ಹೇಗೆ ಪ್ರದರ್ಶನ ನೀಡುತ್ತದೆ ಎಂಬುದನ್ನು ನೋಡಲು ಎಲ್ಲಾರೂ ಕಾತುರರಾಗಿದ್ದಾರೆ. ಈಗಾಗಲೇ ಭಾರತ ಯುವ ಪಡೆ ಇಂಗ್ಲೆಂಡ್‌ಗೆ ತೆರಳಿದ್ದು, ತರಬೇತಿಯನ್ನು ಸಹ ಪ್ರಾರಂಭಿಸಿದೆ. ಜೂನ್ 6 ರಂದು ಲಂಡನ್ ತಲುಪಿದ ಭಾರತ ತಂಡದ ಆಟಗಾರರು ಲಂಡನ್‌ನ ಲಾರ್ಡ್ಸ್ ಕ್ರಿಕೆಟ್ ಮೈದಾನದ ಒಳಾಂಗಣ ತರಬೇತಿ ಕೇಂದ್ರದಲ್ಲಿ ಅಭ್ಯಾಸ ಆರಂಭಿಸಿದ್ದಾರೆ. ಈ ವೇಳೆ ತಂಡದ ಅನುಭವಿ ವೇಗದ ಬೌಲರ್ ಜಸ್ಪ್ರೀತ್ ಬುಮ್ರಾ, ಬೌಲಿಂಗ್ ಕೋಚ್ ಮೋರ್ನೆ ಮಾರ್ಕೆಲ್ ಅವರೊಂದಿಗೆ ದೀರ್ಘಕಾಲ ಮಾತನಾಡುತ್ತಿರುವುದು ಕಂಡುಬಂತು. ಈ ಪ್ರವಾಸದಲ್ಲಿ ಬುಮ್ರಾ ಅವರ ಪ್ರದರ್ಶನವು ಟೀಂ ಇಂಡಿಯಾಕ್ಕೆ ಬಹಳ ಮುಖ್ಯವಾಗಲಿದೆ. ಬುಮ್ರಾ ಅವರಲ್ಲದೆ, ಈ ಪ್ರವಾಸದಲ್ಲಿ ಭಾರತೀಯ ತಂಡವು ಮೊಹಮ್ಮದ್ ಸಿರಾಜ್, ಪ್ರಸಿದ್ಧ್ ಕೃಷ್ಣ ಮತ್ತು ಅರ್ಶ್‌ದೀಪ್ ಸಿಂಗ್ ಅವರಂತಹ ವೇಗದ ಬೌಲರ್‌ಗಳನ್ನು ಹೊಂದಿರುತ್ತದೆ.

**ಲಾರ್ಡ್ಸ್ ತರಬೇತಿ ಕೇಂದ್ರದಲ್ಲಿ ಅಭ್ಯಾಸ**

ಭಾರತ ತಂಡವು ಜೂನ್ 20 ರಂದು ಹೆಡಿಂಗ್ಲಿ ಮೈದಾನದಲ್ಲಿ ಟೆಸ್ಟ್ ಸರಣಿಯ ಮೊದಲ ಪಂದ್ಯವನ್ನು ಆಡಲಿದೆ. ಇದರ ನಂತರ, ಟೀಂ ಇಂಡಿಯಾ ಜುಲೈ 2 ರಿಂದ ಎಡ್ಜ್‌ಬಾಸ್ಟನ್ ಮೈದಾನದಲ್ಲಿ ಎರಡನೇ ಟೆಸ್ಟ್ ಪಂದ್ಯವನ್ನು ಆಡಲಿದೆ. ಮೂರನೇ ಟೆಸ್ಟ್ ಪಂದ್ಯ ಜುಲೈ 10 ರಿಂದ ಲಾರ್ಡ್ಸ್ ಮೈದಾನದಲ್ಲಿ ನಡೆಯಲಿದೆ. ಅದೇ ಸಮಯದಲ್ಲಿ, ನಾಲ್ಕನೇ ಟೆಸ್ಟ್ ಪಂದ್ಯ ಜುಲೈ 23 ರಿಂದ ಮ್ಯಾಂಚೆಸ್ಟರ್ ಮೈದಾನದಲ್ಲಿ ನಡೆಯಲಿದ್ದು, ಈ ಟೆಸ್ಟ್ ಸರಣಿಯು ಜುಲೈ 31 ರಿಂದ ಲಂಡನ್‌ನ ಓವಲ್ ಮೈದಾನದಲ್ಲಿ ನಡೆಯಲಿರುವ ಕೊನೆಯ ಟೆಸ್ಟ್ ಪಂದ್ಯದೊಂದಿಗೆ ಕೊನೆಗೊಳ್ಳಲಿದೆ.



# ಆರ್‌ಸಿಬಿ ಅವಕಾಶ ನೀಡದ ಬೌಲರ್‌ಗೆ ಹ್ಯಾಟ್ರಿಕ್ ವಿಕೆಟ್

ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ 18 ವರ್ಷಗಳ ನಂತರ ಇಂಡಿಯನ್ ಪ್ರೀಮಿಯರ್ ಲೀಗ್ ಪ್ರಶಸ್ತಿ ಗೆಲ್ಲುವ ಮೂಲಕ ಇತಿಹಾಸ ನಿರ್ಮಿಸಿದೆ. ಫೈನಲ್‌ನಲ್ಲಿ ಪಂಜಾಬ್ ಕಿಂಗ್ಸ್ ತಂಡವನ್ನು 6 ವಿಕೆಟ್‌ಗಳಿಂದ ಸೋಲಿಸಿದ ಆರ್‌ಸಿಬಿ ಚೊಚ್ಚಲ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿತು. ಆದರೆ ಆರ್‌ಸಿಬಿ ತಂಡದಲ್ಲಿದ್ದರೂ ಒಂದೇ ಒಂದು ಅವಕಾಶ ಸಿಗದ ಬೌಲರ್‌ವೊಬ್ಬರು ಇದೀಗ ತಮಿಳುನಾಡು ಪ್ರೀಮಿಯರ್ ಲೀಗ್ 2025 ರಲ್ಲಿ ಸದ್ದು ಮಾಡುತ್ತಿದ್ದಾರೆ. ಭಾರತದ ಯುವ ವೇಗದ ಬೌಲರ್ ಸೋನು ಯಾದವ್ ಎರಡು ವರ್ಷಗಳ ಹಿಂದೆ ಆರ್‌ಸಿಬಿ ತಂಡದಲ್ಲಿದ್ದರು. ಆದರೆ ಅವರಿಗೆ ಒಂದೇ ಒಂದು ಪಂದ್ಯವನ್ನು ಆಡಲು ಅವಕಾಶ ಸಿಗಲಿಲ್ಲ. ಇದಾದ ನಂತರ ಅವರನ್ನು ತಂಡದಿಂದ ಕೈಬಿಡಲಾಯಿತು. ಇದೀಗ ಅವರು ಹ್ಯಾಟ್ರಿಕ್ ಪಡೆಯುವ ಮೂಲಕ ಎಲ್ಲಾರನ್ನೂ ಅಚ್ಚರಿಗೊಳಿಸಿದ್ದಾರೆ. ತನ್ನ ಅಧಿಕೃತ ಇನ್‌ಸ್ಟಾಗ್ರಾಮ್ ಪುಟದಲ್ಲಿ ಹ್ಯಾಟ್ರಿಕ್ ಪಡೆದ ವಿಡಿಯೋವನ್ನು ಅಪ್‌ಲೋಡ್ ಮಾಡಿದೆ.



**ಅವಕಾಶ ವಂಚಿತ ಸೋನು ಯಾದವ್** 2023 ರಲ್ಲಿ, ಸೋನು ಯಾದವ್ ಅವರನ್ನು ಆರ್‌ಸಿಬಿ ತಂಡಕ್ಕೆ ಆಯ್ಕೆ ಮಾಡಲಾಗಿತ್ತು. ವೇಗದ ಬೌಲಿಂಗ್ ಆಲ್‌ರೌಂಡರ್ ಆಗಿರುವ ಸೋನು ಯಾದವ್‌ಗೆ ಐಪಿಎಲ್‌ನಲ್ಲಿ ಪಾದಾರ್ಪಣೆ ಮಾಡಲು ಅವಕಾಶ ಸಿಗದಿದ್ದರೂ, ಉತ್ತರ ಪ್ರದೇಶದ ಗೋರಖ್‌ಪುರದ ಈ ಆಟಗಾರ ಇದರಿಂದ ನಿರಾಶೆಗೊಳ್ಳಲಿಲ್ಲ. ಇದೀಗ ಅವರು ತಮಿಳುನಾಡು ಪ್ರೀಮಿಯರ್ ಲೀಗ್ 2025 ರಲ್ಲಿ ಅದ್ಭುತ ಪ್ರದರ್ಶನ ನೀಡುತ್ತಿದ್ದಾರೆ. ಈ ಸೀಸನ್‌ನ ನಾಲ್ಕನೇ ಪಂದ್ಯದಲ್ಲಿ ನೆಲ್ಲೈ ರಾಯಲ್ ಕಿಂಗ್ಸ್ ಪರ ಆಡುವಾಗ ಅವರು ಹ್ಯಾಟ್ರಿಕ್ ಪಡೆದರು. ಇದಲ್ಲದೆ, ಈ ಪಂದ್ಯದಲ್ಲಿ ಸೋನು 8 ಎಸೆತಗಳಲ್ಲಿ ಅಜೇಯ 10 ರನ್ ಬಾರಿಸಿದರು.

**ಹ್ಯಾಟ್ರಿಕ್ ಪಡೆದ ಆರನೇ ಆಟಗಾರ:** ನೆಲ್ಲೈ ರಾಯಲ್ ಕಿಂಗ್ಸ್ ತಂಡದ ಆಲ್‌ರೌಂಡರ್ ಸೋನು ಯಾದವ್ ತ್ರಿಚಿ ಗ್ರ್ಯಾಂಡ್ ವಿರುದ್ಧದ ಪಂದ್ಯದಲ್ಲಿ ಕೊನೆಯ ಓವರ್ ಬೌಲ್ ಮಾಡಿ ಈ ಓವರ್‌ನ ಮೂರನೇ, ನಾಲ್ಕನೇ ಮತ್ತು ಐದನೇ ಎಸೆತಗಳಲ್ಲಿ ವಿಕೆಟ್ ಪಡೆಯುವ ಮೂಲಕ ಇತಿಹಾಸ ನಿರ್ಮಿಸಿದರು.

ಈ ಮೂಲಕ ಟಿಎನ್‌ಪಿಎಲ್‌ನಲ್ಲಿ ಹ್ಯಾಟ್ರಿಕ್ ಪಡೆದ ಆರ ನೇ ಆಟಗಾರ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಈ ಪಂದ್ಯದಲ್ಲಿ ಸೋನು ಯಾದವ್ 3 ಓವರ್‌ಗಳಲ್ಲಿ 22 ರನ್‌ಗಳನ್ನು ನೀಡಿ ಮೂರು ವಿಕೆಟ್ ಕಬಳಿಸಿದರು. ಅವರ ಅದ್ಭುತ ಬೌಲಿಂಗ್‌ನಿಂದಾಗಿ, ತ್ರಿಚಿ ಗ್ರ್ಯಾಂಡ್ ತಂಡ 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 157 ರನ್‌ಗಳಿಸಲಷ್ಟೇ ಶಕ್ತವಾಯಿತು. ಇದಕ್ಕೆ ಉತ್ತರವಾಗಿ, ನೆಲ್ಲೈ ರಾಯಲ್ ಕಿಂಗ್ಸ್ ತಂಡವು 19.2 ಓವರ್‌ಗಳಲ್ಲಿ 5 ವಿಕೆಟ್‌ಗಳನ್ನು ಕಳೆದುಕೊಂಡು ಗೆಲುವಿನ ಗುರಿ ತಲುಪಿತು. ಈ ಗೆಲುವಿನೊಂದಿಗೆ, ನೆಲ್ಲೈ ರಾಯಲ್ ಕಿಂಗ್ಸ್ ಈ ಸೀಸನ್‌ನಲ್ಲಿ ಗೆಲುವಿನ ಆರಂಭ ಪಡೆದುಕೊಂಡಿದೆ.

# ಇಂಗ್ಲೆಂಡ್ ಟೆಸ್ಟ್ ಸರಣಿ ಭಾರತದ ಈ 3 ಆಟಗಾರರಿಗೆ ಕೊನೆಯ ಅವಕಾಶ: ಫೇಲ್ ಆದ್ರೆ

ಜೂನ್ 20 ರಂದು ಭಾರತ ಮತ್ತು ಇಂಗ್ಲೆಂಡ್ ನಡುವೆ ಪ್ರಾರಂಭವಾಗುವ ಟೆಸ್ಟ್ ಸರಣಿಯು ಅನೇಕ ಆಟಗಾರರ ವೃತ್ತಿಜೀವನಕ್ಕೆ ನಿರ್ಣಾಯಕವಾಗಬಹುದು. ಈ ಸರಣಿಯಲ್ಲಿ, ಬಿಸಿಸಿಐ ಅನೇಕ ಯುವ ಆಟಗಾರರಿಗೆ ಅವಕಾಶ ನೀಡಿದೆ. ಅದೇ ಸಮಯದಲ್ಲಿ, ಬಹಳ ಸಮಯದ ನಂತರ ಟೀಮ್ ಇಂಡಿಯಾಕ್ಕೆ ಮರಳಿರುವ ಕೆಲವು ಆಟಗಾರರಿದ್ದಾರೆ. ಈ ಹೈ-ವೋಲ್ಟೇಜ್ ಸರಣಿಯಲ್ಲಿ, ಕರುಣ್ ನಾಯರ್, ಶಾರ್ದೂಲ್ ಠಾಕೂರ್ ಮತ್ತು ಪ್ರಸಿದ್ಧ್ ಕೃಷ್ಣ ಅವರು ತಮ್ಮನ್ನು ತಾವು ಸಾಬೀತುಪಡಿಸಲು ಬಹುಶಃ ಇದು ಕೊನೆಯ ಅವಕಾಶ ಆಗಿದೆ. ಈ ಮೂವರು ಆಟಗಾರರು ನಿರೀಕ್ಷೆಯಂತೆ ಪ್ರದರ್ಶನ ನೀಡಲು ಸಾಧ್ಯವಾಗದಿದ್ದರೆ, ಅವರ ಟೆಸ್ಟ್ ವೃತ್ತಿಜೀವನ ಶಾಶ್ವತವಾಗಿ ಕೊನೆಗೊಳ್ಳಬಹುದು.



**ಕರುಣ್ ನಾಯರ್:** ಮೊದಲನೆಯದಾಗಿ, ಕರುಣ್ ನಾಯರ್ ಬಗ್ಗೆ ಹೇಳುವುದಾದರೆ , ಅವರು 2016 ರಲ್ಲಿ ತ್ರಿಶತಕ ಗಳಿಸುವ ಮೂಲಕ ಎಲ್ಲಾರ ಗಮನ ಸೆಳೆದರು. ಆದರೆ ಇದಾದ ನಂತರ ಅವರ ಪ್ರದರ್ಶನ ಕ್ಷೀಣಿಸುತ್ತಲೇ ಇತ್ತು. ಹೀಗಾಗಿ ಅವರನ್ನು ತಂಡದಿಂದ ಕೈಬಿಡಲಾಯಿತು. ಆದಾಗ್ಯೂ, ಇತ್ತೀಚಿನ ದಿನಗಳಲ್ಲಿ, ದೇಶೀಯ ಕ್ರಿಕೆಟ್ ಮತ್ತು ಐಪಿಎಲ್‌ನಲ್ಲಿ ಉತ್ತಮ ಪ್ರದರ್ಶನ ನೀಡಿದ ನಂತರ, ಅವರಿಗೆ ಮತ್ತೆ ಅವಕಾಶ ಸಿಕ್ಕಿದೆ. ಈಗ ಅವರಿಗೆ ಬಹುತೇಕ 32 ವರ್ಷ ವಯಸ್ಸಾಗಿರುವುದರಿಂದ, ಆಯ್ಕೆದಾರರು ಕೊನೆಯ ಅವಕಾಶ ನೀಡಿದ್ದಾರೆ. ಈ ಸರಣಿಯಲ್ಲಿ ಕರುಣ್ ನಾಯರ್ ಬ್ಯಾಟಿಂಗ್‌ನಲ್ಲಿ ವಿಶೇಷವಾದದ್ದನ್ನು ಮಾಡಲು ಸಾಧ್ಯವಾಗದಿದ್ದರೆ, ಇದು ಅವರ ವೃತ್ತಿ ಜೀವನದ ಕೊನೆಯ ಟೆಸ್ಟ್ ಆಗುವುದು ಖಚಿತ.

**ಭಾರತ ಟೆಸ್ಟ್ ತಂಡದಲ್ಲಿ ಜುರೇಲ್‌ಗೆ ಸ್ಥಾನ**

**ಫೈನಲ್ ನಂತರ ಶಾರ್ದೂಲ್‌ಗೆ ಅವಕಾಶ:** ಶಾರ್ದೂಲ್ ಠಾಕೂರ್ ಬಗ್ಗೆ ಹೇಳುವುದಾದರೆ, ಅವರು ಆಸ್ಟ್ರೇಲಿಯಾ ಮತ್ತು ಇಂಗ್ಲೆಂಡ್ ವಿರುದ್ಧ ಟೆಸ್ಟ್ ಕ್ರಿಕೆಟ್‌ನಲ್ಲಿ ಕೆಲವು ಸ್ಮರಣೀಯ ಇನ್ನಿಂಗ್ಸ್ ಮತ್ತು ಸ್ಪೆಲ್‌ಗಳನ್ನು ಮಾಡಿದ್ದಾರೆ. ಆದರೆ ಕಳೆದ ಒಂದು ವರ್ಷದಿಂದ ಅವರ ಫಾರ್ಮ್ ನಿರಂತರವಾಗಿ ಕುಸಿಯುತ್ತಿದೆ. ಟೀಮ್ ಇಂಡಿಯಾದಿಂದ ಪದೇ ಪದೇ ಹೊರಬೀಳುತ್ತಿದ್ದಾರೆ. ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಫೈನಲ್ ನಂತರ ಅವರಿಗೆ ಮತ್ತೆ ಅವಕಾಶ ಸಿಕ್ಕಿದೆ, ಆದರೆ ಇಂಗ್ಲೆಂಡ್ ವಿರುದ್ಧ ಅವರು ಪರಿಣಾಮಕಾರಿ ಎಂದು ಸಾಬೀತುಪಡಿಸದಿದ್ದರೆ, ಇದು ಅವರಿಗೆ ಕೊನೆಯ ಟೆಸ್ಟ್ ಆಗಲಿದೆ.

**ಪ್ರಸಿದ್ಧ್ ಕೃಷ್ಣ ಗಾಯದ ಕಾರಣ ವಿಫಲ:** ಪ್ರಸಿದ್ಧ್ ಕೃಷ್ಣ ಅವರನ್ನು ಇಂಗ್ಲೆಂಡ್ ವಿರುದ್ಧದ ಟೆಸ್ಟ್ ತಂಡದಲ್ಲಿ ಸೇರಿಸಿಕೊಳ್ಳಲಾಗಿದೆ. ಆದರೆ ಇತ್ತೀಚೆಗೆ ಸೀಮಿತ ಓವರ್‌ಗಳಲ್ಲಿ ಅವರು ನಿರಾಶಾದಾಯಕ ಪ್ರದರ್ಶನ ನೀಡಿದ್ದಾರೆ. ವಿಶೇಷವಾಗಿ ಗಾಯದಿಂದ ಚೇತರಿಸಿಕೊಂಡು ಮರಳಿದ ನಂತರ, ಅವರು ತಮ್ಮ ಲಯ ಕಂಡುಕೊಳ್ಳಲು ಕಷ್ಟಪಡುತ್ತಿದ್ದಾರೆ. ಐಪಿಎಲ್‌ನಲ್ಲಿ ಅವರ ಪ್ರದರ್ಶನ ಉತ್ತಮವಾಗಿದ್ದರೂ, ಕೆಂಪು ಚೆಂಡಿನೊಂದಿಗೆ ಹೇಗೆ ಕಾರ್ಯನಿರ್ವಹಿಸುತ್ತಾರೆ ಎಂಬುದನ್ನು ನೋಡಲು ಆಸಕ್ತಿದಾಯಕವಾಗಿದೆ. ಇಂಗ್ಲೆಂಡ್ ವಿರುದ್ಧ ಅವಕಾಶ ಸಿಕ್ಕರೆ ಮತ್ತು ಇದರಲ್ಲಿ ವಿಫಲವಾದರೆ ಪ್ರಸಿದ್ಧ್ ಮುಂದೆ ಟೆಸ್ಟ್ ತಂಡದಲ್ಲಿ ತಮ್ಮ ಸ್ಥಾನವನ್ನು ಉಳಿಸಿಕೊಳ್ಳುವುದು ಕಷ್ಟ.

ಈ ಸರಣಿಯನ್ನು ಈ ಮೂವರು ಆಟಗಾರರಿಗೆ ಮಾಡು ಇಲ್ಲವೇ ಮಡಿ ಪರಿಸ್ಥಿತಿ ಎಂದು ಕರೆಯಬಹುದು. ಭಾರತೀಯ ಟೆಸ್ಟ್ ತಂಡವು ಯುವ ಆಟಗಾರರಿಂದ ತುಂಬಿದ್ದು, ಸ್ಥಿರ ಪ್ರದರ್ಶನ ನೀಡದ ಆಟಗಾರರಿಗೆ ಇಲ್ಲಿ ಸ್ಥಾನ ಸಿಗುವುದು ಕಷ್ಟ.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966